ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ

ಪಿಎಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ವಿಶ್ವನಾಥ ಎನ್.

ಮಾರ್ಗದರ್ಶಕರು

ಡಾ. ಲಕ್ಷ್ಮೀದೇವಿ ಎಲ್.

ಸಹ ಪ್ರಾಧ್ಯಾಪಕರು

ಫೀಲ್ಡ್‌ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು

ಮಡಿಕೇರಿ

ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳ ಗಂಗೋತ್ರಿ– ೫೭೪೧೯೯

೨೦೨೨

ಪರಿವಿಡಿ

ಪ್ರಸ್ತಾವನೆ

* ಅಧ್ಯಯನದ ಉದ್ದೇಶ
* ಅಧ್ಯಯನದ ವ್ಯಾಪ್ತಿ
* ಅಧ್ಯಯನದ ವಿಧಾನ
* ಇದುವರೆಗೆ ನಡೆದಿರುವ ಅಧ್ಯಯನಗಳು
* ಅಧ್ಯಯನದ ಪ್ರಸ್ತುತತೆ

ಅಧ್ಯಾಯ ೧: ಪ್ರಾದೇಶಿಕತೆ– ಅರ್ಥ, ಅಧ್ಯಯನದ ನೆಲೆಗಳು/ ಸ್ವರೂಪ, ಹಿನ್ನೆಲೆ, ಅಗತ್ಯತೆ

೧.೧. 'ಪ್ರದೇಶ'ದ ಅರ್ಥ ವಿವರಣೆ

೧.೨. 'ಪ್ರಾದೇಶಿಕತೆ'ಯ ಅರ್ಥಗ್ರಹಿಕೆ

೧.೩. ಪ್ರಾದೇಶಿಕತೆಯನ್ನು ಆಧರಿಸಿದ ಅಧ್ಯಯನದ ನೆಲೆಗಳು/ ಪ್ರಾದೇಶಿಕತೆಯ ಸ್ವರೂಪ

೧.೩.೧. ಪ್ರಾದೇಶಿಕ ಇತಿಹಾಸ

೧.೩.೨. ಪ್ರಾದೇಶಿಕ ಸಂಸ್ಕೃತಿ

೧.೩.೩. ಪ್ರಾದೇಶಿಕ ಸಾಹಿತ್ಯ

೧.೩.೪. ಪ್ರಾದೇಶಿಕ ರಂಗಭೂಮಿ

೧.೪. ಪ್ರಾದೇಶಿಕ ಅಧ್ಯಯನದ ಹಿನ್ನೆಲೆ

೧.೫. ಪ್ರಸ್ತುತ ಕಾಲಘಟ್ಟದಲ್ಲಿ ಪ್ರಾದೇಶಿಕತೆಯನ್ನು ಆಧರಿಸಿದ ಅಧ್ಯಯನದ ಅಗತ್ಯತೆ

೧.೬. ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಅಧ್ಯಯನದ ಅಗತ್ಯತೆ

೧.೭. ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಅಧ್ಯಯನದ ಅಗತ್ಯತೆ

ಅಧ್ಯಾಯ ೨: ಡಾ। ನಾ. ಮೊಗಸಾಲೆಯವರ ಜೀವನ, ಸಂಘಟನೆ ಮತ್ತು ಸಾಹಿತ್ಯ

೨.೧. ಡಾ। ನಾ. ಮೊಗಸಾಲೆ ಅವರ ಜೀವನ

೨.೨. ಡಾ। ನಾ. ಮೊಗಸಾಲೆ ಅವರ ಸಂಘಟನೆ

೨.೨.೧. ಕಾಂತಾವರ ರೈತ ಯುವಕ ವೃಂದ

೨.೨.೨. ಕಾಂತಾವರ ಕನ್ನಡ ಸಂಘ

೨.೨.೩. ವರ್ಧಮಾನ ಪ್ರಶಸ್ತಿ ಪೀಠ

೨.೨.೪. ಕನ್ನಡ ಭವನ

೨.೨.೫. ಅಲ್ಲಮಪ್ರಭು ಪೀಠ

೨.೩. ಡಾ। ನಾ. ಮೊಗಸಾಲೆ ಅವರಿಗೆ ದೊರೆತ ಪ್ರಶಸ್ತಿ- ಗೌರವಗಳು

೨.೪. ಡಾ। ನಾ. ಮೊಗಸಾಲೆ ಅವರ ಸಾಹಿತ್ಯ

೨.೪.೧. ಕವನ ಸಂಕಲನಗಳು

೨.೪.೨. ಕಾದಂಬರಿಗಳು

೨.೪.೩. ಕಥಾ ಸಂಕಲನಗಳು

೨.೪.೪. ಇತರ ಕೃತಿಗಳು

ಅಧ್ಯಾಯ ೩: ಡಾ। ನಾ. ಮೊಗಸಾಲೆಯವರ ಸಾಹಿತ್ಯ ಪ್ರಕಾರಗಳಲ್ಲಿ ಪ್ರಾದೇಶಿಕತೆ

೩.೧. ಡಾ। ನಾ. ಮೊಗಸಾಲೆಯವರ ಸಣ್ಣಕಥೆಗಳಲ್ಲಿ ಪ್ರಾದೇಶಿಕತೆ

೩.೨. ಡಾ। ನಾ. ಮೊಗಸಾಲೆಯವರ ಕಾದಂಬರಿಗಳಲ್ಲಿ ಪ್ರಾದೇಶಿಕತೆ

೩.೩. ಡಾ। ನಾ. ಮೊಗಸಾಲೆಯವರ ಕಾವ್ಯದಲ್ಲಿ ಪ್ರಾದೇಶಿಕತೆ

ಅಧ್ಯಾಯ ೪: ಡಾ। ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಮಹಿಳಾ ಪ್ರತಿನಿಧೀಕರಣ

೪.೧. ಪ್ರಾದೇಶಿಕವಾದ ಮಹಿಳಾ ಸಮಾನತೆಯ ನೆಲೆಗಳು

೪.೨. ಪ್ರಾದೇಶಿಕ ಮಹಿಳಾ ಬಂಡಾಯದ ನೆಲೆಗಳು

೪.೩. ಪ್ರಾದೇಶಿಕ ಮಹಿಳಾ ಅಂತಃಕರಣದ ನೆಲೆಗಳು

೪.೪. ಮಹಿಳಾ ಸಂವೇದನೆಯ ಪ್ರಾದೇಶಿಕ ಅನ್ವಯಿಕೆ

ಅಧ್ಯಾಯ ೫: ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಧರ್ಮ- ಸಮುದಾಯ ಆಧಾರಿತವಾಗಿ ಕರಾವಳಿ ಪ್ರದೇಶದ ಚಿತ್ರಣ

೫.೧. ಧರ್ಮಾಧಾರಿತವಾಗಿ ಕರಾವಳಿ ಪ್ರದೇಶದ ಚಿತ್ರಣ

೫.೧.೧. ಧಾರ್ಮಿಕ ಸೌಹಾರ್ದತೆಯ ಚಿತ್ರಣ

೫.೧.೨. ಮತಾಂತರ ಪ್ರಕ್ರಿಯೆ ಹಾಗೂ ಮತಾಂತರದ ಅಗತ್ಯತೆ ಮತ್ತು ಪರಿಣಾಮಗಳ ಪ್ರಸ್ತಾಪ

೫.೧.೩. ಧಾರ್ಮಿಕ ಸಂಘರ್ಷ ಹಾಗೂ ಸಾಮರಸ್ಯದ ನೆಲೆಗಳು

೫.೧.೪. ಜನರಲ್ಲಿ ಅಂತರ್ಗತವಾಗಿರುವ ಧಾರ್ಮಿಕ ಪ್ರಜ್ಞೆಯ ಅನಾವರಣ

೫.೨. ಸಮುದಾಯಾಧಾರಿತವಾಗಿ ಕರಾವಳಿ ಪ್ರದೇಶದ ಚಿತ್ರಣ

೫.೨.೧. ಹಲವು ಆಯಾಮಗಳಲ್ಲಿ ಸಮುದಾಯ ಪ್ರಜ್ಞೆ

೫.೨.೨. ಸಮುದಾಯಾಧಾರಿತ ತಾರತಮ್ಯ

೫.೨.೩. ಸಮುದಾಯಕ್ಕೆ ಅನುಗುಣವಾಗಿ ಗುಣಸ್ವಭಾವಗಳನ್ನು ಆರೋಹಿಸುವ ಪ್ರವೃತ್ತಿ

೫.೨.೪. ಸಮುದಾಯಾತೀತ ಪ್ರಜ್ಞೆಯನ್ನು ಪ್ರಕಟಪಡಿಸುವ ಸಂದರ್ಭ- ಸನ್ನಿವೇಶಗಳು

೫.೨.೫. ವೈಯಕ್ತಿಕ ಘರ್ಷಣೆಯ ವಿಸ್ತೃತ ಸ್ವರೂಪವಾಗಿ ಕಂಡುಬರುವ ಸಾಮುದಾಯಿಕ ಸಂಘರ್ಷ

ಅಧ್ಯಾಯ ೬: ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕವಾಗಿ ವ್ಯಕ್ತಗೊಂಡಿರುವ ಗಾಂಧಿವಾದದ ಅವಲೋಕನ

೬.೧. ಗಾಂಧಿವಾದದ ಪ್ರಧಾನ ಅಭಿವ್ಯಕ್ತಿಯಾಗಿ 'ಸೀತಾಪುರದಲ್ಲಿ ಗಾಂಧೀಜಿ' ಕಥಾ ಸಂಕಲನ

೬.೨. ಗುತ್ತಿನ ಮನೆ ಮತ್ತು ಗಾಂಧಿವಾದ

೬.೩. ಸ್ವಾತಂತ್ರ್ಯ ಹೋರಾಟಕ್ಕೆ ಪ್ರಾದೇಶಿಕ ಸ್ಪಂದನೆ

ಸಮಾರೋಪ

ಅನುಬಂಧ

* ಆಕರ ಗ್ರಂಥಗಳು
* ಪರಾಮರ್ಶನ ಗ್ರಂಥಗಳು/ ಲೇಖನಗಳು
* ಮಾಹಿತಿ ನೀಡಿದ ತಜ್ಞರು
* ಮಾಹಿತಿ ಒದಗಿಸಿದ ಜಾಲತಾಣಗಳು
* ಛಾಯಾಚಿತ್ರಗಳು

ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ

ಪ್ರಸ್ತಾವನೆ

ಮನುಷ್ಯರ ಭಾವನೆ, ಅಭಿಪ್ರಾಯ ಮತ್ತು ಆಲೋಚನೆಗಳನ್ನು ಅಭಿವ್ಯಕ್ತಿಸುವ ಹಲವು ಮಾಧ್ಯಮಗಳಲ್ಲಿ ಸಾಹಿತ್ಯ ಪ್ರಮುಖವಾದದ್ದು. ಭೂತಕಾಲದ ಸಂಗತಿಗಳನ್ನು ವರ್ತಮಾನದ ಅನುಭವಗಳೊಂದಿಗೆ ನಿರ್ವಚಿಸಿಕೊಂಡು ಭವಿಷ್ಯದ ಆಧಾರದಲ್ಲಿ ಅಗತ್ಯಗಳ ಮುನ್ನೋಟವನ್ನು ಒದಗಿಸುವುದರಿಂದ ಸಾಹಿತ್ಯವು ಸೃಜನಶೀಲ ಪ್ರಕ್ರಿಯೆಯಾಗಿ ಪ್ರವಹಿಸುತ್ತದೆ. ಈ ಹಿನ್ನೆಲೆಗಳಿಂದ ನೋಡಿದಾಗ ಸಾಹಿತ್ಯವು ಇತಿಹಾಸ, ಪ್ರಸ್ತುತತೆ ಹಾಗೂ ಭವಿಷ್ಯತ್ತು ಈ ಮೂರೂ ಅಂಶಗಳನ್ನು ಒಳಗೊಳ್ಳುತ್ತದೆ. ಇದು ಸಾಹಿತ್ಯದ ವಿಶೇಷ ಶಕ್ತಿಯೂ ಹೌದು; ಸಂವೇದನಾಶೀಲತೆಯೂ ಹೌದು.

ಕನ್ನಡ ಸಾಹಿತ್ಯ ಸಂಶೋಧನೆಯು ಬಲಿಷ್ಠವಾದ ತಳಪಾಯವನ್ನು ಒಳಗೊಂಡಿದೆ. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳಿಂದ ನಡೆದ ಗ್ರಂಥ ಸಂಪಾದನೆಯ ಕೆಲಸವು ಕನ್ನಡ ಸಂಶೋಧನೆಯ ಪ್ರಕ್ರಿಯೆಯ ಆರಂಭದ ಕಾಲಘಟ್ಟವಾಗಿದೆ. ಮೆಕಂಜಿ, ಜಾನ್ ಲೇಡನ್, ಮೋಗ್ಲಿಂಗ್, ಗೋವರ್, ಫ್ಲೀಟ್ ಮೊದಲಾದವರು ನಡೆಸಿದ ಸಂಪಾದನಾ ಕಾರ್ಯವನ್ನು ಈ ಹಂತದಲ್ಲಿ ಗುರುತಿಸಲಾಗುತ್ತದೆ. ಆ ಬಳಿಕದ ಹಂತದಲ್ಲಿ ಟಿ. ಎಸ್. ವೆಂಕಣ್ಣಯ್ಯ, ಮಂಜೇಶ್ವರ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣ ಭಟ್, ಶಂಭಾ ಜೋಷಿ, ಫ. ಗು. ಹಳಕಟ್ಟಿ ಮೊದಲಾದವರು ಸಂಶೋಧನಾ ವಸ್ತು- ಸ್ವರೂಪವನ್ನು ಹಲವು ಆಯಾಮಗಳಲ್ಲಿ ತಮ್ಮ ಸಂಶೋಧನಾ ಪ್ರಕ್ರಿಯೆಯ ಮೂಲಕ ನಿರೂಪಿಸಿದ್ದಾರೆ. ಹೀಗೆ ಕನ್ನಡ ಸಾಹಿತ್ಯ ಸಂಶೋಧನೆಯು ಕಾಲಕಾಲಕ್ಕೆ ಹಲವು ಬಗೆಯ ಬದಲಾವಣೆಗಳಿಗೆ ಒಗ್ಗಿಕೊಳ್ಳುತ್ತಾ ಬೆಳೆದುಬಂದಿದೆ. ಇಂತಹ ಬದಲಾವಣೆಯು ಸಾಹಿತಿಯ ಸೃಷ್ಟಿಶೀಲ ನಿರ್ಮಿತಿಗಳನ್ನು ಪ್ರಾದೇಶಿಕತೆಯ ನೆಲೆಗಟ್ಟಿನಲ್ಲಿ ಪರಿಭಾವಿಸಿ ನೋಡುವ ವಿಧಾನವನ್ನೂ ಒಳಗೊಂಡಿದೆ. ಸಾಹಿತಿ ಮತ್ತು ಸಾಹಿತ್ಯ ರಚನೆಗಳ ಪರಿಸರವನ್ನು ಆಧಾರವಾಗಿಟ್ಟುಕೊಂಡು ಗಮನಾರ್ಹವಾಗಿ ಸಂಶೋಧನೆಯು ನಡೆಯುತ್ತಿದೆ.

ಕನ್ನಡ ಸಾಹಿತ್ಯ ಪರಂಪರೆಗೆ ಕರಾವಳಿ ಕನ್ನಡದ ಅನೇಕ ಸಾಹಿತಿಗಳ ಕೊಡುಗೆ ಗಮನಾರ್ಹ ಹಾಗೂ ಅಪಾರ. ಹೊಸಗನ್ನಡ ಸಾಹಿತ್ಯ ರಚನೆಯ ಸಂದರ್ಭದಲ್ಲಿ ವಿಶಿಷ್ಟಪೂರ್ಣವಾಗಿ ತೊಡಗಿಸಿಕೊಂಡು, ತಮ್ಮ ಬರಹದ ಮೂಲಕ ಸಾಂಸ್ಕೃತಿಕ ಓರೆ ಕೋರೆಗಳನ್ನು ತಿದ್ದುವ, ಸಮಾಜದ ವಾಸ್ತವತೆಗಳನ್ನು ಬಿಂಬಿಸುವ ಪ್ರಯತ್ನವನ್ನು ನಡೆಸುತ್ತಿರುವ ಡಾ। ನಾ. ಮೊಗಸಾಲೆಯವರನ್ನು ಕರಾವಳಿಯ ಪ್ರಾತಿನಿಧಿಕ ಸಾಹಿತಿಯಾಗಿ ಗುರುತಿಸಬಹುದು. ಡಾ। ಮೊಗಸಾಲೆಯವರಿಗೆ ಕರಾವಳಿಯ ಬದುಕು ಲೋಕಾನುಭವ ಮಾತ್ರವಲ್ಲ; ಸ್ವಾನುಭವವೂ ಹೌದು.

ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿಚಾರಗಳು ಕರಾವಳಿಯ ಜನಜೀವನ, ಇಲ್ಲಿನ ಜನರ ನಡವಳಿಕೆಗಳ ಮೇಲೆ ಪ್ರಭಾವ ಬೀರುತ್ತದೆಯೆಂದಾದರೆ ಅದು ನಿಜಕ್ಕೂ ಗಮನಾರ್ಹ ಅಂಶವೇ ಸರಿ. ಕರಾವಳಿ ಪ್ರದೇಶದ ಅನನ್ಯತೆಯೂ ಕೂಡಾ ಅಷ್ಟೇ ಗಮನಾರ್ಹವಾದದ್ದಾಗಿದೆ. ಈ ಬದಲಾವಣೆಗಳನ್ನು ಮತ್ತು ಅನನ್ಯತೆಯನ್ನು ಇದೇ ಪ್ರದೇಶದಲ್ಲಿ ಬದುಕು ನಡೆಸುತ್ತಾ, ಸಾಹಿತಿ- ಸಂಘಟಕರಾಗಿ ಗುರುತಿಸಿಕೊಂಡ ಡಾ। ನಾ. ಮೊಗಸಾಲೆಯವರು ಕಂಡಿರುವ ಬಗೆ ಮತ್ತು ತಮ್ಮ ಸಾಹಿತ್ಯದಲ್ಲಿ ಒಡಮೂಡಿಸಿರುವ ರೀತಿ ಅಧ್ಯಯನ ಯೋಗ್ಯವಾದ ವಿಷಯ ಎನ್ನುವುದು ಸ್ಪಷ್ಟ.

ಒಂದು ಪ್ರದೇಶವು ಜಾಗತಿಕ ಸಂಗತಿಗಳಿಗೆ ಪ್ರತಿಕ್ರಿಯಾತ್ಮಕತೆಯನ್ನು ತೋರುತ್ತದೆ. ಕಾಲಕಾಲಕ್ಕೆ ನಡೆದ ವಿದ್ಯಮಾನಗಳು, ಬದಲಾವಣೆಗಳು, ಬೆಳವಣಿಗೆಗಳು ಆಯಾ ಪ್ರದೇಶದ ಜನರನ್ನು, ಅವರ ಬದುಕನ್ನು ಪ್ರಭಾವಿಸುತ್ತವೆ. ಇವುಗಳನ್ನು ದಾಖಲಿಸಿಕೊಳ್ಳುವ, ಮುಂದಿನ ತಲೆಮಾರಿಗೆ ರವಾನಿಸುವ ಬಹುಪ್ರಮುಖ ವಾಹಕವಾಗಿ ಆ ಪ್ರದೇಶದಲ್ಲಿ ರೂಪುಗೊಳ್ಳುವ ಸಾಹಿತ್ಯಕ ರಚನೆಗಳು ಕಾರ್ಯಾಚರಿಸುತ್ತವೆ. ವೈದ್ಯವೃತ್ತಿಯಲ್ಲಿದ್ದುಕೊಂಡು ಕರಾವಳಿ ಪ್ರದೇಶದ ಜನರ ಜೊತೆಗೆ ಅವಿನಾಭಾವ ಸಂಪರ್ಕವನ್ನು ಇರಿಸಿಕೊಂಡ ಮೊಗಸಾಲೆಯವರು ವಾಸ್ತವಿಕತೆ–ಸೃಜನಶೀಲತೆಯ ಸಮ್ಮಿಶ್ರಣದೊಂದಿಗೆ ಇಲ್ಲಿಯ ಜನಜೀವನವನ್ನು ಚಿತ್ರಿಸಿದ್ದಾರೆ.

ಬಾಹ್ಯ ಪ್ರೇರಣೆಗಳಿಗೆ ಒಳಗಾಗುವ ಪ್ರದೇಶವೊಂದು ಅದೇ ಕಾಲಕ್ಕೆ ತನಗಿಂತ ಹೊರತಾದ ಪ್ರಪಂಚವನ್ನು ಪ್ರಭಾವಿಸುತ್ತದೆ. ಡಾ। ಮೊಗಸಾಲೆಯವರ ಸಾಹಿತ್ಯದಲ್ಲಿ ಈ ಅಂಶವಿದೆ. ಕರಾವಳಿ ಪ್ರದೇಶ ಜಾಗತಿಕ ಪ್ರಕ್ರಿಯೆಗಳಿಗೆ ತೆರೆದುಕೊಂಡ ಸನ್ನಿವೇಶವನ್ನು ಚಿತ್ರಿಸುವ ಜೊತೆಜೊತೆಗೇ ಕರಾವಳಿ ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಇದಕ್ಕಿಂತ ಹೊರತಾದ ಜಗತ್ತು ಪಡೆದುಕೊಳ್ಳಬಹುದಾದ ವಿಶಿಷ್ಟ ಸಂಗತಿಗಳು ಇಲ್ಲಿ ಇದ್ದುದನ್ನು, ಇರುವುದನ್ನು ದಾಖಲಿಸುತ್ತಾರೆ. ಪ್ರಾದೇಶಿಕತೆಯನ್ನು ಸಾರ್ವತ್ರಿಕತೆಯ ದೃಷ್ಟಿಯಿಂದ ನೋಡುವ ಪ್ರಯತ್ನವನ್ನು ಮೊಗಸಾಲೆಯವರು ತಮ್ಮ ಸಾಹಿತ್ಯ ರಚನೆಯ ಆರಂಭ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಕಿರಿದನ್ನು ನೆಲೆಯಾಗಿರಿಸಿಕೊಂಡು ಹಿರಿದನ್ನು ಅಂದಾಜಿಸುವ, ಗುರುತಿಸುವ ಅಪೂರ್ವ ರೂಪಕತೆಯನ್ನು ಡಾ। ಮೊಗಸಾಲೆಯವರ ಸಾಹಿತ್ಯ ಒಳಗೊಂಡಿದೆ. ಕರಾವಳಿ ಪ್ರದೇಶವನ್ನು ನೆಲೆಯಾಗಿರಿಸಿಕೊಂಡು ಸಂಪೂರ್ಣ ಭಾರತೀಯ ಸಮಾಜವನ್ನು ಅರ್ಥೈಸಿಕೊಳ್ಳುವುದಕ್ಕೆ ಡಾ। ನಾ. ಮೊಗಸಾಲೆಯವರ ಸಾಹಿತ್ಯವು ಪ್ರಮುಖ ಆಕರವಾಗಿದೆ.

ಸಾಹಿತ್ಯ ರಚನೆಯಲ್ಲಿ ಸ್ವಾನುಭವನಿಷ್ಠತೆಗೆ ವಿಶೇಷವಾದ ಪ್ರಾಶಸ್ತ್ಯವಿದೆ. ಸ್ವಾನುಭವವನ್ನು ಆಧಾರವಾಗಿಟ್ಟುಕೊಂಡು ಅಭಿವ್ಯಕ್ತಗೊಳ್ಳುವ ವಿಚಾರಗಳು ಹೆಚ್ಚು ಸ್ಪಷ್ಟತೆಯನ್ನು ಹೊಂದಿರುತ್ತವೆ ಎನ್ನುವ ಕಾರಣಕ್ಕೆ ಸಾಹಿತ್ಯ ವಲಯವು ಇಂತಹ ಸಾಹಿತ್ಯಕ ಕೃತಿಗಳನ್ನು ವಿಶಿಷ್ಟವಾಗಿ ಗಮನಿಸಿಕೊಳ್ಳುತ್ತದೆ. ಮೊಗಸಾಲೆಯವರ ಕೃತಿಗಳು ಈ ದೃಷ್ಟಿಯಿಂದ ಗಮನಾರ್ಹ ಎನಿಸಿಕೊಳ್ಳುತ್ತವೆ. ಕಥೆ, ಕಾದಂಬರಿಗಳಲ್ಲಿನ ಸನ್ನಿವೇಶಗಳು, ಪಾತ್ರಚಿತ್ರಣ ಮೊದಲಾದವುಗಳಲ್ಲಿ ಅವರು ತಮ್ಮ ಅನುಭವಕ್ಕೆ ಬಂದ ವಿಚಾರಗಳನ್ನೇ ಸೃಜನಾತ್ಮಕವಾಗಿ ಒಡಮೂಡಿಸಿದ್ದಾರೆ. ಕರಾವಳಿ ಪ್ರದೇಶದಲ್ಲಿ ನಡೆದ ಘಟನೆಗಳನ್ನೇ ಸಾಹಿತ್ಯಾತ್ಮಕವಾಗಿ ನಿರೂಪಿಸಿದ್ದಾರೆ. ಈ ಕಾರಣದಿಂದ ಅವರ ಸಾಹಿತ್ಯವು ಇಲ್ಲಿನ ಪ್ರದೇಶದ ಬಗೆಗಿನ ಕಾಲ್ಪನಿಕತೆಗಿಂತ ಭಿನ್ನವಾದ, ಮಿಗಿಲಾದ ಸಂಗತಿಗಳನ್ನು ಹೆಚ್ಚು ವಾಸ್ತವಿಕತೆಯ ನೆಲೆಗಟ್ಟಿನಲ್ಲಿ ಒದಗಿಸಿಕೊಡುತ್ತದೆ. ಅವರ ಬಹುತೇಕ ಕಥೆಗಳು ಆತ್ಮನಿವೇದನೆಯ, ಆತ್ಮವಿಮರ್ಶೆಯ ಸ್ವರೂಪವನ್ನು ಒಳಗೊಂಡಿವೆ.

ಸಾಹಿತ್ಯವು ಸಾಮಾನ್ಯವಾಗಿ ಆದರ್ಶ ಮತ್ತು ವಾಸ್ತವಗಳ ನಡುವೆ ಅಂತರವನ್ನು ಕಾಯ್ದಿಟ್ಟುಕೊಳ್ಳುತ್ತದೆ. ಅದೇ ಬಗೆಯಲ್ಲಿ ಸಮಾಜವನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ನಡೆಸುತ್ತದೆ. ಆದರೆ ಸಾರ್ವತ್ರಿಕವಾದ, ಸಾರ್ವಕಾಲಿಕವಾದ ಮೌಲ್ಯಗಳನ್ನು ಈಗಾಗಲೇ ಸಾಧಿತವಾಗಿರುವ ರೀತಿಯಲ್ಲಿ ಗಮನಿಸಿಕೊಳ್ಳುವುದು ಮೊಗಸಾಲೆಯವರ ಸಾಹಿತ್ಯದ ವಿಶಿಷ್ಟತೆಯಾಗಿದೆ. ಅವರ ಸಾಹಿತ್ಯದಲ್ಲಿ ಅನೇಕ ಬಾರಿ, ಪ್ರತಿಪಾದಿಸುವ ಆದರ್ಶಗಳು ವಾಸ್ತವ ಎನಿಸಿಕೊಳ್ಳುತ್ತವೆ. ಈ ಮೂಲಕ ಮೊಗಸಾಲೆಯವರು ಆದರ್ಶ ಮತ್ತು ವಾಸ್ತವಗಳ ನಡುವಿನ ಅಂತರವನ್ನು ಕಿರಿದುಗೊಳಿಸುವ ಬಹುದೊಡ್ಡ ಶಕ್ತಿಯಾಗಿ ಸಾಹಿತ್ಯವನ್ನು ಬಳಸಿಕೊಂಡಿದ್ದಾರೆ. ಆದರ್ಶವನ್ನು ವಾಸ್ತವವಾಗಿ ಸ್ಥಿತ್ಯಂತರಗೊಳಿಸುವುದಕ್ಕೆ ಇವರು ನೈಜ ಘಟನೆಗಳನ್ನು ಆಧಾರವಾಗಿರಿಸಿಕೊಂಡಿದ್ದಾರೆ. ಆದ್ದರಿಂದ ಅವರ ಸಾಹಿತ್ಯದಲ್ಲಿ ನಿರ್ವಚಿಸಲ್ಪಟ್ಟಿರುವ ವಾಸ್ತವವನ್ನು ಯಾವುದೇ ರೀತಿಯಿಂದಲೂ ಅಲ್ಲಗಳೆಯುವುದಕ್ಕೆ ಅವಕಾಶವಿಲ್ಲ. ಪ್ರಾದೇಶಿಕ ಇತಿಹಾಸದ ನೆಲೆಯಿಂದ ಅದನ್ನು ಅರ್ಥೈಸಿಕೊಳ್ಳುವುದು ಹೆಚ್ಚು ಸೂಕ್ತ.

ಮೊಗಸಾಲೆಯವರ ನಿರೂಪಣಾ ಶೈಲಿಯು ವಿಶಿಷ್ಟವಾದದ್ದು. 'ಮೊಗಸಾಲೆ ಮಾದರಿ' ಎಂಬ ಪ್ರತ್ಯೇಕ ಶೈಲಿಯನ್ನು ಗುರುತಿಸುವಷ್ಟರ ಮಟ್ಟಿಗೆ ಅವರ ನಿರೂಪಣೆ ಅನನ್ಯತೆಯನ್ನು ಪಡೆದುಕೊಂಡಿದೆ. ವಾಚಾಳಿತನ ಅವರ ನಿರೂಪಣಾ ಶೈಲಿಯ ವಿಶಿಷ್ಟತೆಗಳಲ್ಲಿ ಒಂದು. ಇದು ಪ್ರಸ್ತುತ ಅಧ್ಯಯನ ವಿಷಯದ ದೃಷ್ಟಿಯಿಂದಲೂ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿನ ಪ್ರದೇಶದ ಕುರಿತು ಮುಚ್ಚಿಟ್ಟ ಅನೇಕ ಸತ್ಯಸಂಗತಿಗಳನ್ನು ಸಹಜವಾಗಿ ತೆರೆದಿಡುವ ಪ್ರಯತ್ನ ಮೊಗಸಾಲೆಯವರ ಸಾಹಿತ್ಯದ ಮೂಲಕ ನಡೆದಿದೆ. ಯಾವುದನ್ನೂ ರಹಸ್ಯವಾಗಿ ಉಳಿಸಿಕೊಳ್ಳದೆ ಎಲ್ಲವನ್ನೂ ಇದ್ದ ಹಾಗೆಯೇ ವ್ಯಕ್ತಗೊಳಿಸುವುದರಲ್ಲಿ, ವಾಚಾಳಿತನವನ್ನು ಆಧರಿಸಿಕೊಂಡ ಅವರ ನಿರೂಪಣಾ ಶೈಲಿ ಪ್ರಧಾನ ಪಾತ್ರವನ್ನು ವಹಿಸಿಕೊಂಡಿದೆ ಎನ್ನುವುದನ್ನು ಗಮನಿಸಬೇಕು.

ಅಧ್ಯಯನದ ಉದ್ದೇಶ

'ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ' ಎಂಬ ವಿಷಯವು ಕರಾವಳಿಯ ಗಮನಾರ್ಹ ಸಾಹಿತಿಯಾದ ಡಾ। ನಾ. ಮೊಗಸಾಲೆಯವರ ಒಟ್ಟು ಸಾಹಿತ್ಯವನ್ನು ಪ್ರಾದೇಶಿಕ ಹಿತಾಸಕ್ತಿಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಅವರ ಸಾಹಿತ್ಯದ ವಸ್ತು, ಪಾತ್ರ, ಘಟನೆ, ಆಶಯಗಳಲ್ಲಿ ಪ್ರಾದೇಶಿಕತೆಯ ಅಂಶಗಳನ್ನು ಗುರುತಿಸುವ ಉದ್ದೇಶ ಇಲ್ಲಿದೆ. ಪ್ರಾದೇಶಿಕವಾಗಿ ನಡೆದ ಸ್ಥಿತ್ಯಂತರಗಳನ್ನು ಮೊಗಸಾಲೆಯವರ ಸಾಹಿತ್ಯದ ಆಧಾರದಲ್ಲಿ ಗುರುತಿಸಿ, ವಿಮರ್ಶಿಸಿ, ವಾಸ್ತವತೆಯನ್ನು ಅರಿತುಕೊಳ್ಳುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

ಈ ಅಧ್ಯಯನವು ಮೂರು ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ. ಕರಾವಳಿ ಪ್ರದೇಶದ ಒಟ್ಟು ಚಿತ್ರಣ ಮೊಗಸಾಲೆಯವರ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವುದನ್ನು ಗುರುತಿಸಿಕೊಳ್ಳುವುದು ಮೊದಲ ಉದ್ದೇಶವಾಗಿದೆ. ಹೀಗೆ ಚಿತ್ರಣ ಮಾಡುವಲ್ಲಿ ಮೊಗಸಾಲೆಯವರಿಗೆ ಈ ಪ್ರದೇಶದ ಜೊತೆಗೆ ಇರುವ ಸಂಬಂಧ ಪ್ರಮುಖ ಪಾತ್ರ ವಹಿಸುತ್ತದೆ. ಈ ಸಂಬಂಧವನ್ನು ಕಂಡುಕೊಳ್ಳುವುದು ಎರಡನೆಯ ಉದ್ದೇಶವಾಗಿದೆ. ಸಾಹಿತ್ಯ ರಚನೆಗಳು ಕೇವಲ ಕಾಲ್ಪನಿಕವಾಗಿರಬೇಕಾಗಿಲ್ಲ. ಅದರಲ್ಲಿ ವಾಸ್ತವತೆಯೂ ಇರುತ್ತದೆ. ಮೊಗಸಾಲೆಯವರ ಸಾಹಿತ್ಯದಲ್ಲಿನ ಕರಾವಳಿ ಪ್ರದೇಶದ ಚಿತ್ರಣವು ಎಷ್ಟರಮಟ್ಟಿಗೆ ವಾಸ್ತವವಾಗಿದೆ ಎನ್ನುವುದನ್ನು ಅರಿತುಕೊಳ್ಳುವುದು ಅಧ್ಯಯನದ ಮೂರನೇ ಉದ್ದೇಶವಾಗಿದೆ. ಈ ಮೂರು ಉದ್ದೇಶಗಳನ್ನು ಇರಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಡಾ। ಮೊಗಸಾಲೆಯವರ ಒಟ್ಟು ಸಾಹಿತ್ಯವನ್ನು ಬೇರೆ ದೃಷ್ಟಿಕೋನದಲ್ಲಿ ಅನುಲಕ್ಷಿಸುವ ಪ್ರಯತ್ನಗಳು ಈಗಾಗಲೇ ನಡೆದಿವೆ. ಅವರ ಸಾಹಿತ್ಯದ ಕುರಿತು ವಿಮರ್ಶೆಗಳು ನಡೆದಿವೆ. ಆದರೆ ಅವರ ಒಟ್ಟು ಸಾಹಿತ್ಯವನ್ನು ಪ್ರಾದೇಶಿಕತೆಯ ನೆಲೆಯಲ್ಲಿ ಗಮನಿಸುವ ಅಧ್ಯಯನಗಳು ವಿಸ್ತೃತ ನೆಲೆಯಲ್ಲಿ ಇದುವರೆಗೂ ನಡೆದಿಲ್ಲ. ಆದ್ದರಿಂದ ಅವರ ಸಾಹಿತ್ಯವನ್ನು ಪರಿಗಣನೆಗೆ ತೆಗೆದುಕೊಂಡು ಪ್ರಾದೇಶಿಕತೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ. ಬೆಳೆದು ಬಂದ ಪರಿಸರ ಡಾ। ನಾ. ಮೊಗಸಾಲೆಯವರನ್ನು ಗಾಢವಾಗಿ ಪ್ರಭಾವಿಸಿದೆ ಎಂಬುವುದನ್ನು ಅವರ ಬರಹದ ಮೂಲಕ ಅರ್ಥೈಸಿಕೊಳ್ಳಬಹುದು. ಪರಂಪರೆಯ ಸ್ಥಿತ್ಯಂತರಗಳನ್ನು ಡಾ। ಮೊಗಸಾಲೆಯವರ ಸಾಹಿತ್ಯದ ಮೂಲಕ ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆ.

ಡಾ। ಮೊಗಸಾಲೆಯವರು ೨೦ನೇ ಶತಮಾನದ ಉತ್ತರಾರ್ಧದಲ್ಲಿ ಸಾಹಿತ್ಯ ರಚನೆಯನ್ನು ಆರಂಭಿಸಿ, ೨೧ನೇ ಶತಮಾನದ ಈ ಕಾಲಘಟ್ಟದಲ್ಲಿ ಸಾಹಿತ್ಯ ರಚನೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕಾಲಘಟ್ಟಗಳು ಸಂಕ್ರಮಣಗೊಳ್ಳುವ ಸಂದರ್ಭದಲ್ಲಿ ಪ್ರಾದೇಶಿಕವಾಗಿ ಹಲವಾರು ಬದಲಾವಣೆಗಳು ಸಂಭವಿಸಿವೆ. ಈ

ಬದಲಾವಣೆಗಳನ್ನು ಡಾ। ಮೊಗಸಾಲೆಯವರ ಸಾಹಿತ್ಯದ ಮೂಲಕ ಪರಿಶೀಲಿಸಲಾಗಿದೆ. ಕರಾವಳಿ ಪ್ರದೇಶವು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಇಲ್ಲಿಯ ಭಾಷೆ, ಜನಜೀವನ, ಜನರ ರೀತಿ- ನೀತಿ, ಮನೋಧರ್ಮ, ಸಂಸ್ಕೃತಿ ಮೊದಲಾದ ಅಂಶಗಳ ಮೂಲಕ ಈ ಅನನ್ಯತೆಯನ್ನು ಗುರುತಿಸಬಹುದು. ಈ ರೀತಿಯ ಪ್ರಾದೇಶಿಕ ಅನನ್ಯತೆಯನ್ನು ಇವರ ಸಾಹಿತ್ಯದಲ್ಲಿ ಶೋಧಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಜನಸಾಮಾನ್ಯರ ಬದುಕನ್ನು ಪರಿಗಣಿಸಿ, ಶ್ರಮಿಕ ವರ್ಗದವರ ಒಟ್ಟು ಬದುಕನ್ನು ಕೇಂದ್ರಸ್ಥಾನದಲ್ಲಿರಿಸಿ ರೂಪುಗೊಂಡಿರುವ ಮೊಗಸಾಲೆಯವರ ಸಾಹಿತ್ಯವು ನಿರ್ಲಕ್ಷಿತ ಸಮುದಾಯಗಳ ಕಡೆಗೆ ಬೆಳಕು ಚೆಲ್ಲುವ ಪ್ರಯತ್ನ ನಡೆಸುತ್ತದೆ. ಲಿಖಿತ ಚರಿತ್ರೆಯಲ್ಲಿ ದಾಖಲಾಗದ ವಿಷಯಗಳನ್ನು ಮುಂದಿಡುತ್ತದೆ. ಹಲವು ತಲೆಮಾರು ಹಿಂದಿನ ಕರಾವಳಿ ಪ್ರದೇಶದ ಜನಜೀವನವನ್ನು ಅರ್ಥೈಸುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿನ ಕರಾವಳಿಯ ಬದುಕನ್ನು ತಿಳಿಸಿಕೊಡುತ್ತದೆ. ಭವಿಷ್ಯದ ಕರಾವಳಿ ಪ್ರದೇಶದ ಕುರಿತ ಸುಳುಹನ್ನೂ ಒದಗಿಸಿಕೊಡುತ್ತದೆ. ಆದ್ದರಿಂದ ಕರಾವಳಿ ಪ್ರದೇಶದ ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಅಂದಾಜಿಸುವುದಕ್ಕೆ ಅಗತ್ಯವಾದ ಮೂಲಭೂತ ತಿಳಿವಳಿಕೆಯನ್ನು ಮೊಗಸಾಲೆಯವರ ಸಾಹಿತ್ಯದ ಆಧಾರದಲ್ಲಿ ಗುರುತಿಸಲಾಗಿದೆ.

ಡಾ। ಮೊಗಸಾಲೆಯವರ ಸಾಹಿತ್ಯವನ್ನು ಪ್ರಾದೇಶಿಕತೆಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಕರಾವಳಿ ಪ್ರದೇಶದ ಕುರಿತು ಡಾ। ಮೊಗಸಾಲೆಯವರ ಕಾಣ್ಕೆಯನ್ನು ಅರಿತುಕೊಳ್ಳುವುದಕ್ಕೆ ಸಾಧ್ಯವಿದೆ. ಇಲ್ಲಿನ ವಿವಿಧ ಸಂಗತಿಗಳಿಗೆ ಅವರ ಪ್ರತಿಕ್ರಿಯೆ ಏನು ಎನ್ನುವುದನ್ನು ಗಮನಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಡಾ। ನಾ. ಮೊಗಸಾಲೆಯವರು ತಮ್ಮ ಸಾಹಿತ್ಯದಲ್ಲಿ ಕರಾವಳಿ ಪ್ರದೇಶಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಸಾಹಿತ್ಯದಲ್ಲಿ ಒಡಮೂಡಿಸಿರುವ ರೀತಿಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

'ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ' ಎಂಬ ಅಧ್ಯಯನವು ಡಾ। ಮೊಗಸಾಲೆಯವರ ಒಟ್ಟು ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಶೋಧನೆಯನ್ನು ನಡೆಸುತ್ತದೆ. ಡಾ। ಮೊಗಸಾಲೆಯವರ ಅನುಭವ ಮತ್ತು ಅಭಿವ್ಯಕ್ತಿಯಲ್ಲಿ ಪ್ರಾದೇಶಿಕತೆಯ ಪಾತ್ರ ಪ್ರಮುಖವಾದದ್ದು. ಅವರ ಸಾಹಿತ್ಯದಲ್ಲಿ ಪ್ರಧಾನ ನೆಲೆಯಲ್ಲಿ ಅಲ್ಲದಿದ್ದರೂ ಪ್ರಾಸಂಗಿಕವಾಗಿಯಾದರೂ ಪ್ರಾದೇಶಿಕತೆಯ ಪ್ರಭಾವ ಇದ್ದೇ ಇದೆ. ಪ್ರಮುಖವಾಗಿ ಅವರ ಸಣ್ಣಕಥೆ ಹಾಗೂ ಕಾದಂಬರಿಗಳಲ್ಲಿ ಪ್ರಾದೇಶಿಕತೆಯನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಈ ಕಾರಣದಿಂದ ಡಾ। ಮೊಗಸಾಲೆಯವರ ಸಾಹಿತ್ಯ ರಚನೆಯ ಆರಂಭಿಕ ಕಾಲಘಟ್ಟದಿಂದ ತೊಡಗಿ ೨೦೧೭ರವರೆಗಿನ ಅವಧಿಯಲ್ಲಿ ಪ್ರಕಟಪಡಿಸಿರುವ ಎಲ್ಲಾ ಸಣ್ಣಕಥೆ, ಕಾದಂಬರಿಗಳು ಹಾಗೂ ಕವನಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಈ ಅಧ್ಯಯನ ವಿಷಯದಲ್ಲಿ ಉಲ್ಲೇಖಗೊಂಡಿರುವ 'ಪ್ರಾದೇಶಿಕತೆ' ಎಂಬ ಪದವು ಪ್ರಧಾನವಾಗಿ ಕರಾವಳಿ ಪ್ರದೇಶ (ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡನ್ನು ಒಳಗೊಂಡ) ಮತ್ತು ಇಲ್ಲಿಯ ಒಟ್ಟು ಸಂಸ್ಕೃತಿಯನ್ನು ಸಂಕೇತಿಸುವ ರೀತಿಯಲ್ಲಿ ಬಳಕೆಯಾಗಿದೆ. 'ಪ್ರಾದೇಶಿಕತೆ' ಎನ್ನುವ ಪರಿಕಲ್ಪನೆಯು ಪ್ರಾದೇಶಿಕ ಸಾಹಿತ್ಯ, ಪ್ರಾದೇಶಿಕ ಇತಿಹಾಸ, ಪ್ರಾದೇಶಿಕ ಸಂಸ್ಕೃತಿ, ಪ್ರಾದೇಶಿಕ ಭಾಷೆಗಳು, ಪ್ರಾದೇಶಿಕ ರಂಗಭೂಮಿ- ಈ ಎಲ್ಲವುಗಳನ್ನೂ ಒಳಗೊಳ್ಳುವುದರಿಂದ ಈ ಎಲ್ಲಾ ಅಂಶಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

'ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ' ಎಂಬ ವಿಷಯವು ಪ್ರಾದೇಶಿಕತೆಯ ಅಂಶಗಳನ್ನು ಡಾ। ಮೊಗಸಾಲೆಯವರ ಒಟ್ಟು ಸಾಹಿತ್ಯ ರಚನೆಗಳಿಗೆ ಅನ್ವಯಿಸಿ, ಶೋಧಿಸುವ ಉದ್ದೇಶವನ್ನು ಹೊಂದಿದೆ. ಡಾ। ಮೊಗಸಾಲೆಯವರ ಸಾಹಿತ್ಯದಲ್ಲಿ ಬರುವ ಪಾತ್ರ, ವಸ್ತು, ಘಟನೆ, ಆಶಯ– ಮೊದಲಾದ ಅಂಶಗಳಿಗೆ ಪ್ರಾದೇಶಿಕತೆಯ ಸಿದ್ಧಾಂತಗಳನ್ನು ಆರೋಪಿಸಿಕೊಳ್ಳಲಾಗುತ್ತದೆ. ಪ್ರಾದೇಶಿಕತೆಗೆ ಡಾ। ಮೊಗಸಾಲೆಯವರ ಬರಹಗಳು ಹೇಗೆ ಸ್ಪಂದಿಸಿವೆ ಎನ್ನುವುದನ್ನು ಪ್ರಾದೇಶಿಕ ಸಿದ್ಧಾಂತಗಳ ನೆಲೆಯಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನವನ್ನು ನಡೆಸಲಾಗುವುದು.

ಅಧ್ಯಯನವು ಮೊಗಸಾಲೆಯವರ ಸಾಹಿತ್ಯವನ್ನು ಕೇಂದ್ರೀಕರಿಸಿಕೊಂಡಿರುವುದರಿಂದ ಗ್ರಂಥಾಧ್ಯಯನ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಮೊಗಸಾಲೆಯವರಿಗೆ ಕರಾವಳಿ ಪ್ರದೇಶದ ಜೊತೆಗೆ ಇರುವ ಅವಿನಾಭಾವ ಸಂಬಂಧವು ಕರಾವಳಿ ಪ್ರದೇಶದ ಚಿತ್ರಣದ ಹಿನ್ನೆಲೆಯಲ್ಲಿ ಪ್ರಭಾವ ಬೀರಿರುವ ರೀತಿಯನ್ನು ಹಾಗೂ ಚಿತ್ರಣದ ವಾಸ್ತವತೆಯನ್ನು ಅರ್ಥೈಸಿಕೊಳ್ಳುವುದೂ ಕೂಡಾ ಅಧ್ಯಯನದ ಉದ್ದೇಶ ಆಗಿರುವುದರಿಂದ ಮೊಗಸಾಲೆಯವರ ಸಂದರ್ಶನ, ಅವರ ಒಡನಾಡಿಗಳಿಂದ ಹಾಗೂ ವಿಷಯತಜ್ಞರಿಂದ ಮಾಹಿತಿ ಸಂಗ್ರಹ ಮೊದಲಾದವುಗಳನ್ನೂ ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನ ವಿಷಯವು ಡಾ। ನಾ. ಮೊಗಸಾಲೆ ಎನ್ನುವ ಗಮನಾರ್ಹ ಸಾಹಿತಿ ಮತ್ತು ೨೦೧೭ರವರೆಗಿನ ಅವರ ಎಲ್ಲಾ ಪ್ರಕಟಿತ ಸಾಹಿತ್ಯ ರಚನೆಗಳನ್ನು ಕೇಂದ್ರದಲ್ಲಿರಿಸಿಕೊಂಡಿದೆ. ಡಾ। ನಾ. ಮೊಗಸಾಲೆಯವರ ಸಾಹಿತ್ಯವನ್ನು ಪ್ರಾದೇಶಿಕತೆಯ ಹಿನ್ನೆಲೆಯ ಮೂಲಕ ಗ್ರಹಿಸಿಕೊಳ್ಳಲಾಗಿದೆ.

ಇದುವರೆಗೆ ನಡೆದಿರುವ ಅಧ್ಯಯನಗಳು

- ೩ ಸೆಪ್ಟೆಂಬರ್ ೧೯೯೫: 'ಸುಧಾ' ಪತ್ರಿಕೆಯಲ್ಲಿ ನಂದಳಿಕೆ ಬಾಲಚಂದ್ರರಾವ್‌ರವರು ಮೊಗಸಾಲೆಯವರ ಜೀವನ ಮತ್ತು ಸಂಘಟನೆಯನ್ನು ಪರಿಚಯಿಸುವ 'ಹಳ್ಳಿಯಲ್ಲಿ ಅರಳಿದ ಬೆಳಕಿನ ಬದುಕು: ನಾ. ಮೊಗಸಾಲೆ' ಎನ್ನುವ ಲೇಖನ ಪ್ರಕಟಿಸಿದ್ದಾರೆ.
- ೨೭ ಆಗಸ್ಟ್ ೧೯೯೫: 'ತರಂಗ' ಪತ್ರಿಕೆಯಲ್ಲಿ ಡಾ. ಹಾ. ಮಾ. ನಾಯಕರು 'ನನ್ನ ಕವಿತೆಯೇ, ಹೋಗು ಮನುಷ್ಯನ ಮಾತಾಗು' ಎಂಬ ಅಂಕಣ ಬರಹದಲ್ಲಿ ಮೊಗಸಾಲೆಯವರ ಸಾಹಿತ್ಯ, ಸಂಘಟನೆಯನ್ನು ಪರಿಚಯಿಸಿದ್ದಾರೆ.
- ૩೧ ಡಿಸೆಂಬರ್ ೧೯೯೫: ಕರ್ಮವೀರ ವಾರಪತ್ರಿಕೆಯಲ್ಲಿ ಪ್ರಕಟಗೊಂಡ 'ಡಾ. ನಾ. ಮೊಗಸಾಲೆ ಸಾಹಿತ್ಯ ಮಗ್ಗುಲು' ಲೇಖನದಲ್ಲಿ ಪ್ರಶಾಂತಕುಮಾರ್ ಮ. ನಾ. ಅವರು ಮೊಗಸಾಲೆಯವರ ಬಾಲ್ಯ, ಶಿಕ್ಷಣ, ಸಾಹಿತ್ಯ ಪ್ರೀತಿ, ಸಾಹಿತ್ಯ ಪರಿಚಾರಿಕೆ, ಸಂಘಟನೆ ಮೊದಲಾದವುಗಳನ್ನು ಪರಿಚಯಿಸಿದ್ದಾರೆ.
- ೧ ಮಾರ್ಚ್ ೧೯೯೬: ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅವರ 'ಮೊಗಸಾಲೆಯ ಚಿತ್ರಗಳು' ಲೇಖನ ಕಾಸರಗೋಡು ಮಿತ್ರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಲೇಖಕರು ಮೊಗಸಾಲೆ ಅಭಿನಂದನಾ ಸಮಿತಿಯ ಮೂಲಕ ಬೆಳಕಿಗೆ ಬಂದ 'ಮೊಗಸಾಲೆ' ಎನ್ನುವ ಅಭಿನಂದನಾ ಗ್ರಂಥದ ಬಗ್ಗೆ ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಮೊಗಸಾಲೆಯವರ ಸಾಹಿತ್ಯ– ಸಂಘಟನೆಯ ಬಗೆಗಿನ ಪರಿಚಯಾತ್ಮಕ ಮಾಹಿತಿಯೂ ಈ ಲೇಖನದಲ್ಲಿದೆ.
- ೨ ನವೆಂಬರ್ ೨೦೦೦: 'ಸುಧಾ' ಪತ್ರಿಕೆಯಲ್ಲಿ ಮೊಗಸಾಲೆಯವರ ಸಂಘಟನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಸಂಘ, ಕಾಂತಾವರಕ್ಕೆ ೨೫ ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ 'ಬೆಳ್ಳಿ ಬೆಳಕಲ್ಲಿ ಕನ್ನಡ ಸಂಘ' ಎಂಬ ಬರಹವನ್ನು ಡಾ. ಹಾ. ಮಾ. ನಾಯಕರು ತಮ್ಮ ಅಂಕಣದಲ್ಲಿ ಪ್ರಸ್ತುತಪಡಿಸಿದ್ದಾರೆ.

- ೨೪ ಜನವರಿ ೨೦೦೨: ವಿನಾಯಕ ಕರ್ಕಿಕೋಡಿಯವರು ಬರೆದ 'ಅಪೂರ್ವ ಸಾಧನೆಗಳ ಕಾಂತಾವರ ಕನ್ನಡ ಸಂಘ' ಬರಹವು 'ತರಂಗ' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.
- ೨೭ ಸೆಪ್ಟೆಂಬರ್ ೨೦೦೩: ವಿಜಯಕರ್ನಾಟಕ ಪತ್ರಿಕೆಯಲ್ಲಿ ಶಾಂತಾರಾಮ ಸೋಮಯಾಜಿಯವರು ಮೊಗಸಾಲೆಯವರ ಸಂಘಟನೆಯನ್ನು ಪ್ರಧಾನವಾಗಿರಿಸಿಕೊಂಡು 'ಕನ್ನಡ ಭವನವಾದ ಬಾರಾಡಿ ಬೀಡು ಮತ್ತು ಕಾಂತಾವರ' ಬರಹವನ್ನು ಪ್ರಕಟಿಸಿದ್ದಾರೆ.
- ೨೦೦೩: ಅರವಿಂದ ಚೊಕ್ಕಾಡಿಯವರು 'ವಸ್ತು' ಎಂಬ ಕೃತಿಯಲ್ಲಿ ಡಾ। ಮೊಗಸಾಲೆಯವರ ಹದಿನಾಲ್ಕು ಕಾದಂಬರಿಗಳ(೧೯೬೫ರ 'ಮಣ್ಣಿನ ಮಕ್ಕಳು' ಕಾದಂಬರಿಯಿಂದ ತೊಡಗಿ ೨೦೦೨ರ 'ಅರ್ಥ' ಕಾದಂಬರಿಯವರೆಗೆ) ಕುರಿತ ವಿಶ್ಲೇಷಣೆಯನ್ನು ನಡೆಸಿದ್ದಾರೆ.
- ೨೦೦೪: ಡಾ. ಮಾಧವ ಮೂಡುಕೊಣಾಜೆಯವರು ಡಾ. ನಾಗರಾಜ ಭಟ್ಟ ಅವರ ಮಾರ್ಗದರ್ಶನದಲ್ಲಿ ಮೈಸೂರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಂಡಿಸಿದ 'ಮೊಗಸಾಲೆಯವರ ಬದುಕು- ಬರಹ' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಗಳಿಸಿರುತ್ತಾರೆ.
- ೨೦೦೪: ವಿ. ಗ. ನಾಯಕರ ಸಂಪಾದಕತ್ವದಲ್ಲಿ ಬಂದಿರುವ 'ಮೊಗಸಾಲೆ ಒಲವು ನಿಲುವು' ಎಂಬ ಕೃತಿಯು ಮೊಗಸಾಲೆಯವರ ವ್ಯಕ್ತಿತ್ವ ಮತ್ತು ಸಾಹಿತ್ಯ ನಿಲುವುಗಳನ್ನು ಪ್ರಮುಖವಾಗಿ ಚರ್ಚಿಸಿದೆ. ಅವರ ವ್ಯಕ್ತಿತ್ವ ಮತ್ತು ಸಾಧನೆಯ ಬಗೆಗೆ ಅವರ ಒಡನಾಡಿಗಳು, ವಿವಿಧ ಕ್ಷೇತ್ರಗಳ ಸಾಧಕರು ವ್ಯಕ್ತಪಡಿಸಿರುವ ಅಭಿಪ್ರಾಯ ಇದರಲ್ಲಿದೆ. ಜೊತೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ಮೊಗಸಾಲೆಯವರು ಮಾಡಿರುವ ಭಾಷಣ ಮತ್ತು ಬರಹಗಳನ್ನು ಇದು ಒಳಗೊಂಡಿದೆ. ಮೂರು ಭಾಗಗಳನ್ನು ಕೃತಿ ಒಳಗೊಂಡಿದೆ. ಮೊದಲ ಭಾಗದಲ್ಲಿ ಸಂಸ್ಮರಣ ಗ್ರಂಥಗಳಿಗಾಗಿ ಮೊಗಸಾಲೆಯವರು ಬರೆದ ವ್ಯಕ್ತಿಚಿತ್ರಗಳಿವೆ. ಇತರ ಸಾಧಕರೊಂದಿಗೆ ಮೊಗಸಾಲೆಯವರ ಒಡನಾಟ, ಮಾತುಕತೆಗಳನ್ನು ಈ ಭಾಗದ ಮೂಲಕ ಅರ್ಥಮಾಡಿಕೊಳ್ಳಬಹುದು. ಎರಡನೆಯ ಭಾಗದಲ್ಲಿ ಮೊಗಸಾಲೆಯವರ ಸಾಹಿತ್ಯ ಧೋರಣೆ, ಚಿಂತನೆಗಳು ವ್ಯಕ್ತಗೊಂಡಿವೆ. ಹೊಸ ಲೇಖಕರ ಕೃತಿಗಳಿಗೆ ಮೊಗಸಾಲೆಯವರು ಬರೆದ ಮುನ್ನುಡಿಗಳು ಮೂರನೇ ಭಾಗದಲ್ಲಿ ಬಂದಿವೆ.
- ೧೬ ಸೆಪ್ಟೆಂಬರ್ ೨೦೦೪: ತರಂಗ ವಾರಪತ್ರಿಕೆಯಲ್ಲಿ '೬೦ ಶ್ರಾವಣ ಕಂಡ ಕನ್ನಡ ಕಟ್ಟೋಣದ ಮೊಗಸಾಲೆ' ಲೇಖನ ಪ್ರಕಟವಾಗಿದ್ದು, ಜಯರಾಮ ಕಾರಂತ ಇದರ ಲೇಖಕರಾಗಿದ್ದಾರೆ. ಮೊಗಸಾಲೆಯವರ ಸಾಹಿತ್ಯ- ಸಂಘಟನೆಗಳನ್ನು ಆತ್ಮೀಯ ಶೈಲಿಯಲ್ಲಿ ನಿರೂಪಿಸಿದ್ದಾರೆ.
- ೨೦೦೭: ಡಾ. ಕಮಲಾ ಹೆಮ್ಮಿಗೆಯವರ ಸಂಪಾದಕತ್ವದಲ್ಲಿ 'ಅಯಸ್ಕಾಂತಾವರ' ಎಂಬ ಕೃತಿಯು ಮೂಡಿಬಂದಿದ್ದು, ಐದು ಭಾಗಗಳನ್ನು ಒಳಗೊಂಡಿದೆ. ಮೊಗಸಾಲೆಯವರ ಗದ್ಯ ಮತ್ತು ಪದ್ಯ ಬರವಣಿಗೆಯ ಕುರಿತಾದ ವಿಮರ್ಶೆ ಮತ್ತು ಅವರ ಕುರಿತು ಬಂದಿರುವ ಪತ್ರಿಕಾ ಬರಹಗಳನ್ನು ಇದು ಒಳಗೊಂಡಿದೆ.
- ೭ ಜನವರಿ ೨೦೦೭: ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಮಾಧವ ಕುಲಕರ್ಣಿ ಬರೆದಿರುವ 'ಹೊಸ ದಿಕ್ಕಿನತ್ತ ಕೈಚಾಚಿದ ಕವನ ಸಂಕಲನ' ಎನ್ನುವ ಲೇಖನ ಪ್ರಕಟವಾಗಿದೆ. ಇದು ಮೊಗಸಾಲೆಯವರ 'ಇಹಪರದ ಕೊಳ' ಎನ್ನುವ ಕವನ ಸಂಕಲನದ ಕುರಿತಾಗಿದೆ.
- ಜನವರಿ ೨೦೦೯: ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಪತ್ರಿಕೆಯಾಗಿರುವ 'ಆಳ್ವಾಸ್ ಮಾಧ್ಯಮ'ದಲ್ಲಿ ಬೆಳುವಾಯಿ ರಾಜೇಶ್ ಶೆಟ್ಟಿಯವರ 'ಕಾಂತಾವರದಲ್ಲಿ ಕನ್ನಡದ ದೀಪ' ಲೇಖನ ಪ್ರಕಟವಾಗಿದೆ. ಇದರಲ್ಲಿ ಕಾಂತಾವರ ಕನ್ನಡ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

- ೨೫ ನವೆಂಬರ್ ೨೦೦೯: ಮಂಗಳ ವಾರಪತ್ರಿಕೆಯಲ್ಲಿ ರಂಗಸುತ ಅವರ 'ಶೆಟ್ಟಿ ಬಿಟ್ಟಲ್ಲೇ ಪಟ್ಟಣ' ಲೇಖನ ಪ್ರಕಟವಾಗಿದೆ. ಶೆಟ್ಟಿ ಬಿಟ್ಟಲ್ಲೇ ಪಟ್ಟಣ ಎಂಬ ಗಾದೆಮಾತನ್ನು ಮೊಗಸಾಲೆಯವರ ಬದುಕಿಗೆ ಅನ್ವಯಿಸಿರುವ ರಂಗಸುತ ಅವರು ದೂರದ ಕೋಳ್ಯೂರಿನಿಂದ ಬಂದು ನೆಲೆನಿಂತ ಕಾಂತಾವರವನ್ನು ಸಾಹಿತ್ಯಕ– ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಮೊಗಸಾಲೆಯವರು ಶ್ರೀಮಂತಗೊಳಿಸಿದ ಪರಿಯನ್ನು ತಿಳಿಸಿಕೊಟ್ಟಿದ್ದಾರೆ.
- ೨೦೧೦: ಹರಿಣಾಕ್ಷಿ ಎಂ. ಡಿ. ಅವರು ಪ್ರೊ. ಪಾ. ನ. ಮಯ್ಯ ಅವರ ಮಾರ್ಗದರ್ಶನದಲ್ಲಿ 'ಉಲ್ಲಂಘನೆ ಕಾದಂಬರಿಯಲ್ಲಿ ಮಾತೃರೂಪಿ ಸಂಸ್ಕೃತಿಯ ಸ್ತ್ರೀಕೇಂದ್ರಿತ ಸವಾಲುಗಳು' ಎನ್ನುವ ವಿಷಯದ ಕುರಿತು ಸಂಪ್ರಬಂಧವನ್ನು ಮಂಡಿಸಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಪದವಿ ಗಳಿಸಿದ್ದಾರೆ.
- ೨೦೧೦: ನೀಲಾವರ ಸುರೇಂದ್ರ ಅಡಿಗರ ರಚನೆಯ 'ಉಲ್ಲಂಘನೆ: ಸೀಮೋಲ್ಲಂಘನ' ಕೃತಿಯಲ್ಲಿ ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯನ್ನು ಬೇರೆ ಬೇರೆ ಆಯಾಮಗಳಲ್ಲಿ ವಿಮರ್ಶೆಗೆ ಒಳಪಡಿಸಲಾಗಿದೆ.
- ೧೭ ಆಗಸ್ಟ್ ೨೦೧೦: ಕುಂದಪ್ರಭ ಪತ್ರಿಕೆಯಲ್ಲಿ ಕೋ. ಶಿವಾನಂದ ಕಾರಂತ ಅವರು ಬರೆದ 'ಲೇಖಕರ ತಪಸ್ಸಿನ ಸೃಷ್ಟಿ– ಉಲ್ಲಂಘನೆ' ಲೇಖನವು 'ಉಲ್ಲಂಘನೆ' ಕಾದಂಬರಿಯ ಕುರಿತ ವಿಶ್ಲೇಷಣೆಯನ್ನು ಒಳಗೊಂಡಿದೆ.
- ೩೦ ಜನವರಿ ೨೦೧೧: ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪ್ರಕಟಗೊಂಡ 'ಅಕ್ಷರ ವ್ಯಾಮೋಹಿಯ ಕಥನ ವೈಭವ' ಲೇಖನದಲ್ಲಿ ಡಾ. ವಾಸುದೇವ ಶೆಟ್ಟಿಯವರು 'ಉಲ್ಲಂಘನೆ' ಕಾದಂಬರಿಯ ಕುರಿತಾದ ವಿಮರ್ಶಾತ್ಮಕ ಒಳನೋಟಗಳನ್ನು ಒದಗಿಸಿಕೊಟ್ಟಿದ್ದಾರೆ.
- ೦೬ ಮಾರ್ಚ್ ೨೦೧೧: ಹೊಸದಿಗಂತ ದಿನಪತ್ರಿಕೆಯಲ್ಲಿ ಕವಯಿತ್ರಿ ರೂಪಾ ಹಾಸನ ಅವರ 'ಜೀವಂತ ಒಳಗಣ್ಣು' ಎನ್ನುವ ಲೇಖನ ಪ್ರಕಟವಾಗಿದೆ. ಇದರಲ್ಲಿ ಲೇಖಕಿ ರೂಪಾ ಹಾಸನ ಅವರು ಮೊಗಸಾಲೆಯವರ 'ಗಾಂಧಿ ಎಂಬ ಪ್ರತಿಮೆ' ಎನ್ನುವ ಕವನವನ್ನು ವಿಶ್ಲೇಷಿಸಿದ್ದಾರೆ.
- ೨೯ ಜನವರಿ ೨೦೧೨: ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಡಾ. ವಾಸುದೇವ ಶೆಟ್ಟಿಯವರು ಬರೆದಿರುವ 'ಗಾಂಧೀಜಿಯ ಹುಡುಕಾಟದಲ್ಲಿ' ಎನ್ನುವ ಲೇಖನವು 'ಸೀತಾಪುರದಲ್ಲಿ ಗಾಂಧೀಜಿ' ಕಥಾಸಂಕಲನದ ಕುರಿತಾಗಿದೆ.
- ೧೯ ಫೆಬ್ರವರಿ ೨೦೧೨: ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ 'ಮೊಗಸಾಲೆಯಲ್ಲಿ ದಕ್ಕಿದ ಗಾಂಧಿ' ಎನ್ನುವ ಲೇಖನ ಪ್ರಕಟವಾಗಿದೆ. ವಿಭಾವರಿ ಭಟ್ ಅವರು ಈ ಲೇಖನವನ್ನು ಬರೆದಿದ್ದಾರೆ. 'ಸೀತಾಪುರದಲ್ಲಿ ಗಾಂಧೀಜಿ' ಸಂಕಲನದ ಒಂಭತ್ತು ಕಥೆಗಳ ಕುರಿತಾದ ಸಂಕ್ಷಿಪ್ತ ವಿಮರ್ಶೆಯನ್ನು ಈ ಲೇಖನ ಒಳಗೊಂಡಿದೆ.
- ೧೪ ಅಕ್ಟೋಬರ್ ೨೦೧೨: ಪ್ರಜಾವಾಣಿ ದಿನಪತ್ರಿಕೆಯ ಅಂಕಣ ಬರಹದಲ್ಲಿ ಪದ್ಮರಾಜ ದಂಡಾವತಿಯವರು 'ಕಾಂತಾವರ ಹಚ್ಚಿದ ಕನ್ನಡದ ದೀಪ' ಬರಹದ ಮೂಲಕ ಮೊಗಸಾಲೆಯವರು ಕಾಂತಾವರ ಎನ್ನುವ ಕುಗ್ರಾಮವನ್ನು ನೆಲೆಯಾಗಿಟ್ಟುಕೊಂಡು ಕನ್ನಡಪರ ಚಟುವಟಿಕೆಗಳನ್ನು ನಡೆಸಿದ ರೀತಿಯನ್ನು ತಿಳಿಸಿಕೊಟ್ಟಿದ್ದಾರೆ.
- ೧೮ ಆಗಸ್ಟ್ ೨೦೧೩: ಹೊಸದಿಗಂತ ದಿನಪತ್ರಿಕೆಯಲ್ಲಿ 'ಮೊಗಸಾಲೆ ಕಣ್ಣಲ್ಲಿ ಅಲ್ಲಮನ ಕನಸು' ಎನ್ನುವ ಲೇಖನ ಪ್ರಕಟವಾಗಿದೆ. ಡಾ. ಎಸ್. ಪಿ. ಪದ್ಮಪ್ರಸಾದ್ ಇದರ ಲೇಖಕರಾಗಿದ್ದಾರೆ. ಕಾಂತಾವರದಲ್ಲಿ ಮೊಗಸಾಲೆಯವರ ವಿಶೇಷ ಆಸ್ಥೆಯ ಫಲವಾಗಿ 'ಅಲ್ಲಮಪ್ರಭು ಪೀಠ' ಸ್ಥಾಪನೆಗೊಳ್ಳುತ್ತಿರುವುದರ ಬಗ್ಗೆ ಉಲ್ಲೇಖವಿದೆ. ಅಲ್ಲಮನ ವಚನಗಳನ್ನು ಅಧ್ಯಯನ ಮಾಡುತ್ತಿದ್ದ ಮೊಗಸಾಲೆಯವರು ಅಲ್ಲಮನ ವಚನಗಳಿಂದ ಪ್ರೇರೇಪಿತರಾಗಿ ಅಲ್ಲಮಪ್ರಭು ಪೀಠದ ಕನಸನ್ನು ಕಂಡ ಬಗೆಯನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಕೇರಳದ ತಿರುವನಂತಪುರಕ್ಕೆ ಕವಿಗೋಷ್ಠಿಗೆ ಹೋದ ಮೊಗಸಾಲೆಯವರು ಮಲಯಾಳಂನ ಆದಿಕವಿ ಎಡತುಚ್ಚನ್ ಅವರ ಹೆಸರಿನಲ್ಲಿ ಇರುವ ಒಂದು ಸಂಸ್ಥೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವುದನ್ನು ಗಮನಿಸುತ್ತಾರೆ. ಇದು ಅಲ್ಲಮನ ಹೆಸರಿನ ಪೀಠದ ಬಗ್ಗೆ ಅವರಲ್ಲಿ ಆಸಕ್ತಿ ಉಂಟುಮಾಡಿದ್ದರ ಬಗ್ಗೆಯೂ ಲೇಖನದಲ್ಲಿ ಉಲ್ಲೇಖವಿದೆ.

- ೨೦೧೩: ಬೆಳಗೋಡು ರಮೇಶ ಭಟ್ ಅವರು 'ಮೊಗಸಾಲೆಯ ಮುಖಾಂತರ' ಎಂಬ ಕೃತಿಯಲ್ಲಿ ಮೊಗಸಾಲೆಯವರ ಬದುಕು ಮತ್ತು ಬರಹವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.
- ೨೦೧೪: ಡಾ. ಸೀತಾಲಕ್ಷ್ಮೀ ಕರ್ಕಿಕೋಡಿಯವರ ಸಂಪಾದಕತ್ವದಲ್ಲಿ 'ಉಲ್ಲಂಘನೆ ಆಕೃತಿ ಆಶಯ' ಎಂಬ ಕೃತಿ ಬಂದಿದ್ದು, 'ಉಲ್ಲಂಘನೆ' ಕಾದಂಬರಿಯನ್ನು ಬೇರೆ ಬೇರೆ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ.
- ೦೩ ಮೇ ೨೦೧೫: ಹೊಸದಿಗಂತ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ 'ತಲೆಮಾರುಗಳ 'ಮುಖಾಂತರ' ಸಾಗುವ ಬಾಳಪಯಣ' ಲೇಖನದಲ್ಲಿ ಡಾ. ಎಸ್. ಪಿ. ಪದ್ಮಪ್ರಸಾದ್ ಅವರು 'ಮುಖಾಂತರ' ಕಾದಂಬರಿಯ ವಿಸ್ತೃತವಾದ ವಿಶ್ಲೇಷಣೆಯನ್ನು ನಡೆಸಿದ್ದಾರೆ. ಕಾದಂಬರಿಯ ತಂತ್ರಗಾರಿಕೆ, ಯುಗ ಪರಿವರ್ತನೆಯ ಚಹರೆಗಳು ಕಾದಂಬರಿಯಲ್ಲಿ ಕಾಣಿಸಿಕೊಂಡ ಬಗೆ, ಸಾವಿನ ವೈವಿಧ್ಯತೆ, ಕಾದಂಬರಿಯ ಸಮಕಾಲೀನತೆ, ಜಾನಪದೀಯತೆ, ಕಾದಂಬರಿ ಒದಗಿಸಿಕೊಡುವ ಸಂದೇಶ- ಹೀಗೆ ಹಲವು ಆಯಾಮಗಳಲ್ಲಿ ಕಾದಂಬರಿಯನ್ನು ವಿಮರ್ಶೆಗೆ ಒಳಪಡಿಸಲಾಗಿದೆ.
- ೨೦೧೬: 'ಲೋಕಸಂವಾದಿ' ಎನ್ನುವ ಕೃತಿಯ ಮೂಲಕ ದೀಪಾ ಫಡ್ಕೆಯವರು ಮೊಗಸಾಲೆಯವರ ಸಾಹಿತ್ಯದ ಅಧ್ಯಯನವನ್ನು ನಡೆಸಿದ್ದಾರೆ.
- ೨೦೧೮: ಸದಾನಂದ ನಾರಾವಿ ಅವರ ಸಂಪಾದಕತ್ವದಲ್ಲಿ ಬಂದಿರುವ 'ಬಿಳಲು ಬಿಟ್ಟ ಮರ' ಎನ್ನುವ ಕೃತಿ ಪ್ರಕಟಗೊಂಡಿದೆ. ಇದು ಮೂರು ಭಾಗಗಳನ್ನು ಹೊಂದಿದ್ದು, ಮೊಗಸಾಲೆಯವರ ಸಾಹಿತ್ಯ, ವ್ಯಕ್ತಿತ್ವ ಹಾಗೂ ಅವರ ಒಳನೋಟ- ಸಂದರ್ಶನಗಳನ್ನು ಒಳಗೊಂಡಿದೆ.
- ೨೦೧೮: ಡಾ. ಬಿ. ಜನಾರ್ದನ ಭಟ್ ಅವರ ಸಂಪಾದಕತ್ವದ 'ಮೊಗಸಾಲೆಗೆ ಪ್ರವೇಶ' ಎಂಬ ಕೃತಿಯು ಮೊಗಸಾಲೆಯವರ ಕಾವ್ಯ, ಕಾದಂಬರಿ, ಸಣ್ಣಕಥೆಗಳ ಕುರಿತಾದ ೧೪ ಲೇಖನಗಳನ್ನು ಒಳಗೊಂಡಿದೆ.
- ೨೦೧೯: ಸುಬ್ರಾಯ ಚೊಕ್ಕಾಡಿ ಅವರ ಸಂಪಾದಕತ್ವದ 'ಧಾತು: ಅನುಸಂಧಾನ' ಕೃತಿಯಲ್ಲಿ 'ಧಾತು' ಕಾದಂಬರಿಯ ಬಹುಮುಖೀ ವಿಶ್ಲೇಷಣೆಯಿದೆ.
- ೨೦೧೯: 'ಡಾ. ಮೊಗಸಾಲೆ ಕಾದಂಬರಿ ಲೋಕ' ಎನ್ನುವ ಕೃತಿಯ ಮೂಲಕ ಡಾ। ಎಸ್. ಪಿ. ಪದ್ಮಪ್ರಸಾದ್ ಮೊಗಸಾಲೆಯವರ ಕಾದಂಬರಿಗಳ ಅಧ್ಯಯನವನ್ನು ನಡೆಸಿದ್ದಾರೆ.
- ೨೦೧೯: 'ಮೊಗಸಾಲೆ ಎಪ್ಪತ್ತೈದರ ಹೊತ್ತಿಗೆ' ಎನ್ನುವ ಕೃತಿಯು ಡಾ. ಬಿ. ಜನಾರ್ದನ ಭಟ್ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದ್ದು, ಕೃತಿಯಲ್ಲಿ ನಾಲ್ಕು ಭಾಗಗಳಿವೆ. ಮೊಗಸಾಲೆಯವರ ಸಾಹಿತ್ಯ- ಸಂಘಟನೆ, ಅವರ ಸಾಹಿತ್ಯದ ಕುರಿತು ಮಂಡನೆಯಾದ ಉಪನ್ಯಾಸ, ಮೊಗಸಾಲೆಯವರ ವೈಯಕ್ತಿಕ ವಿವರಗಳನ್ನು ಒಳಗೊಂಡಿವೆ.
- ೨೦೨೦: 'ಸಾಹಿತ್ಯದ ಬಯಲ ಬೆಟ್ಟ ಡಾ। ನಾ. ಮೊಗಸಾಲೆ' ಎನ್ನುವ ಕೃತಿಯಲ್ಲಿ ಡಾ. ಬಿ. ಜನಾರ್ದನ ಭಟ್ ಅವರು ಮೊಗಸಾಲೆಯವರ ವೈಯಕ್ತಿಕ ಹಾಗೂ ಸಾಹಿತ್ಯಕ ಬದುಕನ್ನು ಅನಾವರಣಗೊಳಿಸಿದ್ದಾರೆ.

ಅಧ್ಯಯನದ ಪ್ರಸ್ತುತತೆ

ಡಾ। ನಾ. ಮೊಗಸಾಲೆಯವರು ಅತ್ಯಂತ ಸೃಜನಶೀಲ ಸಾಹಿತಿಯಾಗಿದ್ದರೂ ಕೂಡಾ ಸಾಂಸ್ಥಿಕ ಅಧ್ಯಯನದ ದೃಷ್ಟಿಯಿಂದ ಅವರ ಸಾಹಿತ್ಯವನ್ನು ಗಮನಿಸುವ ಪ್ರಯತ್ನ ಹೆಚ್ಚಿನ ಸಂಖ್ಯೆಯಲ್ಲಿ ನಡೆದಿಲ್ಲ. ವೃತ್ತಿಯಲ್ಲಿ ವೈದ್ಯರಾಗಿದ್ದು ವೃತ್ತಿಪರ ಬರಹಗಾರರೇನೋ ಎಂಬಂತೆ ಅಸಾಧಾರಣ ಸಾಧನೆಗೈದ ಡಾ। ನಾ. ಮೊಗಸಾಲೆಯವರ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಕೋನದಿಂದ ನೋಡುವುದು ಅತ್ಯಂತ ಹೆಚ್ಚು ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ.

ಸದಾನಂದ ನಾರಾವಿಯವರ ಸಂಪಾದಕತ್ವದ 'ಬಿಳಲು ಬಿಟ್ಟ ಮರ' ಕೃತಿಯಲ್ಲಿನ ತಮ್ಮ ಲೇಖನದಲ್ಲಿ ವಿಮರ್ಶಕ ಸಿ. ಎನ್. ರಾಮಚಂದ್ರನ್ ಮೊಗಸಾಲೆಯವರ 'ಉಲ್ಲಂಘನೆ' ಮತ್ತು 'ಮುಖಾಂತರ' ಕಾದಂಬರಿಗಳನ್ನು ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಹಾಗೂ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಿಗೆ ಹೋಲಿಸಿದ್ದಾರೆ. ಮೊಗಸಾಲೆಯವರ ಸಾಹಿತ್ಯವು ಆರು ತಲೆಮಾರುಗಳ ಚಿತ್ರಣವನ್ನು ನೀಡುತ್ತದೆ. ಕರಾವಳಿ ಪ್ರದೇಶದ ಆರ್ಥಿಕತೆ, ಆಡಳಿತ, ಸಾಮಾಜಿಕತೆ, ಧಾರ್ಮಿಕತೆಗಳನ್ನು ವಿಸ್ತೃತವಾಗಿ ಅರಿಯುವ ದೃಷ್ಟಿಯಿಂದ ಈ ವಿಷಯವು ಅಧ್ಯಯನಕ್ಕೆ ಹೆಚ್ಚು ಸೂಕ್ತವಾಗುತ್ತದೆ.

ಡಾ। ಮೊಗಸಾಲೆಯವರು ಕರಾವಳಿಯ ಜನಜೀವನದ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿದವರು. ಕರಾವಳಿ ಪ್ರದೇಶದಿಂದ ದೂರ ಇದ್ದು, ಯಾವುದೋ ಒಂದು ಸಂದರ್ಭವನ್ನು ಆಧರಿಸಿಕೊಂಡು ಇಲ್ಲಿಯ ಚಿತ್ರಣವನ್ನು ಒದಗಿಸುವ ಬರಹಕ್ಕಿಂತ ಡಾ। ಮೊಗಸಾಲೆಯವರ ಸಾಹಿತ್ಯ ಪ್ರಾದೇಶಿಕತೆಯ ಚಿತ್ರಣವನ್ನು ಸಮರ್ಥವಾಗಿ ಒದಗಿಸುತ್ತದೆ. ಏಕೆಂದರೆ, ಡಾ। ನಾ. ಮೊಗಸಾಲೆಯವರ ಸಾಹಿತ್ಯ ಅನುಭವಜನ್ಯವಾಗಿರುವುದರಿಂದ ಹೆಚ್ಚು ಸ್ಪಷ್ಟತೆಯನ್ನು ಹೊಂದಿರಲು ಸಾಧ್ಯವಿದೆ. ಇವರ ಸಾಹಿತ್ಯ ರಚನೆಗಳಲ್ಲಿ ಡಾ. ಶಿವರಾಮ ಕಾರಂತರ ಪ್ರಭಾವವನ್ನು ಗುರುತಿಸಬಹುದಾಗಿದೆ. ಕಾರಂತರು ತಮ್ಮ ಕಾದಂಬರಿಗಳಲ್ಲಿ ಕರಾವಳಿ ಪ್ರದೇಶವನ್ನು ಚಿತ್ರಿಸಿರುವ ರೀತಿಯಲ್ಲಿಯೇ ಮೊಗಸಾಲೆಯವರು ತಮ್ಮ ಸಾಹಿತ್ಯದಲ್ಲಿ ಅತ್ಯಂತ ವಿಸ್ತೃತವಾಗಿ ಕರಾವಳಿಯ ಚಿತ್ರಣವನ್ನು ಒದಗಿಸಿಕೊಟ್ಟಿದ್ದಾರೆ. ಕರಾವಳಿ ಪ್ರದೇಶವನ್ನು ಅರಿತುಕೊಳ್ಳುವ ನೆಲೆಯಿಂದ ಈ ಅಧ್ಯಯನ ವಿಷಯವು ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ.

ಮೊದಲ ಅಧ್ಯಾಯ **'ಪ್ರಾದೇಶಿಕತೆ– ಅರ್ಥ, ಅಧ್ಯಯನದ ನೆಲೆಗಳು/ ಸ್ವರೂಪ, ಹಿನ್ನೆಲೆ, ಅಗತ್ಯತೆ'**ಯಲ್ಲಿ ಪ್ರಾದೇಶಿಕತೆಯ ಅರ್ಥಗ್ರಹಿಕೆಯನ್ನು ಮಾಡಲಾಗಿದೆ. ಪ್ರದೇಶ ಎನ್ನುವುದು ಭೌಗೋಳಿಕ ಪರಿಕಲ್ಪನೆಯಾಗಿದೆ. ನಿರ್ದಿಷ್ಟ ವ್ಯಾಪ್ತಿಯನ್ನು ಒಳಗೊಂಡ ಭೂಖಂಡವನ್ನು ಪ್ರದೇಶವಾಗಿ ಗುರುತಿಸಿಕೊಳ್ಳಲಾಗುತ್ತದೆ. 'ಪ್ರದೇಶ' ಪರಿಕಲ್ಪನೆಯು ಕೇವಲ ಭೌಗೋಳಿಕ ಆಯಾಮಕ್ಕೆ ಮಾತ್ರವೇ ಸೀಮಿತವಾಗಿಲ್ಲ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನೂ ಅದು ಒಳಗೊಂಡಿರುತ್ತದೆ. ಪ್ರದೇಶದ ಪರಿಕಲ್ಪನೆ ಕೇವಲ ಮನುಷ್ಯನಿಗೆ ಸೀಮಿತವಾದುದಲ್ಲ; ಬೌದ್ಧಿಕವಾಗಿ ಮನುಷ್ಯನಷ್ಟು ಪ್ರಾಬಲ್ಯವನ್ನು ಹೊಂದಿಲ್ಲದ ಜೀವಿಗಳಲ್ಲಿಯೂ ಈ ಬಗೆಯ ಕಲ್ಪನೆ ಇದೆ ಎನ್ನುವುದು ಅಚ್ಚರಿಯ ಸಂಗತಿಯಾಗಿದೆ.

ರಾಜಕೀಯ ಪರಿಭಾಷೆಯಲ್ಲಿ ಪ್ರಾದೇಶಿಕತೆಯನ್ನು ಆಡಳಿತ ಘಟಕವಾಗಿ ಗುರುತಿಸಿಕೊಳ್ಳಲಾಗುತ್ತದೆ. ಆದರೆ ಪ್ರಾದೇಶಿಕತೆಗೆ ಇದಕ್ಕಿಂತ ಹೊರತಾದ ಸಾಹಿತ್ಯಾತ್ಮಕ ಆಯಾಮವಿದೆ. ಸಾಹಿತ್ಯದೊಳಗಣ ಪ್ರಾದೇಶಿಕತೆಯಲ್ಲಿ ರಾಜಕೀಯವೇ ಪ್ರಧಾನವಾಗಿರುವುದಿಲ್ಲ. ಅದು ಒಂದು ಭಾಗವಾಗಿರುತ್ತದೆ ಅಷ್ಟೆ. ಒಟ್ಟಾರೆಯಾಗಿ ಹೇಳುವುದಾದರೆ, ಒಂದು ಪ್ರದೇಶದ ಸಮಸ್ತ ವಿಚಾರಗಳನ್ನು 'ಪ್ರಾದೇಶಿಕತೆ' ಎನ್ನಬಹುದು. ಕೇವಲ ಒಂದು ಪ್ರದೇಶದ ಚಿತ್ರಣವನ್ನು ನೀಡಿದ ಮಾತ್ರಕ್ಕೆ, ಸಾಂಸ್ಕೃತಿಕ– ಸಾಮಾಜಿಕ– ಆರ್ಥಿಕ...ಹೀಗೆ ಹಲವು ಸಂಗತಿಗಳನ್ನು ಚರ್ಚಿಸಿದ ಮಾತ್ರಕ್ಕೆ ಪ್ರಾದೇಶಿಕತೆಯನ್ನು ಆಧರಿಸಿದ ಅಧ್ಯಯನವು ಸಂಪೂರ್ಣಗೊಳ್ಳುವುದಿಲ್ಲ. ಒಂದು ಪ್ರದೇಶದ ಕುರಿತು ಹುದುಗಿಹೋದ ಸತ್ಯಗಳ ಪುನರ್‌ದರ್ಶನವನ್ನು ಮಾಡಿಸುವುದು ಪ್ರಾದೇಶಿಕ ಅಧ್ಯಯನದ ಒಂದು ಪ್ರಮುಖ ನೆಲೆಯಾಗಿರುತ್ತದೆ.

ಪ್ರಾದೇಶಿಕ ಇತಿಹಾಸ, ಪ್ರಾದೇಶಿಕ ಸಂಸ್ಕೃತಿ, ಪ್ರಾದೇಶಿಕ ಸಾಹಿತ್ಯ ಹಾಗೂ ಪ್ರಾದೇಶಿಕ ರಂಗಭೂಮಿ– ಇವುಗಳು ಪ್ರಾದೇಶಿಕತೆಯ ಸ್ವರೂಪಗಳಾಗಿವೆ. ಹೆಚ್ಚು ನೈಜತೆಯನ್ನು ಹೊಂದಿದ್ದೂ, ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಇತಿಹಾಸವನ್ನು ಪ್ರಾದೇಶಿಕ ಇತಿಹಾಸ ಅಥವಾ ಮೌಖಿಕ ಇತಿಹಾಸ ಎನ್ನಬಹುದು. ಪ್ರಧಾನ ಇತಿಹಾಸದಲ್ಲಿಲ್ಲದ, ಅದಕ್ಕಿಂತ ಭಿನ್ನವಾದ, ಕೆಲವು ಸಂದರ್ಭಗಳಲ್ಲಿ ಅದಕ್ಕಿಂತ ವೈರುಧ್ಯವಾದ ಎಷ್ಟೋ ಸಂಗತಿಗಳನ್ನು ಪ್ರಾದೇಶಿಕ ಇತಿಹಾಸ ಒದಗಿಸಿಕೊಡುತ್ತದೆ.

ಪ್ರಾದೇಶಿಕ ಇತಿಹಾಸದ ಆಕರಗಳಲ್ಲಿ ಬಳಕೆಗೊಂಡಿರುವ ಭಾಷೆಯೂ ಕೂಡಾ ಪ್ರಾದೇಶಿಕತೆಯ ದೃಷ್ಟಿಯಿಂದ ಗಮನಾರ್ಹ ಎನಿಸುತ್ತದೆ. ಸ್ಥಳಿಯ ಭಾಷೆಗಳ ಬಳಕೆ ಕಂಡುಬರುತ್ತದೆ. ಒಂದು ಪ್ರದೇಶದಲ್ಲಿ ಬದುಕುತ್ತಿರುವ ವಿವಿಧ ಜನಸಮೂಹಗಳ ಒಟ್ಟು ಜೀವನಕ್ರಮವನ್ನು ಪ್ರಾದೇಶಿಕ ಸಂಸ್ಕೃತಿ ಎನ್ನಲಾಗುತ್ತದೆ. ವಿವಿಧ ಭಾಷಿಕ– ಜನಾಂಗಿಕ– ಧಾರ್ಮಿಕ ಸಮೂಹಗಳ ಜೀವನ ವಿಧಾನವನ್ನು ಪ್ರಾದೇಶಿಕ ಸಂಸ್ಕೃತಿಯು ಒಳಗೊಳ್ಳುತ್ತದೆ. ಪ್ರಾದೇಶಿಕವಾಗಿ ವ್ಯಕ್ತಗೊಳ್ಳುವ ಸಾಂಸ್ಕೃತಿಕ ವಿಚಾರಗಳನ್ನು ಮೂರ್ತ ಮತ್ತು ಅಮೂರ್ತ ಎಂದು ವರ್ಗೀಕರಿಸಿಕೊಳ್ಳಬಹುದು. ಭೌತಿಕ ನಿರ್ಮಿತಿಗಳು, ಪ್ರದರ್ಶನ ಕಲೆಗಳು, ಆಹಾರ ಪದ್ಧತಿ, ಕುಟುಂಬ ವ್ಯವಸ್ಥೆ ಮೊದಲಾದವುಗಳನ್ನು ಮೂರ್ತ ನೆಲೆಯಲ್ಲಿ ಗುರುತಿಸಬಹುದು. ನಂಬಿಕೆ, ನೈತಿಕ ನಿಯಮಾವಳಿಗಳು ಮೊದಲಾದವುಗಳು ಪ್ರಾದೇಶಿಕ ಸಂಸ್ಕೃತಿಯ ಅಮೂರ್ತ ಸಂಗತಿಗಳಾಗಿವೆ. ಸಾಹಿತ್ಯ ರಚನೆಯಲ್ಲಿ ಪ್ರಾದೇಶಿಕತೆಯೇ ಪ್ರಧಾನವಾಗಿದ್ದಾಗ, ಪ್ರಾದೇಶಿಕತೆಯನ್ನು ವ್ಯಕ್ತಗೊಳಿಸುವುದೇ ಸಾಹಿತ್ಯ ರಚನೆಯ ಪ್ರಧಾನ ಉದ್ದೇಶವಾಗಿ ಬಿಂಬಿತವಾದಾಗ ಅಂತಹ ಸಾಹಿತ್ಯವನ್ನು ಪ್ರಾದೇಶಿಕ ಸಾಹಿತ್ಯ ಎಂದು ಗುರುತಿಸಲಾಗುತ್ತದೆ. ಪ್ರಾದೇಶಿಕ ಸಾಹಿತ್ಯದಲ್ಲಿ ಮೌಖಿಕ ಮತ್ತು ಲಿಖಿತ ಎರಡು ರೂಪಗಳು ಕಂಡುಬಂದರೂ ಕೂಡಾ ಮೌಖಿಕ ಸಾಹಿತ್ಯ ರೂಪವೇ ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಮನರಂಜನೆಯ ಮೂಲಕವೇ ಒದಗಿಬರುವ ವಿವೇಚನೆ ಮತ್ತು ಕಾಲಕ್ಷೇಪವೇ ಪ್ರಮುಖ ಉದ್ದೇಶವಾಗಿದ್ದುದರಿಂದ ಮೌಖಿಕ ಸಾಹಿತ್ಯಕ್ಕೆ ಹೆಚ್ಚಿನ ಮನ್ನಣೆ ಸಿಕ್ಕಿದೆ. ಪ್ರಾದೇಶಿಕ ಸಾಹಿತ್ಯವು ಲಿಖಿತ ಇಲ್ಲವೇ ಮೌಖಿಕ ಹೀಗೆ ಯಾವುದೇ ರೂಪದಲ್ಲಿದ್ದರೂ ಕೂಡಾ ಅದು ವ್ಯಕ್ತಗೊಳಿಸುವ ಮೌಲ್ಯದ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಪ್ರಾದೇಶಿಕ ಜನಸಮುದಾಯವನ್ನು ಪ್ರಭಾವಿಸಿದ ಸಂಗತಿಗಳನ್ನು ಅಂತರ್ಗತವಾಗಿರಿಸಿಕೊಂಡ ಪ್ರಾದೇಶಿಕ ಸಾಹಿತ್ಯವು ಹಲವು ಸಂದರ್ಭಗಳಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾದ, ವೈರುಧ್ಯ ನೆಲೆಗಟ್ಟಿನ ವಿಚಾರಗಳನ್ನು ಪ್ರಸ್ತುತಪಡಿಸುತ್ತದೆ. ಒಂದು ಪ್ರದೇಶದಲ್ಲಿ ನಡೆಯುವ ರಂಗಸ್ಥಳದದ ಮೇಲಿನ ಎಲ್ಲಾ ಚಟುವಟಿಕೆಗಳನ್ನು ಪ್ರಾದೇಶಿಕ ರಂಗಭೂಮಿಯ ಚೌಕಟ್ಟಿನಲ್ಲಿಟ್ಟು ಗಮನಿಸಬಹುದಾಗಿದೆ. ಹೀಗೆ ಪ್ರಾದೇಶಿಕತೆಯ ಮೂಲಕ ಪರಿಪಕ್ವಗೊಂಡ ರಂಗಭೂಮಿಯು ಪ್ರಾದೇಶಿಕತೆಯ ಪ್ರತಿಬಿಂಬಕವಾಗಿದೆ. ಪ್ರಾದೇಶಿಕ ರಂಗಭೂಮಿಯ ಉಗಮ ಮತ್ತು ವಿಕಾಸದ ಹಂತದಲ್ಲಿ ಜನರ ಆಸ್ತಿಕ ಮನೋಭಾವದ ಅಭಿವ್ಯಕ್ತಿಯನ್ನು ಒಂದು ಪ್ರಮುಖ ಅಂಶವಾಗಿ ಕಾಣುತ್ತೇವೆ.

ಪ್ರಾದೇಶಿಕತೆಯನ್ನು ನೆಲೆಯಾಗಿರಿಸಿಕೊಂಡ ಅಧ್ಯಯನ ಕ್ರಮ ರೂಪುಗೊಳ್ಳಲು, ಪ್ರಾದೇಶಿಕತೆಯು ಸಾಹಿತ್ಯದಲ್ಲಿ ವ್ಯಕ್ತಗೊಳ್ಳಲು ಬ್ರಿಟೀಷ್ ವಸಾಹತುಶಾಹಿಯ ಪಾತ್ರ ಪ್ರಮುಖವಾಗಿದೆ. ಪಾಶ್ಚಾತ್ಯ ಸಂಸ್ಕೃತಿಗೆ ಮುಖಾಮುಖಿಯಾಗಿ ಭಾರತೀಯ ಸಾಂಸ್ಕೃತಿಕ ಚಹರೆಗಳ ಮರುಶೋಧದ ಪ್ರಯತ್ನ ತೀವ್ರಗೊಂಡಿತು. ಪಾಶ್ಚಾತ್ಯ ವಿಚಾರಧಾರೆಗೆ ಮುಖಾಮುಖಿಯಾಗಿ ಪ್ರಾದೇಶಿಕತೆಯಿಂದ ಉದ್ದೀಪನಗೊಂಡ ರಾಷ್ಟ್ರೀಯ ಸಿದ್ಧಾಂತವನ್ನು ರೂಪುಗೊಳಿಸಲಾಗುತ್ತದೆ. ಅರ್ಥಾತ್, ರಾಷ್ಟ್ರೀಯತೆಯನ್ನು ಸಶಕ್ತಗೊಳಿಸುವ ಉದ್ದೇಶದಿಂದಲೇ ಪ್ರಾದೇಶಿಕತೆಯು ಮುನ್ನೆಲೆಗೆ ಬರುತ್ತದೆ. ಪ್ರಾದೇಶಿಕತೆಯನ್ನು ವಸಾಹತುಶಾಹಿಪ್ರಣೀತ ಪಾಶ್ಚಾತ್ಯವಾದಕ್ಕೆ ಎದುರುಗೊಳಿಸುವ ಪ್ರಕ್ರಿಯೆಗೆ ಕನ್ನಡ ಸಾಹಿತ್ಯ ವಲಯವು ಅತ್ಯಂತ ಪ್ರಜ್ಞಾಪೂರ್ವಕವಾಗಿ ಪ್ರತಿಸ್ಪಂದಿಸಿದೆ. ಕುವೆಂಪುರವರ ಸಾಹಿತ್ಯದಲ್ಲಿ ಕಂಡುಬರುವ ಮಲೆನಾಡಿನ ಚಿತ್ರಣ, ಶಿವರಾಮ ಕಾರಂತರ ಕಾದಂಬರಿಗಳಲ್ಲಿನ ಕರಾವಳಿ ಪ್ರದೇಶದ ಚಿತ್ರಣ, ಬೇಂದ್ರೆಯವರ ಕಾವ್ಯದಲ್ಲಿ ವ್ಯಕ್ತಗೊಂಡ ದೇಸೀಯತೆ ಮೊದಲಾದವು ಪ್ರಾದೇಶಿಕತೆಯನ್ನು ಕೇಂದ್ರೀಕರಿಸಿಕೊಂಡ ಪ್ರಕ್ರಿಯೆಯ ಪ್ರಾತಿನಿಧಿಕ ಸ್ವರೂಪಗಳಾಗಿವೆ.

ವಸಾಹತುಶಾಹಿ ಕಾಲಘಟ್ಟದ ಅಗತ್ಯಗಳನ್ನು ಪೂರೈಸುವ ದೃಷ್ಟಿಯಿಂದ ಮುನ್ನೆಲೆಗೆ ಬಂದ ಪ್ರಾದೇಶಿಕ ಅಧ್ಯಯನವು ವಸಾಹತೋತ್ತರ ಕಾಲಘಟ್ಟದಲ್ಲಿಯೂ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ಪ್ರಸ್ತುತ ಕಾಲಘಟ್ಟದ ಪ್ರಾದೇಶಿಕ ಅಧ್ಯಯನವು ಪ್ರಾದೇಶಿಕವಾಗಿ ಜಾಗತೀಕರಣವು ಉಂಟುಮಾಡುತ್ತಿರುವ ಪರಿಣಾಮಗಳನ್ನು ಕೇಂದ್ರೀಕರಿಸಿದೆ.

ಪ್ರಾದೇಶಿಕ ಅನನ್ಯತೆಯನ್ನು– ಜೀವಂತಿಕೆಯನ್ನು ಕಾಯ್ದಿಟ್ಟುಕೊಳ್ಳುವುದು ಇಂದಿನ ಪ್ರಾದೇಶಿಕ ಅಧ್ಯಯನದ ಪ್ರಮುಖ ಕಾಳಜಿಯಾಗಿದೆ. ಜಾಗತಿಕವಾಗಿ ಮಾನ್ಯಗೊಂಡ, ಏಕಸ್ವರೂಪಿಯಾದ ಸಂಸ್ಕೃತಿಯ ಜೊತೆಗಿನ ಸ್ಪರ್ಧೆಯಲ್ಲಿ ಪ್ರಾದೇಶಿಕ ಸಂಸ್ಕೃತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿಯಲ್ಲಿವೆ. ಇಂತಹ ಸಂದರ್ಭದಲ್ಲಿ ಶೈಕ್ಷಣಿಕ ವಲಯದಲ್ಲಿ ನಡೆಯುವ ಪ್ರಾದೇಶಿಕ ಸಂಸ್ಕೃತಿಗಳ ತಳಸ್ಪರ್ಶಿ ಅಧ್ಯಯನವು ಪ್ರಾದೇಶಿಕತೆಯ ಕುರಿತಾದ ವಾಸ್ತವವನ್ನು, ಅಜ್ಞೇಯ ಸಂಗತಿಗಳನ್ನು ಸಮಾಜದ ಮುಂದಿಡುವಲ್ಲಿ ಯಶಸ್ವಿಯಾಗುತ್ತದೆ.

ಸಾಹಿತ್ಯ ಮತ್ತು ಪ್ರಾದೇಶಿಕತೆಯ ನಡುವಿನ ಸಂಬಂಧ ಅವಿನಾಭಾವವಾದದ್ದು. ಸಾಹಿತಿಯ ಮೂಲಕ ಸೃಜಿಸಲ್ಪಟ್ಟ ಬರಹಗಳಲ್ಲಿ ಮಾತ್ರವಲ್ಲದೆ, ಸಾಹಿತಿಯ ಒಟ್ಟು ಮನೋಧರ್ಮದಲ್ಲಿ ಪ್ರಾದೇಶಿಕತೆಯ ಛಾಪು ಇರುತ್ತದೆ. ಒಂದು ಪ್ರದೇಶಕ್ಕೆ ಮಾತ್ರವೇ ಸೀಮಿತವಾದ ಅದೆಷ್ಟೋ ಸಂಗತಿಗಳಿರುತ್ತವೆ. ಇಂತಹ ಪ್ರಾದೇಶಿಕ ಅನನ್ಯತೆಯನ್ನು ಸಾಹಿತ್ಯ ತಿಳಿಸಿಕೊಡುತ್ತದೆ. ಇಂತಹ ಸಾಹಿತ್ಯ ರಚನೆಗಳು ಒಂದು ಪ್ರದೇಶದ ಬಗೆಗಿನ ಪೂರ್ವಗ್ರಹಿಕೆಗಳನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿವೆ. ಈ ನೆಲೆಯ ಅಧ್ಯಯನದ ಮೂಲಕ ಒಂದು ಪ್ರದೇಶದ ಪ್ರಕ್ರಿಯೆಗಳಿಗೆ ಸ್ಪಂದನಾಶೀಲವಾದ ಮನಸ್ಸುಗಳು ನೀಡಿರುವ ಪ್ರತಿಕ್ರಿಯೆ ಸ್ಪಷ್ಟವಾಗುತ್ತದೆ. ಕರಾವಳಿ ಪ್ರದೇಶದ ಕುರಿತಾದ ಅರಿವನ್ನು ವಿಸ್ತರಿಸಿಕೊಳ್ಳುವ ದೃಷ್ಟಿಯಿಂದ ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಪ್ರಾದೇಶಿಕತೆಯ ಅಧ್ಯಯನವು ಅಗತ್ಯವಾಗಿದೆ. ಕರಾವಳಿಯ ಸ್ವಾತಂತ್ರ್ಯಾನಂತರದ ಬದಲಾವಣೆಗಳಿಗೆ ಸಾಕ್ಷಿಪ್ರಜ್ಞೆಯಂತಿರುವ ಡಾ। ನಾ. ಮೊಗಸಾಲೆ, ತಮ್ಮ ಬರಹದಲ್ಲಿ ಇವುಗಳನ್ನು ಸೃಜನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಇವರ ಸಾಹಿತ್ಯ ರಚನೆಗಳನ್ನು ಪ್ರಾದೇಶಿಕತೆಯ ದೃಷ್ಟಿಕೋನದಿಂದ ಅಭ್ಯಸಿಸಿದಾಗ ಪಾರಂಪರಿಕ ಮತ್ತು ಆಧುನಿಕ ಕಾಲಘಟ್ಟದ ಕರಾವಳಿ ಪ್ರದೇಶದ ಚಿತ್ರಣ ದೊರೆತಿದೆ.

ಎರಡನೇ ಅಧ್ಯಾಯವಾದ **'ಡಾ। ನಾ. ಮೊಗಸಾಲೆಯವರ ಜೀವನ, ಸಂಘಟನೆ ಮತ್ತು ಸಾಹಿತ್ಯ'**ದಲ್ಲಿ ಮೊಗಸಾಲೆಯವರ ಬದುಕು, ಸಂಘಟನೆ ಮತ್ತು ಸಾಹಿತ್ಯವನ್ನು ಪರಿಚಯಿಸಲಾಗಿದೆ. ಕಾಸರಗೋಡು ಜಿಲ್ಲೆಯ ಕೋಳ್ಯೂರಿನಲ್ಲಿ ಜನಿಸಿದ ಮೊಗಸಾಲೆಯವರು ಕಾರ್ಕಳ ತಾಲೂಕಿನ ಕಾಂತಾವರ ಎನ್ನುವ ಕುಗ್ರಾಮಕ್ಕೆ ಬಂದು, ನೆಲೆನಿಂತು, ಅದನ್ನು ತನ್ನ ಕಾರ್ಯಕ್ಷೇತ್ರವಾಗಿಸಿಕೊಂಡು, ತಾವು ಬೆಳೆದುದಕ್ಕಿಂತಲೂ ಮಿಗಿಲಾಗಿ ಆ ಪ್ರದೇಶವನ್ನು ಬೆಳೆಸಿದ ರೀತಿಯನ್ನು ತಿಳಿಸಿಕೊಡಲಾಗಿದೆ. ಆಗಸ್ಟ್ ೨೭, ೧೯೪೪ರಂದು ಕಾಸರಗೋಡು ಜಿಲ್ಲೆಯ ಕೋಳ್ಯೂರಿನಲ್ಲಿ ಜನಿಸಿದ ಮೊಗಸಾಲೆಯವರು ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡದ್ದರಿಂದ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆಯುವಂತಾಗುತ್ತದೆ. ಸೋದರ ಮಾವಂದಿರ ಆಶ್ರಯದಲ್ಲಿದ್ದುಕೊಂಡು ಕನ್ಯಾನದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸುತ್ತಾರೆ. ತರಗತಿ ಶಿಕ್ಷಕರಾಗಿದ್ದ ಪಂಜಾಜೆ ಶಂಕರ ಭಟ್ಟರ ಮೂಲಕ ಹಳಗನ್ನಡ ಕಾವ್ಯದ ಜೊತೆಗೆ ಕುವೆಂಪು, ಬೇಂದ್ರೆ ಮೊದಲಾದ ಸಾಹಿತಿಗಳ ಕಾವ್ಯದ ಪರಿಚಯವಾಗುತ್ತದೆ. ಬಿ.ಎಂ. ಇದಿನಬ್ಬರ ಕವಿತೆಯ ಪ್ರೇರಣೆಗೊಳಗಾಗಿ ತಾವೂ ಕವಿತೆಯೊಂದನ್ನು ಬರೆಯುತ್ತಾರೆ. ಈ ಕವಿತೆ 'ಮಕ್ಕಳ ಬೊಕ್ಕಸ' ಎಂಬ ಶಾಲಾ ಪತ್ರಿಕೆಯಲ್ಲಿ ಎಂ. ನಾರಾಯಣ ಭಟ್ಟ ಹೆಸರಿನಲ್ಲಿ ಪ್ರಕಟಗೊಳ್ಳುತ್ತದೆ. ಓದಿನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡ ಮೊಗಸಾಲೆಯವರು ತಮ್ಮ ಬರೆವಣಿಗೆಯನ್ನು ತೀವ್ರಗೊಳಿಸುತ್ತಾಹೋಗುತ್ತಾರೆ. ಆ ಬಳಿಕ ವಿಕ್ರಮ ಮೊದಲಾದ ಪತ್ರಿಕೆಗಳಲ್ಲಿ 'ಮು. ನಾ. ಭ.' ಎಂಬ ಕಾವ್ಯನಾಮದಲ್ಲಿ ಇವರ ಕವಿತೆಗಳು ಪ್ರಕಟಗೊಳ್ಳುತ್ತವೆ. ಸಾಹಿತ್ಯಕ ಚಟುವಟಿಕೆಗಳನ್ನೂ ನಡೆಸುತ್ತಾ ಒಳ್ಳೆಯ ಅಂಕಗಳೊಂದಿಗೆ ೧೯೬೧ರಲ್ಲಿ ಎಸ್. ಎಸ್. ಎಲ್. ಸಿ. ಪೂರೈಸುತ್ತಾರೆ.

ಆ ಬಳಿಕ ಉಡುಪಿ ಮಠದ ಆಶ್ರಯದಲ್ಲಿ ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ಆಯುರ್ವೇದ ಶಾಸ್ತ್ರದ ಡಿಪ್ಲೋಮಾ ಪದವಿಗೆ ಸೇರಿಕೊಳ್ಳುತ್ತಾರೆ. ಈ ಅವಧಿಯಲ್ಲಿ ಸಾಹಿತ್ಯಕವಾಗಿ ಅವರು ಮತ್ತಷ್ಟು ಬೆಳವಣಿಗೆ ಹೊಂದುತ್ತಾರೆ. ಯುಗಪುರುಷ, ಭವ್ಯವಾಣಿ, ವಿಕ್ರಮ ಮೊದಲಾದ ಪತ್ರಿಕೆಗಳಲ್ಲಿ ಇವರ ಅನೇಕ ಕವಿತೆಗಳು ಎನ್. ಬಿ.

ಮುಕ್ತಾಲೆ ಎಂಬ ಹೆಸರಿನಲ್ಲಿ ಪ್ರಕಟಗೊಳ್ಳುತ್ತವೆ. ಆಯುರ್ವೇದ ಪದವಿ ಪಡೆದುಕೊಂಡ ಬಳಿಕ, ಕಾರ್ಕಳ ತಾಲೂಕಿನ ಕಾಂತಾವರದಲ್ಲಿ ಆರಂಭಗೊಂಡ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿಯಾಗಿ ಆಯ್ಕೆಯಾಗುತ್ತಾರೆ. ೧೯೬೫ರ ನವೆಂಬರ್ ತಿಂಗಳಿನಲ್ಲಿ ಕಾಂತಾವರಕ್ಕೆ ಬಂದ ಮೊಗಸಾಲೆಯವರು ಆ ಬಳಿಕ ಕಾಂತಾವರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತಾರೆ. ಕಾಂತಾವರದಲ್ಲಿದ್ದ ಸಾಮಾಜಿಕ ಸಮಸ್ಯೆಗಳ ನಿವಾರಣೆಯ ಪ್ರಯತ್ನವನ್ನೂ ಮಾಡುತ್ತಾರೆ. ಮೊಗಸಾಲೆಯವರ ಸಂಘಟನಾ ಶಕ್ತಿ ಅದ್ಭುತವಾಗಿದ್ದು, ಡಾ। ನಾ. ಮೊಗಸಾಲೆ ಗ್ರಾಮೀಣ ಪ್ರದೇಶದ ಜನರಿಗೆ ಸಂಘಟನೆಯ ಮಹತ್ವವನ್ನು ಮನಗಾಣಿಸುವ ಉದ್ದೇಶದಿಂದ ಅಕ್ಟೋಬರ್ ೧೦, ೧೯೬೬ರಲ್ಲಿ ಕಾಂತಾವರದ ರಥಬೀದಿಯಲ್ಲಿ ಕಾಂತಾವರ ರೈತ ಯುವಕ ವೃಂದವನ್ನು ಆರಂಭಿಸುತ್ತಾರೆ. ಕಾಂತಾವರ ಕನ್ನಡ ಸಂಘದ ಮೂಲಕ ಅವರು ನಡೆಸಿದ ಚಟುವಟಿಕೆಗಳು ಅತ್ಯುತ್ತಮ ಸಂಘಟನೆಗೆ ಮಾದರಿ ಎನಿಸಿವೆ. ೧೯೭೮ರಲ್ಲಿ 'ಮುದ್ದಣ ಕಾವ್ಯ ಪ್ರಶಸ್ತಿ' ಯೋಜನೆಯ ಆರಂಭ, ಮುದ್ದಣ ಕಾವ್ಯ ಪ್ರಶಸ್ತಿಯ ದಶಮಾನೋತ್ಸವ ಸಂದರ್ಭದಲ್ಲಿ ಪ್ರಶಸ್ತಿ ಪುರಸ್ಕೃತರ ಕವಿಗೋಷ್ಠಿ, 'ನಾನೇಕೆ ಕವಿಯಾಗಿದ್ದೇನೆ' ಎನ್ನುವ ವಿಚಾರಗೋಷ್ಠಿ, ಮುಸ್ಲಿಂ ಬರಹಗಾರರಿಂದ 'ನಾನೇಕೆ ಬರೆಯುತ್ತೇನೆ' ಎಂಬ ಸಂವಾದಗೋಷ್ಠಿ, ಕಾಂತಾವರ ಕನ್ನಡ ಸಂಘದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಮುದ್ದಣ ಕಾವ್ಯಪ್ರಶಸ್ತಿ ವಿಜೇತ ಕವಿಗಳಿಂದ ಕವಿಗೋಷ್ಠಿ, ಮುದ್ದಣ ಕಾವ್ಯ ಪ್ರಶಸ್ತಿಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ಪ್ರಶಸ್ತಿ ಪುರಸ್ಕೃತ ಕವಿಗಳೆಲ್ಲರನ್ನೂ ಒಳಗೊಂಡ ಕಾರ್ಯಕ್ರಮದ ಆಯೋಜನೆ– ಇವೆಲ್ಲವೂ ಕಾಂತಾವರ ಕನ್ನಡ ಸಂಘದ ಮೂಲಕ ನಡೆದ ಚಟುವಟಿಕೆಗಳಾಗಿವೆ. ಎರಡು ಗಮನಾರ್ಹ ಅಂಥಾಲಜಿಗಳ ಪ್ರಕಟಣೆಯು ಸಂಘದ ಮಹತ್ವಪೂರ್ಣ ಸಾಧನೆಯಾಗಿದೆ. ಕರಾವಳಿ ಕರ್ನಾಟಕವು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ನೀಡಿರುವ ಕೊಡುಗೆಗಳನ್ನು ಕೃತಿ ರೂಪದಲ್ಲಿ ದಾಖಲಿಸಬೇಕೆಂಬ ಚಿಂತನೆಯನ್ನು ಮುಂದಿರಿಸಿಕೊಂಡು ಡಾ। ಮೊಗಸಾಲೆಯವರು ಕಾಂತಾವರ ಕನ್ನಡ ಸಂಘದ ಮೂಲಕ 'ನಾಡಿಗೆ ನಮಸ್ಕಾರ' ಎನ್ನುವ ಗ್ರಂಥಮಾಲಿಕೆಯನ್ನು ೨೦೦೬ರಲ್ಲಿ ಆರಂಭಿಸಿದರು. ಈ ಗ್ರಂಥಮಾಲಿಕೆಯ ಮೂಲಕ ೨೬೮ ಮಂದಿ ಸಾಧಕರ ಸಾಧನೆಯನ್ನು ಅಕ್ಷರ ರೂಪದಲ್ಲಿ ಶಾಶ್ವತಗೊಳಿಸಲಾಗಿದೆ. ಪ್ರಸಿದ್ಧ ರಂಗಕರ್ಮಿ ಸದಾನಂದ ಸುವರ್ಣರ ಸಲಹೆಗೆ ಅನುಗುಣವಾಗಿ ಮೊಗಸಾಲೆಯವರು ಸುವರ್ಣ ರಂಗ ಸಮ್ಮಾನ್ ಪ್ರಶಸ್ತಿಯನ್ನು ೨೦೦೮ರ ಮಾರ್ಚ್ ೨೬ರಂದು ಆರಂಭಿಸಿದ್ದಾರೆ.

ಸಾಹಿತಿಗಳಿಗೆ ಖಾಸಗಿಯಾಗಿ ಪ್ರಶಸ್ತಿ ನೀಡುವ ಯೋಚನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ವರ್ಧಮಾನ ಪ್ರಶಸ್ತಿ ಪೀಠವನ್ನು ಮೇ ೨೮, ೧೯೭೮ರಂದು ಆರಂಭಿಸಲಾಗಿದೆ. ಈ ಪೀಠದ ಮೂಲಕ ನಾಡಿನ ಹಿರಿಯ ಬರಹಗಾರರು ಹಾಗೂ ಉದಯೋನ್ಮುಖ ಬರಹಗಾರರನ್ನು ಗುರುತಿಸಿ ಗೌರವಿಸಲಾಗುತ್ತಿದೆ. ಕನ್ನಡ ಭವನವನ್ನು ೨೦೦೫ರಲ್ಲಿ ಕಾಂತಾವರದ ರಥಬೀದಿಯಲ್ಲಿ ಉದ್ಘಾಟಿಸಲಾಗಿದ್ದು, ಕನ್ನಡ ಭವನದಲ್ಲಿ ಸಾಹಿತ್ಯಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರಬೇಕು ಎನ್ನುವ ಪರಿಕಲ್ಪನೆಯೊಂದಿಗೆ 'ನುಡಿನಮನ' ಕಾರ್ಯಕ್ರಮವನ್ನು ೨೦೦೮ರಿಂದ ನಡೆಸಿಕೊಂಡು ಬರಲಾಗುತ್ತಿದೆ. ಅಲ್ಲಮಪ್ರಭುವಿನ ಕಾಣ್ಕೆಗಳನ್ನು ಗ್ರಾಮೀಣ ಪ್ರದೇಶದೊಳಗೂ ಹರಿಸುವ ಮಹೋನ್ನತ ಉದ್ದೇಶವನ್ನು ಇರಿಸಿಕೊಂಡು ೨೦೧೧ರಲ್ಲಿ ಅಲ್ಲಮಪ್ರಭು ಪೀಠವನ್ನು ಕಾಂತಾವರದಲ್ಲಿ ಸ್ಥಾಪಿಸಲಾಗಿದೆ. ಈ ಪೀಠವು ತನ್ನದೇ ಆದ ಕೆಲವು ಉದ್ದೇಶಗಳನ್ನು ಇರಿಸಿಕೊಂಡಿದೆ. ಈ ಉದ್ದೇಶಗಳ ಈಡೇರಿಕೆಗಾಗಿ ಆಡಳಿತ ಕೇಂದ್ರ, ಸಭಾಭವನ, ಗ್ರಂಥಾಲಯ ಮೊದಲಾದವುಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಇದುವರೆಗೂ ಡಾ। ನಾ. ಮೊಗಸಾಲೆಯವರು ೧೦ ಕವನ ಸಂಕಲನಗಳು, ೨೦ ಕಾದಂಬರಿಗಳು, ೬ ಸಣ್ಣಕಥಾ ಸಂಕಲನಗಳು, ೫ ಲೇಖನ ಸಂಕಲನಗಳು, ೧೫ ಸಂಪಾದಿತ ಕೃತಿಗಳು, ೬ ವೈದ್ಯಕೀಯ ಕೃತಿಗಳು, ೧ ಗೀತ ನಾಟಕ, ೨ ಅಂಕಣ ಬರಹಗಳ ಸಂಕಲನವನ್ನು ಪ್ರಕಟಿಸಿದ್ದಾರೆ. ಡಾ। ಮೊಗಸಾಲೆಯವರ ಕಾವ್ಯಶೈಲಿ ವಿಶಿಷ್ಟವಾದುದು.

ವೈಯಕ್ತಿಕ ಬದುಕಿನಲ್ಲಿ ಮುಗ್ಧತೆಯನ್ನು ಇರಿಸಿಕೊಂಡ ಮೊಗಸಾಲೆಯವರ ಕಾವ್ಯದೊಳಗಲ್ಲೂ ಅದರ ಪ್ರತಿಫಲನವಿದೆ. ಕಾಲಕಾಲಕ್ಕೆ ತಕ್ಕಂತೆ ತಮ್ಮ ಕಾವ್ಯಶೈಲಿಯನ್ನು ಮೊಗಸಾಲೆಯವರು ಬದಲಿಸಿಕೊಂಡಿದ್ದಾರೆ. ಡಾ। ನಾ. ಮೊಗಸಾಲೆ ಒಟ್ಟು ೨೦ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಮೊಗಸಾಲೆಯವರ ಕಾದಂಬರಿಗಳು ಕಾಲದ ಸ್ಥಿತ್ಯಂತರಗಳಿಗೆ ತಕ್ಕಂತೆ ಸ್ಪಂದಿಸುತ್ತಾ, ಬದಲಾವಣೆಗೆ ಒಳಗಾಗುತ್ತಾ ರೂಪುಗೊಂಡಿರುವುದನ್ನು ಕಾಣಬಹುದು. ಅವರ ಮೊದಲ ಕಾದಂಬರಿ 'ಮಣ್ಣಿನ ಮಕ್ಕಳು' ಶ್ರಮಿಕ ವರ್ಗದವರ ಬದುಕನ್ನು ಚಿತ್ರಿಸುತ್ತದೆ. ಶ್ರಮಿಕ ವರ್ಗದ ಜನರ ಆಶೋತ್ತರಗಳು ಈಡೇರುವ ಆದರ್ಶವನ್ನು ಮುಂದಿಡುತ್ತಲೇ, ಅದು ಸಂಪೂರ್ಣವಾಗಿ ಸಾಕಾರಗೊಳ್ಳಲು ಸಾಧ್ಯವಾಗದ ವಾಸ್ತವತೆಯನ್ನೂ ಕಾದಂಬರಿಯಲ್ಲಿ ವ್ಯಕ್ತಪಡಿಸಲಾಗಿದೆ. 'ಅನಂತ' ಕಾದಂಬರಿಯು ಹವ್ಯಕ ಬ್ರಾಹ್ಮಣ ಸಮುದಾಯದ ಕಥಾನಕವನ್ನು ಒಳಗೊಂಡಿದೆ. ಸಮುದಾಯದ ರೂಢೀಗತ ಕಟ್ಟಳೆಯನ್ನು ಮೀರಬೇಕೆಂಬ ಅನಂತನ ಪ್ರಯತ್ನ ದುರಂತದಲ್ಲಿ ಕೊನೆಗೊಳ್ಳುವುದು ಕಾದಂಬರಿಯ ಕಥಾನಕವಾಗಿದೆ. ಸಂಭಾಷಣೆಯ ಭಾಗದಲ್ಲಿ ಹವಿಗನ್ನಡ ಭಾಷೆಯನ್ನು ಬಳಸಲಾಗಿದೆ. 'ಕನಸಿನ ಬಳ್ಳಿ' ಕಾದಂಬರಿಯಲ್ಲಿ ಸದಾನಂದ ಎನ್ನುವ ವೈದ್ಯ ತನ್ನ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ವಿಧವೆ ವಾಸಂತಿಯನ್ನು ಮದುವೆ ಆಗಲು ಬಯಸುತ್ತಾನೆ. ತಾಯಿಯ ಒಪ್ಪಿಗೆ ಸಿಗದ ಕಾರಣದಿಂದ ಬೇಸರಗೊಂಡು ತನ್ನ ಪೂರ್ವಿಕರ ಹಳ್ಳಿಯಾದ ಕಾಸರಗೋಡು ಸಮೀಪದ ಕನ್ಯಾನಕ್ಕೆ ಆಗಮಿಸುತ್ತಾನೆ. ಖಾಸಗಿ ಕ್ಲಿನಿಕ್ ಆರಂಬಿಸಿ, ಜೊತೆಜೊತೆಗೆ ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುತ್ತಾನೆ. ಇದೇ ಸಂದರ್ಭದಲ್ಲಿ ವಾಸಂತಿಯನ್ನು ಮದುವೆ ಆಗುವುದಕ್ಕೆ ತಂದೆ- ತಾಯಿಯ ಒಪ್ಪಿಗೆ ದೊರೆಯುತ್ತದೆ. ಆಕೆಯನ್ನು ಭೇಟಿಮಾಡಲು ತೆರಳಿದ ಸದಾನಂದನಿಗೆ ಆಕೆ ತೀರಿಕೊಂಡಿರುವ ವಿಚಾರ ತಿಳಿಯುತ್ತದೆ. ಬೇಸರದಿಂದ ಊರಿಗೆ ಮರಳುವಾಗ ತಂದೆ- ತಾಯಿ ಆತನಿಗೆ ತಂದುಕೊಳ್ಳಬಯಸಿದ್ದ ಪಾರ್ವತಿ ಎದುರಾಗುತ್ತಾಳೆ. ಇದರಿಂದಾಗಿ ಬದುಕಿನ ಕುರಿತಾದ ಆಸಕ್ತಿ ಆತನಲ್ಲಿ ಮತ್ತೆ ಮೂಡುವಂತಾಗುತ್ತದೆ. ಮೊಗಸಾಲೆ ಅವರ 'ನನ್ನದಲ್ಲದ್ದು' ಕಾದಂಬರಿ ಅವರಿಗೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟಿದೆ. ೧೯೭೭ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಈ ಕಾದಂಬರಿಗೆ ದೊರೆಯಿತು. ಇದರಿಂದಾಗಿ ಡಾ। ಮೊಗಸಾಲೆ ಸಾಹಿತ್ಯಕ ವಲಯದಲ್ಲಿ ಹೆಚ್ಚು ಗುರುತಿಸುವಿಕೆಗೆ ಪಾತ್ರರಾದರು. ಡಾ। ಶ್ರೀನಿವಾಸ್ ಎನ್ನುವ ವೈದ್ಯರು ತನ್ನ ತಂದೆ ಮಧುಮೇಹ ಖಾಹಿಲೆಯಿಂದ ಯಾತನೆಗೊಳಗಾಗಿ ಸತ್ತುದನ್ನು ಕಂಡು, ಮುಂದೆ ಮದುವೆಯಾದ ಮೇಲೆ ಜನಿಸುವ ತನ್ನ ಮಕ್ಕಳಿಗೂ ಮಧುಮೇಹ ಬರಬಹುದೆಂಬ ಆತಂಕದಿಂದ ಮದುವೆಗೂ ಮೊದಲೇ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಾರೆ. ಮದುವೆಯಾಗಿ ನಾಲ್ಕೈದು ವರ್ಷಗಳ ಬಳಿಕ ಈ ವಿಚಾರ ಅವರ ಹೆಂಡತಿಗೆ ತಿಳಿಯುತ್ತದೆ. ಅವಳನ್ನು ಸಮಾಧಾನಪಡಿಸುತ್ತಾ ಬೇರೊಬ್ಬರ ವೀರ್ಯದಾನದ ಮೂಲಕ ಮಗು ಪಡೆಯುವಂತೆ ಡಾ। ಶ್ರೀನಿವಾಸ್ ಸೂಚಿಸಿದಾಗ ಆಕೆ ಘಾಸಿಗೊಳ್ಳುತ್ತಾಳೆ. ಬದುಕಿನ ಏಕತಾನತೆಯಿಂದ ಬೇಸತ್ತ ಡಾ। ಶ್ರೀನಿವಾಸ್ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವರ ಆತ್ಮಹತ್ಯೆಯ ಬಳಿಕ ಅವರ ಹಿನ್ನೆಲೆ ಹುಡುಕಿಹೊರಟ ನಿರೂಪಕರಿಗೆ ಡಾ। ಶ್ರೀನಿವಾಸ್ ತನ್ನ ತಂದೆಗೆ ಹುಟ್ಟಿದವರಲ್ಲ ಎಂಬ ವಿಚಾರ ತಿಳಿಯುತ್ತದೆ. ಈ ಕಾದಂಬರಿಯನ್ನು ಕೆ. ಕೆ. ನಾಯರ್ ಮಲಯಾಳಂ ಭಾಷೆಗೆ ಅನುವಾದಿಸಿದ್ದಾರೆ. 'ಪಲ್ಲಟ' ಕಾದಂಬರಿಯಲ್ಲಿ ಭೂ ಸುಧಾರಣೆ ಕಾನೂನು ಜಾರಿಯಿಂದಾಗಿ ಉಂಟಾದ ಕೌಟುಂಬಿಕ ಸ್ಥಿತ್ಯಂತರಗಳನ್ನು ಚಿತ್ರಿಸಲಾಗಿದೆ. 'ಹದ್ದು' ಕಾದಂಬರಿಯು ದೈಹಿಕ ವಾಂಛೆಯ ಪರಿಣಾಮವಾಗಿ ಸಮಾಜಗ್ರಹಿತ ನೈತಿಕತೆಗಳು ಅದಃಪತನಗೊಳ್ಳುವುದನ್ನು ಕೇಂದ್ರಸ್ಥಾನದಲ್ಲಿರಿಸಿಕೊಂಡಿದೆ. ಕಾದಂಬರಿಯ ಕೇಂದ್ರಪಾತ್ರವಾದ ವಿಶ್ವನ ಚಂಚಲ ಮನಃಸ್ಥಿತಿಯ ಚಿತ್ರಣದ ಮೂಲಕ ಕಾದಂಬರಿ ಕೊನೆಗೊಂಡಿದೆ. 'ಪ್ರಕೃತಿ' ಕಾದಂಬರಿಯಲ್ಲಿ ಮುಕ್ತ ಲೈಂಗಿಕತೆಯ ಕುರಿತಾದ ಚರ್ಚೆಯಿದೆ. ಕಾದಂಬರಿಯಲ್ಲಿ ಲೈಂಗಿಕ ಸಂಬಂಧವನ್ನು ದೈಹಿಕತೆ ಮತ್ತು ಮಾನಸಿಕತೆಯ ಆಧಾರದಲ್ಲಿ ಗುರುತಿಸಿಕೊಳ್ಳಲಾಗಿದೆ. 'ನೆಲಮುಗಿಲುಗಳ ಮಧ್ಯೆ' ಕಾದಂಬರಿಯು ವಿಶಿಷ್ಟವೆನಿಸಬಲ್ಲ ಕಥಾನಕವನ್ನು ಒಳಗೊಂಡಿದೆ. ಪ್ರಕಾಶ್‌ನ ಜೊತೆಗೆ ದೈಹಿಕ ಸಂಬಂಧವನ್ನು ಹೊಂದಿದ ಎಲಿಜಾ ಆತ್ಮಹತ್ಯೆಯ ನಿರ್ಧಾರವನ್ನು ಬಿಟ್ಟುಬಿಡುತ್ತಾಳೆ. ಅವಳಲ್ಲಿ ಬದುಕಿನ ಬಗೆಗೆ ಹೊಸ ಭರವಸೆ, ಆಸಕ್ತಿ ಮೂಡುವಂತಾಗುತ್ತದೆ. 'ದಿಗಂತ' ಕಾದಂಬರಿಯಲ್ಲಿ ಧಾರ್ಮಿಕ ಹಾಗೂ ವೈಜ್ಞಾನಿಕ ಮನೋಭಾವಗಳ ನಡುವಿನ

ಸೈದ್ಧಾಂತಿಕ ಸಂಘರ್ಷವನ್ನು ಕಾಣಬಹುದು. ಭಾರೀ ಮಳೆಗೆ ಇಡೀ ಗ್ರಾಮವೇ ಮುಳುಗಿಹೋಗುವ ಸಾಂಕೇತಿಕತೆಯು ಕಾದಂಬರಿಯ ಕೊನೆಯ ಭಾಗದಲ್ಲಿದೆ. 'ದೃಷ್ಟಿ' ಕಾದಂಬರಿಯ ನಾಯಕ ವಾಸುದೇವರಾಯ ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಈರೋಡಿಯವನು. ಚಿಕ್ಕ ವಯಸ್ಸಿನಲ್ಲಿಯೇ ಪೂನಾ- ಮುಂಬಯಿಗೆ ಹೋಗಿ ತನ್ನ ಮಾವ ಸುಬ್ರಾಯ ಹೆಗ್ಡೆಯವರ ಸಹಾಯದಿಂದ ವಿದ್ಯಾಭ್ಯಾಸ ಪಡೆದುಕೊಳ್ಳುತ್ತಾನೆ. ಪ್ರಸಿದ್ಧ ಪತ್ರಕರ್ತನಾಗಿ ರೂಪುಗೊಳ್ಳುತ್ತಾನೆ. ಅವರ ಮೂಕಿ ಮಗಳು ಗಂಗಾಳನ್ನು ಮದುವೆಯಾಗುತ್ತಾನೆ. ಹೆಂಡತಿ- ಮಗನ ಸಾವು, ಇನ್ನೊಬ್ಬ ಮಗ ಕ್ರಾಂತಿಕಾರಿಯಾಗಿ ಮನೆಬಿಟ್ಟು ಹೋದುದು- ಮೊದಲಾದವುಗಳಿಂದ ನೊಂದ ವಾಸುದೇವ ಮತ್ತೊಬ್ಬ ಮಗನಿಗೆ ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಟ್ಟು, ತನ್ನ ಹುಟ್ಟೂರನ್ನು ಸೇರಿಕೊಳ್ಳುತ್ತಾನೆ. ಸಮಯ ಕಳೆದಂತೆ ಊರಿನ ಕೆಲವು ಜನರ ಕೆಟ್ಟ ಮನೋಭಾವ ಆತನ ಅರಿವಿಗೆ ಬರುತ್ತದೆ. ಸ್ನೇಹಿತ ಪುಟ್ಟಣ್ಣಯ್ಯನಿಗೆ ಸಹಾಯ ಮಾಡಿರುವುದನ್ನು ತಪ್ಪಾಗಿ ಅರ್ಥೈಸಿಕೊಂಡ ಊರಿನ ಕೆಲವರು ಪುಟ್ಟಣ್ಣಯ್ಯನ ಪತ್ನಿಯ ಜೊತೆಗೆ ವಾಸುದೇವನಿಗೆ ಅಕ್ರಮ ಸಂಬಂಧ ಇದೆ ಎಂಬಂತೆ ಬಿಂಬಿಸುತ್ತಾರೆ. ಇದರಿಂದ ನೊಂದುಕೊಂಡ ವಾಸುದೇವ ಮತ್ತೆ ಮುಂಬಯಿಗೆ ತೆರಳುವ ನಿರ್ಧಾರ ಕೈಗೊಳ್ಳುತ್ತಾನೆ. ಡಾ। ನಾ. ಮೊಗಸಾಲೆ 'ಉಪ್ಪು' ಕಾದಂಬರಿಯಲ್ಲಿ ರಾಜಕೀಯದ ಸೂಕ್ಷ್ಮಗಳನ್ನು ಕಟ್ಟಿಕೊಟ್ಟಿದ್ದಾರೆ. ರಾಜಕೀಯವು ಜನಸಾಮಾನ್ಯರ ಬದುಕನ್ನೂ ಆಕ್ರಮಿಸಿಕೊಳ್ಳುವ ಚಿತ್ರಣ ಈ ಕಾದಂಬರಿಯಲ್ಲಿದೆ. 'ತೊಟ್ಟಿ' ಕಾದಂಬರಿಯು ರಾಜಕೀಯ ವಿಶ್ಲೇಷಣೆಯನ್ನು ಒಳಗೊಂಡಿದೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿ. ಎ., ಬಿ. ಎಸ್. ಡಬ್ಲ್ಯೂ. ತರಗತಿಗಳಿಗೆ ೨೦೦೭- ೦೮ರಿಂದ ಮೂರು ಶೈಕ್ಷಣಿಕ ವರುಷದ ಅವಧಿಗೆ ಪಠ್ಯವಾಗಿ ಆಯ್ಕೆಯಾದ ಕಾದಂಬರಿ ಇದಾಗಿದೆ. ಕಸದ ತೊಟ್ಟಿಯ ಸ್ಥಳಾಂತರದಿಂದಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಡೆಯುವ ಘಟನಾವಳಿಗಳನ್ನು ನಿರೂಪಿಸುತ್ತಾ ಸಾಗುತ್ತದೆ. ಕಸದ ತೊಟ್ಟಿಯ ಸ್ಥಳಾಂತರದ ವಿಷಯವನ್ನೇ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ರಾಜಕೀಯವು ಜನಸಾಮಾನ್ಯರ ಬದುಕನ್ನು ಪ್ರಭಾವಿಸಿಬಿಡುವ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಿಳಿಸಿಕೊಡುವ ಕಾದಂಬರಿಯಾಗಿ ಇದನ್ನು ಗುರುತಿಸಿಕೊಳ್ಳಬಹುದು. ಸೀತಾಪುರದ ರಂಗಯ್ಯನ ಬೀದಿಯಲ್ಲಿ ನಡೆಯುವ ಕಥಾನಕವನ್ನು ಈ ಕಾದಂಬರಿ ಒಳಗೊಂಡಿದ್ದರೂ, ಇಲ್ಲಿ ಬರುವ ಸೀತಾಪುರ ಎನ್ನುವ ಹೆಸರು ಕರಾವಳಿ ಪ್ರದೇಶವನ್ನು ಸಂಕೇತಿಸುವುದಿಲ್ಲ. ಕಾದಂಬರಿಯಲ್ಲಿ ಪ್ರಸ್ತಾಪಗೊಳ್ಳುವ ರಾಜಾಜಿನಗರ ಎನ್ನುವ ಪ್ರದೇಶದ ಹೆಸರು, ಪಾತ್ರಗಳು, ಸಂಭಾಷಣೆ ಮೊದಲಾದವುಗಳನ್ನು ಗಮನಿಸಿಕೊಂಡಾಗ ಇಲ್ಲಿ ಬರುವ ಸೀತಾಪುರ ಬೆಂಗಳೂರನ್ನು ಸಂಕೇತಿಸಿರುವುದು ಸ್ಪಷ್ಟವಾಗುತ್ತದೆ. ಈ ಕಾದಂಬರಿಯನ್ನು ನೆಲ್ಲಿಮೇಲ ಭಾಸ್ಕರ ರಾವ್ ತೆಲುಗು ಭಾಷೆಗೆ ಅನುವಾದಿಸಿದ್ದು, 'ಚತುರ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ. 'ಪಂಥ' ಕಾದಂಬರಿಯಲ್ಲಿ ಮತಾಂತರದ ಕುರಿತ ವಿವರಗಳು ಪ್ರಧಾನ ನೆಲೆಯಲ್ಲಿವೆ. 'ಅರ್ಥ' ಕಾದಂಬರಿಯಲ್ಲಿ ಆಧುನಿಕ ಪ್ರಕ್ರಿಯೆಗಳ ಕುರಿತಾದ ಚರ್ಚೆಯಿದೆ. 'ಉಲ್ಲಂಘನೆ' ಮತ್ತು 'ಮುಖಾಂತರ' ಕಾದಂಬರಿಗಳು ಕರಾವಳಿ ಪ್ರದೇಶದ ಹಲವು ತಲೆಮಾರುಗಳ ಚಿತ್ರಣವನ್ನು ನೀಡುತ್ತವೆ. 'ಉಲ್ಲಂಘನೆ' ಕಾದಂಬರಿಯು ಮೂರು ತಲೆಮಾರುಗಳಲ್ಲಿ ಗುತ್ತಿನ ಮನೆಯಲ್ಲಾದ ಬದಲಾವಣೆಗಳನ್ನು ಗುರುತಿಸುವ ಮೂಲಕ ಕರಾವಳಿ ಪ್ರದೇಶದಲ್ಲಾದ ಸ್ಥಿತ್ಯಂತರಗಳ ವಿವರಣೆಯನ್ನು ಒದಗಿಸಿಕೊಟ್ಟಿದೆ. ಈ ಕಾದಂಬರಿಯನ್ನು ಶ್ರೀಮತಿ ಉಮಾ ಕುಲಕರ್ಣಿ ಪುಣೆ ಇವರು ಮರಾಠಿ ಭಾಷೆಗೆ ಅನುವಾದಿಸಿದ್ದಾರೆ. 'ಮುಖಾಂತರ' ಕಾದಂಬರಿಯಲ್ಲಿ ಆರು ತಲೆಮಾರುಗಳ ಹವ್ಯಕ ಜನಾಂಗದ ಕಥಾನಕವಿದೆ. 'ಧಾತು' ಕಾದಂಬರಿಯಲ್ಲಿ ಲೈಂಗಿಕತೆಯ ಕುರಿತಾದ ಜಿಜ್ಞಾಸೆಯನ್ನು ಕಾಣಬಹುದು. ದೈಹಿಕ ವಾಂಛೆಗಿಂತಲೂ ಭಾವನಾತ್ಮಕವಾದ ಸಂಬಂಧ ಹೆಚ್ಚು ಶಕ್ತಿಯುತವಾದದ್ದು ಎಂಬ ವಿಚಾರ ಕಾದಂಬರಿಯಲ್ಲಿ ವ್ಯಕ್ತಗೊಂಡಿದೆ. ೨೦೧೭ರ ನಂತರ ಮೊಗಸಾಲೆಯವರ ಮೂರು ಕಾದಂಬರಿಗಳು ಬಿಡುಗಡೆಯಾಗಿ ವಿಮರ್ಶಕರ ಗಮನ ಸೆಳೆದಿವೆ. ಇವುಗಳಲ್ಲಿ 'ಧರ್ಮಯುದ್ಧ' ಕಾದಂಬರಿಯು ಕರಾವಳಿ ಪ್ರದೇಶವನ್ನು ಕೇಂದ್ರೀಕರಿಸಿಕೊಂಡಿದ್ದು, ವೈಯಕ್ತಿಕ ಹಿತಾಸಕ್ತಿಗಳು, ಎರಡು ಗುಂಪುಗಳ ನಡುವಿನ ಕಿತ್ತಾಟಗಳು ಧಾರ್ಮಿಕ ಘರ್ಷಣೆಯೆಂಬಂತೆ ಬಿಂಬಿತಗೊಳ್ಳುವುದರ ಬಗೆಗಿನ ವಿಡಂಬನೆಯಿದೆ. 'ಇದ್ದೂ ಇಲ್ಲದ್ದು' ಕಾದಂಬರಿಯಲ್ಲಿ ಹಿಂದಿನ ತಲೆಮಾರಿನ

ಧಾರ್ಮಿಕ ನಂಬಿಕೆ– ಆಚರಣೆಗಳು ಆಧುನಿಕ ತಲೆಮಾರಿನವರಲ್ಲಿ ಉಂಟುಮಾಡುವ ಜಿಜ್ಞಾಸೆ– ತೊಳಲಾಟಗಳ ಚಿತ್ರಣವಿದೆ. 'ನೀರಿನೊಳಗಿನ ಮಂಜು' ಕಾದಂಬರಿಯು ಲೈಂಗಿಕತೆಯ ಕುರಿತಾಗಿದೆ.

ಡಾ। ಮೊಗಸಾಲೆ ಸಣ್ಣಕಥೆಗಳ ಕುರಿತಾದ ನಿಲುವುಗಳನ್ನೂ ಬದಲಾಯಿಸಿಕೊಂಡು ತನ್ನ ಬರೆವಣಿಗೆಯ ಆರಂಭದ ಕಾಲಘಟ್ಟದ ಕಥೆಗಳಿಗಿಂತ ಭಿನ್ನವಾದ ಮಾದರಿಯನ್ನು ಅಳವಡಿಸಿಕೊಂಡರು. ಡಾ। ನಾ. ಮೊಗಸಾಲೆಯವರ ರಚನೆಯ ಆರು ಕಥಾ ಸಂಕಲನಗಳು ಪ್ರಕಟಗೊಂಡಿವೆ. 'ಆಶಾಂಕುರ' ಸಂಕಲನದಲ್ಲಿ ಡಾ। ನಾ. ಮೊಗಸಾಲೆಯವರ ನಾಲ್ಕು ಕಥೆಗಳ ಜೊತೆಗೆ ಬಿ. ಎನ್. ಜೋಗಿತ್ತಾಯರ ಐದು ಕಥೆಗಳನ್ನೂ ಕಾಣಬಹುದು. ಇದರಲ್ಲಿ ಮೊಗಸಾಲೆಯವರ ನಾಲ್ಕು ಕಥೆಗಳಲ್ಲಿ ಎರಡು ಕಥೆಗಳು ಕೌಟುಂಬಿಕ ವಿಚಾರಗಳನ್ನು ಪ್ರಸ್ತಾಪಿಸುತ್ತವೆ. ಉಳಿದ ಎರಡು ಕಥೆಗಳು ಸಾಮಾಜಿಕ ದೃಷ್ಟಿಕೋನವನ್ನು ಹೊಂದಿರುವ ಕಥೆಗಳಾಗಿವೆ. 'ಹಸಿರು ಬಿಸಿಲು' ಸಂಕಲನವು ಎರಡು ಕಥೆಗಳನ್ನು ಮಾತ್ರವೇ ಹೊಂದಿದ್ದು, ಆ ಎರಡೂ ಕಥೆಗಳು ಕೌಟುಂಬಿಕ ಚಿತ್ರಣವನ್ನು ಮಾತ್ರವೇ ಒದಗಿಸಿಕೊಡುತ್ತವೆ. 'ಸುಂದರಿಯ ಎರಡನೇ ಅವತಾರ ಮತ್ತು ಇತರ ಕತೆಗಳು' ಸಂಕಲನದಲ್ಲಿ ಒಟ್ಟು ಏಳು ಕಥೆಗಳಿವೆ. ಸಮಾಜದ ರೂಢೀಗತ ವ್ಯವಸ್ಥೆಯ ವಿರುದ್ಧವಾಗಿ ಕಾರ್ಯಾಚರಿಸುವ ಪ್ರಯತ್ನ, ಸ್ಥಳೀಯ ರಾಜಕಾರಣದ ಸೂಕ್ಷ್ಮತೆ, ಪೂರ್ವಗ್ರಹಪೀಡಿತ ಅಭಿಪ್ರಾಯಗಳಿಂದ ಭಿನ್ನವಾಗಿರಬಹುದಾದ ನೈಜ ವ್ಯಕ್ತಿತ್ವ, ನ್ಯಾಯದ ಪರವಾಗಿ ನಿಂತ ವ್ಯಕ್ತಿ ಸಮಾಜಘಾತುಕ ವ್ಯಕ್ತಿಗಳಿಂದ ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ, ಸ್ಥಳಿಯ ರಾಜಕಾರಣದಲ್ಲಿ ಜಾತಿ– ಧರ್ಮಗಳ ಪಾತ್ರ– ಮೊದಲಾದ ಹಲವು ಸಂಗತಿಗಳು ಈ ಕಥೆಗಳ ಮೂಲಕ ವ್ಯಕ್ತಗೊಂಡಿವೆ. 'ಸೀತಾಪುರದ ಕತೆಗಳು' ಸಂಕಲನದಲ್ಲಿ ೧೪ ಕಥೆಗಳಿವೆ. ಇವುಗಳಲ್ಲಿ 'ಇದು ನೀವೇ ಕೊಟ್ಟ ತೀರ್ಪು, ದೇವರೇ', 'ಲಂಗೋಟಿಯ ನ್ಯಾಯಪ್ರಕರಣ ಎಂಬ ಕಥಾವಾಚನವು', 'ಬೀಜದೊಳಗಿನ ಬೀಜ', 'ಮಾಯೆ ಅಲ್ಲದ ಮಾಯೆ' 'ಬಿಜಾಗರಿ' ಹಾಗೂ 'ಪುರುಷಾರ್ಥ' ಕಥೆಗಳಲ್ಲಿ ಮನುಷ್ಯ ಸ್ವಭಾವದ ಸೂಕ್ಷ್ಮತೆಗಳನ್ನು ಹಲವು ನೆಲೆಗಳಲ್ಲಿ ವ್ಯಕ್ತಪಡಿಸಲಾಗಿದೆ. 'ಹರಕೆಯ ಕೋಳಿ', 'ಮಾತು ಕತೆಯಾದ ಕತೆ' ಹಾಗೂ 'ಕೋಟಿಲ್ಲದ ಕೋರ್ಟು' ಕಥೆಗಳು ಜಮೀನ್ದಾರಿಕೆ ವ್ಯವಸ್ಥೆಯು ಸಮಾಜದ ಜನರನ್ನು ಶೋಷಿಸುತ್ತಿದ್ದ ಪರಿಯನ್ನು ತಿಳಿಸುತ್ತವೆ. 'Go (ಗೋ)– ದಾನ' ಕಥೆಯು ಸಂಪ್ರದಾಯಗಳನ್ನು ಅನುಕೂಲಕ್ಕೆ ತಕ್ಕಂತೆ ಮಾರ್ಪಾಡಿಸಲು ಹೊರಡುವ ಸ್ವಾರ್ಥಪರ ಮನೋಭಾವದ ಕುರಿತು ಕೇಂದ್ರೀಕೃತವಾಗಿದೆ. 'ಪ್ರಭುಸಮ್ಮಿತ' ಹಾಗೂ 'ಅಪ್ಪ ಅಮ್ಮನ ಪುಣ್ಯ' ಕಥೆಗಳು ಮನುಷ್ಯ ಸಂಬಂಧಗಳ ಯಥಾವತ್ ಮುಂದುವರಿಕೆ ಹಾಗೂ ಅದಃಪತನಗಳೆರಡನ್ನೂ ಪಾತ್ರಗಳ ಮನೋಧರ್ಮದ ಮೂಲಕ ತಿಳಿಸಿಕೊಟ್ಟಿವೆ. 'ಒಳಗಿದ್ದವಳು (ನು)' ಕಥೆಯು ಮಹಿಳಾ ಬಂಡಾಯವನ್ನು ವ್ಯಕ್ತಪಡಿಸಿದರೆ, 'ಈ ಕತೆ ಸುಮ್ಮನೆ ಅಲ್ಲ' ಕಥೆಯಲ್ಲಿ ವೈಚಾರಿಕ ಪ್ರಜ್ಞೆ ಕೆಲಸ ಮಾಡಿದೆ. 'ಸೀತಾಪುರದಲ್ಲಿ ಗಾಂಧೀಜಿ' ಸಂಕಲನವು ಒಂಭತ್ತು ಕಥೆಗಳನ್ನು ಒಳಗೊಂಡಿದೆ. ಈ ಒಂಭತ್ತು ಕಥೆಗಳಲ್ಲಿ ಎಲ್ಲಿಯೂ ಗಾಂಧೀಜಿಯವರು ಭೌತಿಕವಾಗಿ ಕಾಣಿಸಿಕೊಳ್ಳದಿದ್ದರೂ, ಕಥೆಗಳಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳ ವ್ಯಕ್ತಿತ್ವದ ಮೂಲಕ ಗಾಂಧಿ ಸಿದ್ಧಾಂತಗಳು ಪ್ರಕಟಗೊಂಡಿವೆ. 'ಸನ್ನಿಧಿಯಲ್ಲಿ ಸೀತಾಪುರ' ಕಥಾ ಸಂಕಲನದಲ್ಲಿ ಅಲ್ಲಮಪ್ರಭುವಿನ ತತ್ವಗಳನ್ನು ಕಥಾ ಸನ್ನಿವೇಶಕ್ಕೆ, ಪಾತ್ರಗಳ ಮನೋಭೂಮಿಕೆಗೆ ಅಳವಡಿಸುವ ಪ್ರಯತ್ನವಿದೆ.

ಮೊಗಸಾಲೆಯವರ ಸಾಧನೆಗಾಗಿ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಬಿ. ಎಚ್. ಶ್ರೀಧರ ಕಾವ್ಯ ಪ್ರಶಸ್ತಿ, ಉಗ್ರಾಣ ಸಾಹಿತ್ಯ ಪ್ರಶಸ್ತಿ, ಪೆರ್ಲ ಕಾವ್ಯ ಪ್ರಶಸ್ತಿ, ಬಿಷಕ್ ಸಾಹಿತ್ಯ ರತ್ನ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ, ಶಿವರಾಮ ಕಾರಂತ ಗೌರವ ಪ್ರಶಸ್ತಿ, ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿ, ಹಾವನೂರು ಪ್ರಶಸ್ತಿ, ವಿಶುಕುಮಾರ್ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಡಿ. ಎಸ್. ಕರ್ಕಿ ಕಾವ್ಯ ಪ್ರಶಸ್ತಿ, ಶ್ರೀಕೃಷ್ಣಾನುಗ್ರಹ ಪ್ರಶಸ್ತಿ, ಕುವೆಂಪು ಕಾದಂಬರಿ ಪ್ರಶಸ್ತಿ, ಚದುರಂಗ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಿದ್ಧವನಹಳ್ಳಿ ಕೃಷ್ಣ ಶರ್ಮ ಪ್ರಶಸ್ತಿ, ಗೋರಖನಾಥ ಪುರಸ್ಕಾರ, ನಿರಂಜನ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಗಳಗನಾಥ

ಕಾದಂಬರಿಕಾರ ಪ್ರಶಸ್ತಿ, ಡಾ. ಶಿವರಾಮ ಕಾರಂತ ಪುರಸ್ಕಾರ– ಮೊದಲಾದ ಪ್ರಶಸ್ತಿಗಳು ದೊರೆತಿವೆ. ಬೆಂಗಳೂರು ದೂರದರ್ಶನವು ೨೦೧೪ರಲ್ಲಿ ಇವರ ಕುರಿತಾದ ಸಾಕ್ಷ್ಯಚಿತ್ರವನ್ನು ನಿರ್ಮಿಸಿ, ಪ್ರಸಾರ ಮಾಡಿದೆ. ೧೯೮೦ರಿಂದ ೧೯೮೩ರವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

'ಡಾ। ನಾ. ಮೊಗಸಾಲೆಯವರ ಸಾಹಿತ್ಯ ಪ್ರಕಾರಗಳಲ್ಲಿ ಪ್ರಾದೇಶಿಕತೆ' ಎನ್ನುವುದು ಮೂರನೇ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಮೊಗಸಾಲೆಯವರ ಸಣ್ಣಕಥೆಗಳು, ಕಾದಂಬರಿಗಳು ಮತ್ತು ಕಾವ್ಯದಲ್ಲಿ ವ್ಯಕ್ತಗೊಂಡಿರುವ ಪ್ರಾದೇಶಿಕತೆಯನ್ನು ಗುರುತಿಸಿಕೊಳ್ಳಲಾಗಿದೆ. ಮೊಗಸಾಲೆಯವರ ಆರಂಭದ ಎರಡು ಕಥಾ ಸಂಕಲನಗಳಾದ ಆಶಾಂಕುರ ಹಾಗೂ ಹಸಿರು ಬಿಸಿಲು ಇವುಗಳನ್ನು ಹೊರತುಪಡಿಸಿ ಉಳಿದ ನಾಲ್ಕು ಸಂಕಲನಗಳ ಕಥೆಗಳಲ್ಲಿ ಪ್ರಾದೇಶಿಕತೆ ವ್ಯಕ್ತಗೊಂಡಿದೆ. ಅಂದರೆ, ಮೊಗಸಾಲೆಯವರ ರಚನೆಯ ೪೨ ಕಥೆಗಳಲ್ಲಿ ಹಲವು ಆಯಾಮಗಳಲ್ಲಿ ಕರಾವಳಿ ಪ್ರದೇಶವು ಗಮನಿಸಲ್ಪಟ್ಟಿದೆ. ಮೊಗಸಾಲೆಯವರ ಸಣ್ಣಕಥೆಗಳಲ್ಲಿ ನಿರಂತರತೆಯ ಅಂಶ ಕಂಡುಬರುತ್ತದೆ. 'ಸುಂದರಿಯ ಎರಡನೇ ಅವತಾರ' ಸಂಕಲನದಿಂದ ತೊಡಗಿ 'ಸನ್ನಿಧಿಯಲ್ಲಿ ಸೀತಾಪುರ' ಸಂಕಲನದವರೆಗೂ ಕೂಡಾ ಪ್ರದೇಶದ ನೆಲೆಯ ನಿರಂತರತೆ ಕಂಡುಬರುತ್ತದೆ. 'ಸೀತಾಪುರ' ಎನ್ನುವ ಕಾಲ್ಪನಿಕ ಪ್ರದೇಶವನ್ನು ನೆಲೆಯಾಗಿಟ್ಟುಕೊಂಡು ಕರಾವಳಿ ಪ್ರದೇಶವನ್ನು ಮೊಗಸಾಲೆಯವರು ಸೃಜನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಮೊಗಸಾಲೆಯವರ ಕಥೆಗಳಲ್ಲಿ ಪಾತ್ರದ ನೆಲೆಯ ನಿರಂತರತೆಯನ್ನು ಕುಪ್ಪಣ್ಣಯ್ಯ ಪಾತ್ರದ ಮೂಲಕ ಗುರುತಿಸಬಹುದು. ಬಹುತೇಕ ಕಥೆಗಳಲ್ಲಿ ಕಾಣಿಸಿಕೊಳ್ಳುವ ಕುಪ್ಪಣ್ಣಯ್ಯ ಪಾತ್ರವು, ಎಲ್ಲಾ ಸಂದರ್ಭಗಳಲ್ಲಿಯೂ ಒಟ್ಟು ಕಥಾ ಬೆಳವಣಿಗೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

'ಸುಂದರಿಯ ಎರಡನೇ ಅವತಾರ' ಸಂಕಲನದ ಮೊದಲ ಕಥೆ 'ಐಕಾರ್ನಿಯಾ'ದಲ್ಲಿ ಕರಾವಳಿ ಪ್ರದೇಶದಲ್ಲಿ ರೂಪುಗೊಂಡಿರುವ ಅಧಿಕಾರಶಾಹಿತ್ವದ ವಿರುದ್ಧ ಯುವ ತಲೆಮಾರು ಹೋರಾಟ ನಡೆಸುವ ಪ್ರಯತ್ನ ಕಂಡುಬರುತ್ತದೆ. ಶಿಕ್ಷಣವನ್ನು ಪಡೆದ ಯುವ ತಲೆಮಾರು ಪ್ರಭುತ್ವದ ವಿರುದ್ಧ ಬಂಡಾಯವೇಳುವ ಚಿತ್ರಣವಿದೆ. 'ಕಿಡ್ನಿ' ಕಥೆಯು ರಾಜಕಾರಣಿಯೊಬ್ಬರ ಪತ್ನಿಗೆ ದಲಿತ ಜನಾಂಗದ ಗುಡ್ಡನ ಕಿಡ್ನಿಯನ್ನು ಕಸಿ ಮಾಡಿಸಿದ ವಿಚಾರ ಪ್ರಾದೇಶಿಕವಾಗಿ ರಾಜಕೀಯ ಸ್ಥಿತ್ಯಂತರಕ್ಕೆ ಕಾರಣ ಮಾಡಿಕೊಡುವುದನ್ನು ಪ್ರಧಾನ ನೆಲೆಯಲ್ಲಿ ಒಳಗೊಂಡಿದೆ. ನೈಜ ಆಶಯವನ್ನು ಹೊಂದಿಲ್ಲದ ಚಳುವಳಿಯು ಗಮನಾರ್ಹ ಪರಿಣಾಮವನ್ನು ಬೀರದೆಯೇ ವಿಫಲತೆಯೊಂದಿಗೆ ಕೊನೆಗಾಣುವುದನ್ನು ಕಥೆ ಚಿತ್ರಿಸಿದೆ. ಪ್ರಾದೇಶಿಕ ರಾಜಕೀಯದಲ್ಲಿ ಮಹಿಳೆಯರನ್ನು ಕೇವಲ ನಾಮಕಾವಸ್ಥೆಗೆ ಬಳಸಿಕೊಳ್ಳುವುದರ ಕುರಿತ ಉಲ್ಲೇಖ 'ಹದ್ದು' ಕಥೆಯಲ್ಲಿದೆ. ಸ್ಥಳೀಯ ಪ್ರಭುತ್ವದಲ್ಲಿ ಎಲ್ಲರೂ ಅವಕಾಶ ಪಡೆದುಕೊಳ್ಳುವಂತಾಗಬೇಕು ಎನ್ನುವ ಸಾಮಾಜಿಕ ಆಶಯವನ್ನು ಇಲ್ಲಿನ ರಾಜಕೀಯ ವ್ಯಕ್ತಿಗಳು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಕಥೆ ಮನಗಾಣಿಸುತ್ತದೆ. ಪ್ರಾದೇಶಿಕವಾಗಿ ರಾಜಕಾರಣಿಗಳಲ್ಲಿರುವ ಇಬ್ಬಂದಿತನ, ಧರ್ಮ ಮತ್ತು ಜಾತ್ಯತೀತತೆ ಪ್ರಾದೇಶಿಕ ರಾಜಕಾರಣದಲ್ಲಿ ಬೀರುವ ಪ್ರಭಾವ ಮೊದಲಾದವುಗಳನ್ನು ದುಗ್ಗೇಗೌಡರ ಪಾತ್ರ ಚಿತ್ರಣದ ಮೂಲಕ ವ್ಯಕ್ತಗೊಳಿಸಲಾಗಿದೆ. 'ಸುಂದರಿಯ ಎರಡನೇ ಅವತಾರ' ಕಥೆಯಲ್ಲಿ ಪ್ರಾದೇಶಿಕವಾಗಿ ರಾಜಕೀಯವು ಬೀರುವ ಪ್ರಭಾವವನ್ನು ಹೇಳಲಾಗಿದೆ. ಅತ್ಯಾಚಾರ ಪ್ರಕರಣವೊಂದರಲ್ಲಿ ಸ್ಥಳೀಯ ರಾಜಕಾರಣವು ವಹಿಸುವ ಪಾತ್ರವನ್ನು ಕಥೆಯ ಮೂಲಕ ಗಮನಿಸಬಹುದು. 'ಹಸಿದ ವೇಳೆಗೆ ಸಿಕ್ಕಿದೊಡವೆಯ' ಕಥೆಯಲ್ಲಿ 'ಸಿದ್ಧನಕೆರೆ' ಎನ್ನುವ ಪ್ರದೇಶಕ್ಕೆ ಆ ಹೆಸರು ಬಂದುದರ ಹಿನ್ನೆಲೆಯನ್ನು ಹೇಳಲಾಗಿದೆ.

ಸೀತಾಪುರ ಎನ್ನುವ ಕಾಲ್ಪನಿಕ ಪ್ರದೇಶವನ್ನು ನೆಲೆಯಾಗಿಟ್ಟುಕೊಂಡು ಅದರ ಆಧಾರದಲ್ಲಿಯೇ ನಡೆಯುವ ಪಾತ್ರಪೋಷಣೆ, ಕಥಾಹಂದರದ ಬೆಳವಣಿಗೆ, ಸನ್ನಿವೇಶಗಳ ವಿವರಣೆ ಮೊದಲಾದವುಗಳನ್ನು ಅತ್ಯಂತ ಸ್ಪಷ್ಟವಾಗಿ

'ಸೀತಾಪುರದ ಕಥೆಗಳು' ಸಂಕಲನದಲ್ಲಿ ಗಮನಿಸಿಕೊಳ್ಳಬಹುದು. ಈ ಸಂಕಲನದ 'ಪ್ರಭುಸಮ್ಮಿತ' ಕಥೆಯಲ್ಲಿ ಭೂಮಸೂದೆ, ಕೃಷಿ ಪದ್ಧತಿಯಲ್ಲಾದ ಸ್ಥಿತ್ಯಂತರ, ಜಮೀನ್ದಾರರಲ್ಲಿದ್ದ ಮಾನವೀಯತೆ, ತಲೆಮಾರುಗಳ ನಡುವಿನ ಅಂತರ– ಮೊದಲಾದವುಗಳ ಚಿತ್ರಣವಿದೆ. 'ಹರಕೆಯ ಕೋಳಿ' ಕಥೆಯು ಇಲ್ಲಿನ ಜಮೀನ್ದಾರಿಕೆ ವ್ಯವಸ್ಥೆಯ ಕರಾಳತೆಯನ್ನು ಅತ್ಯಂತ ಸೂಚ್ಯವಾಗಿ, ಸಾತ್ವಿಕ ರೂಪದಲ್ಲಿ ವ್ಯಕ್ತಗೊಳಿಸಿದೆ. ಶ್ರಮಿಕ ವರ್ಗದವರಲ್ಲಿದ್ದ ಅಜ್ಞಾನ, ಬೇಜವಾಬ್ದಾರಿತನ, ಸಂಘರ್ಷಗಳನ್ನು ಜಮೀನ್ದಾರರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಈ ಕಥೆಯಲ್ಲಿ ಆಂಶಿಕವಾಗಿ ಸಾಂಸ್ಕೃತಿಕ ಪಲ್ಲಟ ಹಾಗೂ ಪ್ರತಿಸಂಸ್ಕೃತಿಯನ್ನು ಪ್ರಾದೇಶಿಕ ಐತಿಹ್ಯದ ಆಧಾರದಲ್ಲಿ ತರಲಾಗಿದೆ. ಜೈನ ಪೆರ್ಗಡೆಯವರ ಬದಲಾದ ಮನೋಭಾವದಿಂದಾಗಿ ಮಾರಿಗುಡಿಯಲ್ಲಿ ಪ್ರಾಣಿಬಲಿ ನಿಲ್ಲುತ್ತದೆ. 'ಬೀಜದೊಳಗಿನ ಬೀಜ' ಕಥೆಯಲ್ಲಿ ಭೂಮಸೂದೆಯ ವಿವರವಿದೆ. 'ಪುರುಷಾರ್ಥ' ಕಥೆಯು ಪ್ರಾದೇಶಿಕ ಕಲೆಯಾದ ಯಕ್ಷಗಾನವನ್ನು ಪ್ರಧಾನ ನೆಲೆಯಲ್ಲಿ ಒಳಗೊಂಡಿದೆ. ಕುರಿಯ ವಿಠಲ ಶಾಸ್ತ್ರಿ, ಕೋಳ್ಯೂರು ರಾಮಚಂದ್ರ ರಾವ್, ಹೊಸಹಿತ್ಲು ಮಹಾಲಿಂಗ ಭಟ್, ಕೋಳ್ಯೂರು ನಾರಾಯಣ ಭಟ್ಟ, ವಿದ್ಯಾ ಕೋಳ್ಯೂರು, ಭಾಸ್ಕರ ಕೋಳ್ಯೂರು ಮೊದಲಾದ ಕಲಾವಿದರುಗಳನ್ನು ಹೊಂದಿದ್ದ ಕೋಳ್ಯೂರು ಪ್ರದೇಶವು ಯಕ್ಷಗಾನ ಕಲೆಗೆ ಪ್ರಸಿದ್ಧವಾಗಿತ್ತು ಎಂಬ ಉಲ್ಲೇಖವನ್ನು 'ಅಪ್ಪ ಅಮ್ಮನ ಪುಣ್ಯ' ಕಥೆಯು ಒಳಗೊಂಡಿದೆ. ಕೋಳ್ಯೂರು ಶಂಕರ ನಾರಾಯಣ ದೇವಸ್ಥಾನದ 'ಮಂಡಲ ಪೂಜೆ'ಯ ವಿವರಣೆಯೂ ಇಲ್ಲಿದೆ. 'ಕೋಟಿಲ್ಲದ ಕೋರ್ಟು' ಕಥೆಯಲ್ಲಿ ನೈತಿಕ ಕಾನೂನು– ಕಟ್ಟುಪಾಡುಗಳ ನೆಪದಲ್ಲಿ ತಿಮ್ಮರಾಯ ಹೆಗ್ಡೆ ಒಕ್ಕಲಿನವರನ್ನು ಶೋಷಣೆಗೆ ಒಳಪಡಿಸುತ್ತಾರೆ. 'ಮಾತು ಕತೆಯಾದ ಕತೆ' ಕಥೆಯಲ್ಲಿ ಗುತ್ತಿನ ಮನೆಯ ಮೈಂದಪ್ಪ ನಡೆಸುತ್ತಿದ್ದ ಲೈಂಗಿಕ ಶೋಷಣೆಯ ಚಿತ್ರಣವಿದೆ. ಈ ರೀತಿಯ ಶೋಷಣೆಯನ್ನು ಸಹಜವೆಂಬಂತೆ ಸ್ವೀಕರಿಸುವ ಅನಿವಾರ್ಯತೆ ಒಕ್ಕಲಿನವರದ್ದಾಗಿತ್ತು. ಜನರಲ್ಲಿರುವ ನಿರಾಸಕ್ತಿ– ನಿರ್ಲಿಪ್ತತೆಯನ್ನು, ಚಿಂತನಾ ವಿಧಾನ– ಜೀವನ ವಿಧಾನಗಳಲ್ಲಿರುವ ಬಹುಮುಖತೆಯನ್ನು ಈ ಸಂಕಲನದ ಹಲವು ಕಥೆಗಳು ಕಟ್ಟಿಕೊಡುತ್ತವೆ. ತಮ್ಮ ಸುತ್ತಮುತ್ತಲಿನ ವಿದ್ಯಮಾನಕ್ಕೆ ಪ್ರತಿಸ್ಪಂದಿಸದಿರುವ ತಟಸ್ಥ ಭಾವನೆಯನ್ನು 'ಇದು ನೀವೇ ಕೊಟ್ಟ ತೀರ್ಪು, ದೇವರೇ!' ಕಥೆಯಲ್ಲಿ ಸೀತಾಪುರದ ಜನರು ವ್ಯಕ್ತಪಡಿಸುತ್ತಾರೆ. ಸಂಪ್ರದಾಯಸ್ಥರಾಗಿದ್ದೂ ವೈಚಾರಿಕವಾಗಿ ಯೋಚಿಸುವ ಮನೋಧರ್ಮ ಮಧ್ವರಾಯ ಭಟ್ಟರ ಮೂಲಕ ವ್ಯಕ್ತಗೊಳ್ಳುತ್ತದೆ. 'ಈ ಕತೆ ಸುಮ್ಮನೆ ಅಲ್ಲ' ಕಥೆಯ ಆದರ್ಶ ವೈಚಾರಿಕತೆಯನ್ನು ಪ್ರತಿಪಾದಿಸುವ ಯುವಜನಾಂಗದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. 'ಸೀತಾಪುರದಲ್ಲಿ ಗಾಂಧೀಜಿ' ಸಂಕಲನದಲ್ಲಿ ಪ್ರಾದೇಶಿಕತೆಯನ್ನು ನೆಲೆಯಾಗಿರಿಸಿಕೊಂಡು ಗಾಂಧಿ ಪ್ರಣೀತವಾದ ತತ್ವ– ಸಿದ್ಧಾಂತಗಳ ಶೋಧ ನಡೆಸುವ ಪ್ರಯತ್ನವಿದೆ. ಇಲ್ಲಿನ ಕಥೆಗಳಲ್ಲಿನ ಬಹುತೇಕ ಪಾತ್ರಗಳು ಗಾಂಧಿಪ್ರಜ್ಞೆಯ ಸಾಕಾರ ರೂಪಗಳಾಗಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ರಾಷ್ಟ್ರಮಟ್ಟದಲ್ಲಿ ಚರ್ಚಿತವಾದ ಗೋಹತ್ಯೆ ನಿಷೇಧ ವಿಷಯವು ಪ್ರಾದೇಶಿಕವಾಗಿ ಬೀರುವ ಪ್ರಭಾವವನ್ನು, ಅದರ ಪರಿಣಾಮವನ್ನು ಮುಂದಿಡುವ ಕಾರಣಕ್ಕಾಗಿ 'ದನಕರು' ಕಥೆ ಮುಖ್ಯವಾಗುತ್ತದೆ. ಗೋಹತ್ಯೆ ನಿಷೇಧದ ಪರವಾಗಿರುವ ಕುಪ್ಪಣ್ಣಯ್ಯನವರಿಗೆ ಎದುರಾಗುವ ಸಮಸ್ಯೆಯನ್ನು ತಿಳಿಸುವ ಮೂಲಕ ಗೋಹತ್ಯೆ ನಿಷೇಧವನ್ನು ವಿರೋಧಿಸುವ ಮನಃಸ್ಥಿತಿ ತಪ್ಪು ಎಂಬ ಅಭಿಪ್ರಾಯವನ್ನು ಈ ಕಥೆಯ ಮೂಲಕ ಮೊಗಸಾಲೆಯವರು ಮಂಡಿಸಿದಂತೆ ಕಂಡುಬರುತ್ತದೆ. ಗೋವು ಎನ್ನುವುದು ಶ್ರಮಿಕ ವರ್ಗದವರ ಆಹಾರ ಎನ್ನುವುದನ್ನು ಮೊಗಸಾಲೆಯವರು ಪರಿಗಣಿಸಿಲ್ಲ. ಕರಾವಳಿ ಪ್ರದೇಶದ ಸಾಮಾನ್ಯ ಜನರಲ್ಲಿರುವ ವಿಶೇಷ ಪರಿಣತಿಯನ್ನು ಗುರುತಿಸುವ ಪ್ರಯತ್ನ 'ಒದ್ದೆಯಾದ ಆಕಾಶ' ಹಗೂ 'ನುಗ್ಗೆಗಿಡ' ಕಥೆಗಳಲ್ಲಿದೆ. ಅಪ್ಪಿ ಎನ್ನುವ ನಾಟಿ ವೈದ್ಯೆಯನ್ನು 'ಒದ್ದೆಯಾದ ಆಕಾಶ' ಕಥೆಯಲ್ಲಿ ಹೆಸರಿಸಲಾಗಿದೆ. ಬಾಲಗ್ರಹ ಪೀಡೆಗಾಗಿ ಆಕೆ ಚಿಹ್ನೆ ಮಾತ್ರೆ ತಯಾರಿಸಿಕೊಡುತ್ತಿದ್ದಳು. ಸರ್ಪಸುತ್ತು, ದದ್ದು ರೋಗ, ಜಾನುವಾರುಗಳ ರೋಗಗಳಿಗೆ ಚಿಕಿತ್ಸೆ ನೀಡುತ್ತಿದ್ದಳು ಎಂಬ ಉಲ್ಲೇಖವಿದೆ. ವಿದೇಶೀ ವೈದ್ಯರ ಮೂಲಕವೂ ನಿಯಂತ್ರಣಕ್ಕೆ ಬಾರದ ಸರ್ಪಸುತ್ತು ಖಾಹಿಲೆ ಸೀತಾಪುರದ ಸಾಮಾನ್ಯ ಮಹಿಳೆಯ ಹಳ್ಳಿಮದ್ದಿನಿಂದಾಗಿ ಗುಣವಾಗುತ್ತಿದೆ ಎನ್ನುವ ಉಲ್ಲೇಖ 'ದನಕರು' ಕಥೆಯಲ್ಲಿದೆ. 'ಭೂಮಿ ಮತ್ತು ಆಕಾಶ' ಕಥೆಯಲ್ಲಿ ಆಹಾರ ಧಾನ್ಯಗಳ ಜಾಗವನ್ನು ವಾಣಿಜ್ಯ ಬೆಳೆಗಳು ಆಕ್ರಮಿಸುತ್ತವೆ. ಭತ್ತದ ಗದ್ದೆಗಳಾಗಿದ್ದ ಪ್ರದೇಶಗಳು ತೆಂಗು, ಅಡಿಕೆ,

ಬಾಳೆಗಿಡಗಳು ಬೆಳೆಯುವ ಜಾಗಗಳಾಗುತ್ತವೆ. ಕೃಷಿ ಭೂಮಿ ವಿಶೇಷ ಆರ್ಥಿಕ ವಲಯಕ್ಕೆ ಹೋಗಿರುವುದು, ಕೃಷಿಯ ದುಡಿಮೆಗೆ ಜನ ಇಲ್ಲ ಮೊದಲಾದ ಉಲ್ಲೇಖಗಳು ಕೃಷಿಯ ಅಧಃಪತನವನ್ನು ಸೂಚಿಸುತ್ತವೆ. 'ಒದ್ದೆಯಾದ ಆಕಾಶ' ಕಥೆಯ ಕೊರಗ ಶೆಟ್ಟರು ತಮಗೆ ಭೂಮಿಯನ್ನು ಗೇಣಿಗೆ ಕೊಟ್ಟ ಫಲಿಮಾರು ಮಠದ ಕುರಿತು ಭೂಮಸೂದೆ ಜಾರಿ ಸಂದರ್ಭದಲ್ಲಿ ಅತೀವವಾದ ನಿಷ್ಠೆಯನ್ನು ತೋರಿಸುತ್ತಾರೆ. 'ಮಳೆಯ ನೀರು ಮತ್ತೆ ಸಮುದ್ರಕ್ಕೆ' ಕಥೆಯಲ್ಲಿ ಭೂಮಸೂದೆ ಜಾರಿಗೆ ಬಂದಾಗ ಸೀತಾಪುರದ ಉಳಿದ ಜಮೀನ್ದಾರರು ಒಕ್ಕಲಿನವರ ಜೊತೆಗೆ ಸಂಘರ್ಷಕ್ಕಿಳಿಯುತ್ತಾರೆ. ಆದರೆ ಚೀಂಕ್ರ ಶೆಟ್ಟರು ವಿರೋಧ ವ್ಯಕ್ತಪಡಿಸುವುದಿಲ್ಲ. 'ಮಳೆಯ ನೀರು ಮತ್ತೆ ಸಮುದ್ರಕ್ಕೆ' ಕಥೆಯಲ್ಲಿ ಆಧುನಿಕ ತಲೆಮಾರಿನ ಮನಃಸ್ಥಿತಿಗೆ ಪೂರಕವಾಗಿ ಹಿಂದಿನ ತಲೆಮಾರಿನವರ ಮನಃಸ್ಥಿತಿ ಬದಲಾಗುತ್ತಿರುವ ಚಿತ್ರಣವಿದೆ. 'ಸುಣ್ಣ ಎದ್ದು ಹೋದ ಗೋಡೆ' ಕಥೆಯಲ್ಲಿ ಕನ್ನಡ ಶಾಲೆಯನ್ನು ಉಳಿಸಿಕೊಳ್ಳುವ ಹಪಾಹಪಿಯಿದೆ. ಸ್ವಂತಿಕೆಯನ್ನು ಮರೆತು ಪರಭಾಷೆಯ ಕುರಿತ ವ್ಯಾಮೋಹ ರೂಪುಗೊಳ್ಳುತ್ತಿರುವುದರ ಬಗೆಗೆ ವಿಷಾದವಿದೆ. 'ಸೀತಾಪುರದಲ್ಲಿ ಗಾಂಧೀಜಿ' ಕಥೆಯಲ್ಲಿ ನಾಗನ ಕುರಿತಾದ ನಂಬಿಕೆ ವ್ಯಕ್ತಗೊಂಡಿದೆ. 'ಇನ್ನು ಮುಂದೆ ಶಬ್ದ ಇಲ್ಲ' ಕಥೆಯಲ್ಲಿ ಪುಟ್ಟಣ್ಣಯ್ಯನವರು ತನ್ನ ಹಿರಿಯರ ಕಾಲದ ನಾಗಬನದಲ್ಲಿ ಆಶ್ಲೇಷ ಬಲಿ ನಡೆಸುವ ಉದ್ದೇಶದಿಂದ ಸೀತಾಪುರಕ್ಕೆ ಬರುತ್ತಾರೆ.

'ಸನ್ನಿಧಿಯಲ್ಲಿ ಸೀತಾಪುರ' ಸಂಕಲನವು ಅಲ್ಲಮಪ್ರಭುವಿನ ದಾರ್ಶನಿಕತೆಗಳನ್ನು ಕರಾವಳಿ ಪ್ರದೇಶಕ್ಕೆ ಅನ್ವಯಿಸಿಕೊಳ್ಳುವ ಸೃಜನಶೀಲ ಪ್ರಯತ್ನ ನಡೆಸಿದೆ. ಈ ಸಂಕಲನದಲ್ಲಿ ೧೨ ಕಥೆಗಳಿವೆ. ಇವುಗಳಲ್ಲಿ ಅಲ್ಲಮಪ್ರಭುವಿನ ವಚನಗಳನ್ನು ನೆಲೆಯಾಗಿಟ್ಟುಕೊಂಡು ಪ್ರಸ್ತುತ ಕಾಲಘಟ್ಟದ ಕರಾವಳಿ ಪ್ರದೇಶವನ್ನು ದರ್ಶಿಸಲಾಗಿದೆ. 'ಪದವನರ್ಪಿಸಬಹುದಲ್ಲದೆ' ಕಥೆಯಲ್ಲಿ ಕುಪ್ಪಣ್ಣಯ್ಯನಿಗೆ ಕೆಳಜಾತಿಗೆ ಸೇರಿದ ಗೋವಿಂದಯ್ಯ ಮಾಸ್ಟ್ರು ಹೆಡ್‌ಮಾಸ್ಟರ್ ಕುರ್ಚಿಯಲ್ಲಿ ಕುಳಿತುಕೊಳ್ಳುವ ಸಂದರ್ಭ ಉಪನಯನಕ್ಕಿಂತಲೂ ಮುಖ್ಯವಾಗುತ್ತದೆ. 'ಗುಹೇಶ್ವರನೆಂಬ ಅಪ್ರಮಾಣ' ಕಥೆಯಲ್ಲಿ ಮಂಗಗಳ ಕಾಟ ಕಂಡುಬಂದಾಗ ದೇಜಪ್ಪ ಮಾಸ್ಟ್ರು ಅದನ್ನು ಕೊಲ್ಲಲು ನಿರ್ಧರಿಸುತ್ತಾರೆ. ಆದರೆ ಅವರ ಹೆಂಡತಿ ಲಕ್ಷ್ಮೀಯಕ್ಕ ಇದನ್ನು ವಿರೋಧಿಸುತ್ತಾರೆ. ಲೌಕಿಕ ಅಳತೆಗೋಲನ್ನು ಮೀರಿ ಮಂಗನಲ್ಲಿ ಆಂಜನೇಯನನ್ನು ಕಾಣುತ್ತಾರೆ. ಈ ಮೂಲಕ ಅಳತೆಯ ಮಿತಿಯನ್ನು ಮೀರಿ ದೇವರನ್ನು ಗುರುತಿಸುವ ಅಲ್ಲಮನ ವಚನದ ಆಶಯ ಸಾಕಾರಗೊಳ್ಳುತ್ತದೆ. ತನ್ನ ಅರಿವಿಗೂ ಇನ್ನೊಬ್ಬರ ಅರಿವಿಗೂ ನಡುವೆ ಇರುವ ಅಂತರವನ್ನು ಪ್ರಧಾನವಾಗಿ ಗುರುತಿಸುವ 'ಇನ್ನು ಮುಂದೆ ಶಬ್ದ ಇಲ್ಲ' ಕಥೆಯಲ್ಲಿ ನಾಗಾರಾಧನೆಯು ವಾಣಿಜ್ಯ ಉದ್ದೇಶವನ್ನು ಹೊಂದಿರುವುದನ್ನು ತಿಳಿಸಿಕೊಡುತ್ತದೆ. ಆಧ್ಯಾತ್ಮಿಕತೆಯ ಅತ್ಯುನ್ನತೆಯ ಸಂಕೇತವಾಗಿ 'ಗುಹೇಶ್ವರನೆಂಬ ಬಯಲು' ಕಥೆಯನ್ನು ಗಮನಿಸಿಕೊಳ್ಳಬಹುದು. ಅಲ್ಲಮನ ವಚನಗಳ ಕುರಿತಾದ ಕಾರ್ಯಕ್ರಮಕ್ಕೆ ಅಲ್ಲಮನೇ ಬಂದಂತಹ ಅನುಭವವೊಂದು ಕಥೆಯಲ್ಲಿ ವ್ಯಕ್ತಗೊಂಡಿದೆ. ಲಕ್ಡೆ ಹಾಗೂ ಗೋರೆ ಎಂಬ ಭ್ರಷ್ಟ ಅಧಿಕಾರಿಗಳ ಪ್ರಸ್ತಾಪವಿರುವ 'ಹರಿವ ನದಿಗೆ ಮೈಯ್ಯೆಲ್ಲಾ ಕಾಲು' ಕಥೆಯಲ್ಲಿ ಲಂಚಬಾಕತನದ ಮೂಲಕ ಹಣದ ಕುರಿತ ಅತಿಯಾದ ವ್ಯಾಮೋಹವನ್ನು ಹೇಳಲಾಗಿದೆ. 'ತಪವೆಂಬುದು ತಗಹು ನೇಮವೆಂಬುದು ಬಂಧನ' ಎಂಬ ವಚನದಿಂದ ಪ್ರೇರೇಪಣೆಯನ್ನು ಪಡೆದುಕೊಂಡಿರುವ 'ಭಾಷೆ ಎಂಬುದು ಪ್ರಾಣಘಾತಕ' ಕಥೆಯು ಮಾತಿನಿಂದ ಉಂಟಾಗುವ ಪರಿಣಾಮವನ್ನು ತಿಳಿಸಿಕೊಡುತ್ತದೆ. ಒಂದು ಮಾತು ವ್ಯಕ್ತಿಯೊಬ್ಬನ ಮನಸ್ಸು ಹಾಗೂ ಬದುಕನ್ನು ಒಂದಷ್ಟು ಸಮಯ ಪರಿವರ್ತಿಸುವ ಚಿತ್ರಣ ಕಥೆಯಲ್ಲಿದೆ. 'ಬೆಟ್ಟದ ನೆಲ್ಲಿ ಕಡಲಿನ ಉಪ್ಪು' ಕಥೆಯಲ್ಲಿ ಅನಿರೀಕ್ಷಿತವಾಗಿ ತಳಕು ಹಾಕಿಕೊಳ್ಳುವ ಮನುಷ್ಯ ಸಂಬಂಧಗಳ ಕುರಿತಾದ ವಿವರಣೆಯಿದೆ. 'ಗುಹೇಶ್ವರನೆಂಬುದಿಲ್ಲಾಗಿ ಬಯಲೆಂಬುದಿಲ್ಲ' ಕಥೆಯಲ್ಲಿ ವೈರಾಗ್ಯದ ತುರಿಯಾವಸ್ಥೆಯ ಚಿತ್ರಣವಿದೆ. 'ಅಪರಿಮಿತ ಕತ್ತಲೆಯೊಳಗೆ ವಿಪರೀತ ಬೆಳಕನಿಕ್ಕಿದೊಡೆ' ಕಥೆಯಲ್ಲಿ ಶ್ರೀಮಂತಿಕೆ ಮತ್ತು ಬಡತನದ ಸ್ಥಿತಿಯ ನಡುವಿನ ಅಂತರದ, ಬದಲಾದ ಮನೋಭಾವದ ಚಿತ್ರಣವಿದೆ. 'ಮನದ ಮುಂದಿನ ಮಾಯೆ' ಕಥೆಯಲ್ಲಿ ಗಂಡು– ಹೆಣ್ಣಿನ ನಡುವಿನ ಆಕರ್ಷಣೆಯು ದೈಹಿಕತೆ ಹಾಗೂ ಲೈಂಗಿಕತೆಗಳನ್ನು ಮೀರಿದ್ದು ಎಂಬ ವಿಚಾರ ಸ್ಪಷ್ಟಗೊಂಡಿದೆ. 'ಬಯಲು ಬಯಲನೆ ಬಿತ್ತಿ ಬಯಲು

ಬಯಲನೆ ಬೆಳೆದು' ಕಥೆಯು ಒಳ್ಳೆಯ ವಿಚಾರವನ್ನು ಇರಿಸಿಕೊಂಡರೆ ಒಳ್ಳೆಯ ವಿಚಾರಗಳೇ ಬದುಕಿನಲ್ಲಿ ಪುನರಾವರ್ತನೆಗೊಳ್ಳುತ್ತವೆ ಎಂಬ ತತ್ವವನ್ನು ಮನಗಾಣಿಸುತ್ತದೆ. ಸಂಕಲನದ ಕೊನೆಯ ಕಥೆಯಾದ 'ನೆಲಮುಗಿಲುಗಳ ನಡುವೆ' ಕಥೆಯು ಚಿಂತನೆ, ಕಾರ್ಯವಿಧಾನ, ಬದುಕಿನ ರೀತಿನೀತಿಗಳಲ್ಲಿರುವ ಅಗಾಧ ಅಂತರವನ್ನು ಹೇಳುತ್ತದೆ. ಲೈಂಗಿಕ ಸಂಬಂಧಗಳ ಸೂಕ್ಷ್ಮತೆಯನ್ನು ನಿಕಷಕ್ಕೆ ಒಡ್ಡುವ ಪ್ರಯತ್ನ ಈ ಕಥೆಯಲ್ಲಿದೆ. ಇದರ ಹೊರತಾಗಿ ಇನ್ನೂ ಹಲವು ಆಯಾಮಗಳಲ್ಲಿ ಈ ಸಂಕಲನವು ಪ್ರಾದೇಶಿಕತೆಯ ವಿವರಗಳನ್ನು ಒದಗಿಸಿಕೊಡುತ್ತದೆ. ಭೂಮಸೂದೆಗೆ ಸಂಬಂಧಪಟ್ಟ ಘರ್ಷಣೆಯು ಕರಾವಳಿ ಪ್ರದೇಶದ ಹೊರಗಡೆಯೂ ಮುಂದುವರಿಯುವುದನ್ನು 'ಅಪರಿಮಿತ ಕತ್ತಲೆಯೊಳಗೆ ವಿಪರೀತ ಬೆಳಕನಿಕ್ಕಿದೊಡೆ' ಕಥೆ ತಿಳಿಸಿಕೊಡುತ್ತದೆ. ಕರಾವಳಿಯ ಜನಪದ ಕ್ರೀಡೆಯಾದ ಕಂಬಳವು ಕಾಲಾಂತರದಲ್ಲಿ ಪಡೆದುಕೊಂಡ ಸ್ವರೂಪವನ್ನು ಇದೇ ಕಥೆಯು ಸ್ಪಷ್ಟಪಡಿಸಿದೆ. ಯಕ್ಷಗಾನದಲ್ಲಿ ಆಗುತ್ತಿರುವ ಪಲ್ಲಟದ ಉಲ್ಲೇಖ 'ಗುಹೇಶ್ವರನೆಂಬುದಿಲ್ಲಾಗಿ ಬಯಲೆಂಬುದಿಲ್ಲ' ಕಥೆಯಲ್ಲಿದೆ. 'ಬೆಟ್ಟದ ನೆಲ್ಲಿ ಮತ್ತು ಕಡಲಿನ ಉಪ್ಪು' ಕಥೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಮಾನವೀಯ ಸಂಬಂಧಗಳು ಕಳೆದುಹೋಗುತ್ತಿರುವುದನ್ನು ಗುರುತಿಸಲಾಗಿದೆ.

ಮೊಗಸಾಲೆಯವರ ೨೦೧೭ರವರೆಗಿನ ಪ್ರಕಟಿತ ಕಾದಂಬರಿಗಳಲ್ಲಿ 'ತೊಟ್ಟಿ' ಹಾಗೂ 'ಧಾತು' ಕಾದಂಬರಿಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕಾದಂಬರಿಗಳಲ್ಲಿಯೂ ಪ್ರಾದೇಶಿಕತೆಯನ್ನು ಗುರುತಿಸಿಕೊಳ್ಳಲು ಸಾಧ್ಯವಿದೆ. 'ಉಲ್ಲಂಘನೆ' ಕಾದಂಬರಿಯು ಗುತ್ತಿನ ಮನೆಯ ಮೂರು ತಲೆಮಾರುಗಳ ಕಥಾನಕವನ್ನು ಹೊಂದಿದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಗುತ್ತಿನ ಮನೆಯ ಚಿತ್ರಣದ ಮೂಲಕ ಪ್ರಾದೇಶಿಕ ಜನಜೀವನದ ಕಡೆಗೆ ಬೆಳಕು ಹರಿಸಿದೆ. ಆಡಳಿತಾತ್ಮಕ ಹಾಗೂ ಸಾಮಾಜಿಕ ನೆಲೆಗಟ್ಟಿನಲ್ಲಿ ಮೇಲ್‌ಸ್ತರದಲ್ಲಿ ಗುರುತಿಸಲ್ಪಟ್ಟಿದ್ದ ಗುತ್ತಿನ ಮನೆಯು ಕಾಲಾಂತರದಲ್ಲಿ ಬದಲಾವಣೆಗೆ ಒಳಗಾಗುತ್ತದೆ. ಗುತ್ತಿನ ಮನೆಯನ್ನು ಕೇಂದ್ರೀಕರಿಸಿಕೊಂಡ ಕೆಲವು ನಂಬಿಕೆ– ಆಚರಣೆಗಳನ್ನು ಅತ್ಯಂತ ವಿಸ್ತಾರವಾಗಿ ತಿಳಿಸಿಕೊಡಲಾಗಿದೆ. ಅವುಗಳೆಂದರೆ: ಕೃಷಿ ಚಟುವಟಿಕೆಯ ಆರಂಭ, ಪೈರನ್ನು ಗುತ್ತಿನ ಮನೆಯಲ್ಲಿ ಸಂಗ್ರಹಿಸಿಡುವ ಪದ್ಧತಿ, 'ಸಾವು ಕೊನೊಪಿನಿ'(ಸಾವು ಕೊಂಡು ಹೋಗುವುದು) ಆಚರಣೆ, ಎಳೆಗರುಗಳನ್ನು ನೇಗಿಲಿಗೆ ಕಟ್ಟಿ ಉಳುವುದು, 'ಬಿನ್ನೆರ ಕೋರಿಕಟ್ಟ'(ಸಂಬಂಧಿಕರ ಕೋಳಿ ಅಂಕ), 'ಕಣಿ ಇಡುವ' ಸಂಪ್ರದಾಯ, ಹಾಲೆಮರದ ಕಷಾಯವನ್ನು ಸೇವಿಸುವ ಸಂಪ್ರದಾಯ, 'ಆಟಿ ಕುಲ್ಲುನು' (ಆಷಾಡದಲ್ಲಿ ಕುಳಿತುಕೊಳ್ಳುವುದು), ಹೊಸ್ತಿಲಿನ ಅಜ್ಜಿಯ ಆರಾಧನೆ, 'ಕರ ಪತ್ತಾವುನೆ', 'ಮೂಲೊಗು ನೀರು ಮಯಿಪ್ಪುನೆ'(ಮೂಲಕ್ಕೆ ನೀರು ಸುರಿಯುವುದು) ಹಾಗೂ 'ಕಂಡ ಕೋರುನೆ'.

ಪ್ರಾದೇಶಿಕ ಐತಿಹ್ಯಗಳನ್ನು ಉಲ್ಲಂಘನೆ ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. ಕರಾವಳಿ ಪ್ರದೇಶಕ್ಕೆ ವಲಸೆ ಬಂದ ಬಂಟ ಜನಾಂಗದವರು ಈ ಪ್ರದೇಶದಲ್ಲಿ ಬಲಿಷ್ಠರಾಗುತ್ತಾರೆ. ಜೈನಧರ್ಮವು ಪ್ರಚಾರಕ್ಕೆ ಬಂದಾಗ ಜೈನಧರ್ಮವನ್ನು ಸ್ವೀಕರಿಸುತ್ತಾರೆ. ಪರಿಣಾಮವಾಗಿ ಈ ಎರಡೂ ಸಮುದಾಯಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಈ ವಿಚಾರ ಇತಿಹಾಸಕಾರರಾದ ಗಣಪತಿ ರಾವ್ ಐಗಳ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಕೃತಿಯಲ್ಲಿಯೂ ಯಥಾವತ್ತಾಗಿ ಉಲ್ಲೇಖಗೊಂಡಿದೆ. ಸಾಂತೇರ್‌ಗುತ್ತಿನ ಹಿರಿಯರು ಜೈನಮತವನ್ನು ಸ್ವೀಕರಿಸಿ ಮಾಂಸಾಹಾರ ತ್ಯಜಿಸಿದ ಕಾರಣದಿಂದ ಗುತ್ತಿನ ದೈವಗಳು ಮುನಿದು ಅವರ ವಂಶ ನಿರ್ವಂಶವಾದಾಗ ಅವರ ಬಂಟನಾಗಿದ್ದ ವ್ಯಕ್ತಿಯೊಬ್ಬ ಗುತ್ತಿನ ಯಜಮಾನನಾಗಿ ಮತ್ತೆ ದೈವಗಳಿಗೆ ರಕ್ತಾಹಾರ ನೀಡಲು ಪ್ರಾರಂಭಿಸುತ್ತಾನೆ. ಪರಿಣಾಮವಾಗಿ ಗುತ್ತು ಬೆಳೆದು ಬರುತ್ತದೆ. ಒಂಬತ್ತುಕೆರೆ ಎನ್ನುವ ಪ್ರದೇಶದಿಂದ ಮಂಜೇಶ್ವರದಾಚೆಗೆ ವಲಸೆ ಹೋದ ಜೈನರ ಕುಟುಂಬಗಳಲ್ಲಿ ಬಂಗರು ಬಹಳ ಪ್ರಸಿದ್ಧರಾಗುತ್ತಾರೆ. ಈ ಕಾರಣದಿಂದ ಮಂಜೇಶ್ವರ ಪೇಟೆಯ ಒಂದು ಭಾಗಕ್ಕೆ 'ಬಂಗ್ರ ಮಂಜೇಶ್ವರ' ಎನ್ನುವ ಹೆಸರಿದೆ. ಆದರೆ ಇತಿಹಾಸವನ್ನು ಗಮನಿಸಿಕೊಂಡಾಗ ೧೭ನೇ ಶತಮಾನದ ಹೊತ್ತಿಗಾಗಲೇ ಮಂಜೇಶ್ವರ

ಪ್ರದೇಶದ ದಕ್ಷಿಣ ಭಾಗಕ್ಕೆ 'ಬಂಗರ(ಬಂಗ್ರ) ಮಂಜೇಶ್ವರ' ಎನ್ನುವ ಹೆಸರಿತ್ತು. ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಬಂಗ ರಾಣಿಯಾದ ಶಂಕರದೇವಿಯು ಇಕ್ಕೇರಿ ಅರಸರಿಗೆ ಕಪ್ಪ ಕೊಡದೇ ಇದ್ದುದರಿಂದ ಇಕ್ಕೇರಿ ಅರಸರು ಬಂಗ ರಾಣಿಯ ವಶದಲ್ಲಿದ್ದ ಕೆಲವು ಮಾಗಣೆಗಳನ್ನು ಮರಳಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮಂಜೇಶ್ವರ ಸೀಮೆಯ ದಕ್ಷಿಣ ಭಾಗವು ಮಾತ್ರ ರಾಣಿಯ ವಶದಲ್ಲಿ ಉಳಿದುಕೊಳ್ಳುತ್ತದೆ. ಹೀಗೆ ಬಂಗರಲ್ಲಿ ಉಳಿದುಕೊಂಡ ಮಂಜೇಶ್ವರದ ದಕ್ಷಿಣ ಭಾಗ 'ಬಂಗರ ಮಂಜೇಶ್ವರ/ ಬಂಗ್ರ ಮಂಜೇಶ್ವರ' ಎನಿಸಿಕೊಳ್ಳುತ್ತದೆ. ಕರಾವಳಿ ಪ್ರದೇಶದಲ್ಲಿ ಕಾಲಕಾಲಕ್ಕೆ ನಡೆದ ಸ್ಥಿತ್ಯಂತರಗಳನ್ನು ಕಾದಂಬರಿ ಗುರುತಿಸಿದೆ. ಪಾಡ್ದನ ಹಾಗೂ ಬೀರುಗಳನ್ನು ಹಾಡುವ ಚಿತ್ರಣ ಈ ಕಾದಂಬರಿಯಲ್ಲಿದೆ. ಮಾದಿರ ಹಾಡುಗಳ ಬಳಕೆಯೂ ಕಂಡುಬಂದಿದೆ. ಜುಮಾದಿ ದೈವಾರಾಧನೆಯ ಕುರಿತ ವಿವರಗಳು ಕಾದಂಬರಿಯಲ್ಲಿವೆ. ಹಿಂದೆ ಕರಾವಳಿ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಅಳತೆಯ ಮಾಪನಗಳನ್ನು ಕಾದಂಬರಿಯಲ್ಲಿ ಉಲ್ಲೇಖಿಸಲಾಗಿದೆ. ಧರ್ಮ- ಜಾತಿ ಮೊದಲಾದ ಅಂಶಗಳು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಪ್ರಧಾನ ಪಾತ್ರ ವಹಿಸುವುದನ್ನು ಕಾದಂಬರಿಯಲ್ಲಿ ಕಾಣಬಹುದು.

'ಪಲ್ಲಟ' ಕಾದಂಬರಿಯಲ್ಲಿ ಸ್ಥಳೀಯ ರಾಜಕಾರಣ ಹಾಗೂ ಭೂಮಸೂದೆಯ ಕುರಿತಾದ ಚರ್ಚೆಯನ್ನು ಪ್ರಧಾನವಾಗಿ ಕಾಣುತ್ತೇವೆ. ಭೂಮಸೂದೆಯ ಕಾರಣದಿಂದ ಕರಾವಳಿ ಪ್ರದೇಶದಲ್ಲಿ ಸಾಮಾಜಿಕವಾಗಿ ಹಾಗೂ ಕೌಟುಂಬಿಕವಾಗಿ ನಡೆದ ಬದಲಾವಣೆಗಳನ್ನು ಈ ಕಾದಂಬರಿ ಕೇಂದ್ರೀಕರಿಸಿದೆ. ಸ್ಥಳೀಯ ರಾಜಕಾರಣದ ವಾಸ್ತವ ಚಿತ್ರಣವನ್ನು ಕಾದಂಬರಿ ಹೊಂದಿದೆ. ಸೈದ್ಧಾಂತಿಕ ನಿಲುವಿಗಿಂತಲೂ ವೈಯಕ್ತಿಕ ನೆಲೆಯ ವಿರೋಧಗಳೇ ಸ್ಥಳಿಯ ಆಡಳಿತದಲ್ಲಿ ಪ್ರಧಾನ ಪಾತ್ರ ವಹಿಸಿದೆ ಎನ್ನುವುದನ್ನು ಈ ಕಾದಂಬರಿ ತಿಳಿಸಿಕೊಡುತ್ತದೆ.

'ಮುಖಾಂತರ' ಕಾದಂಬರಿಯು ಕರಾವಳಿ ಪ್ರದೇಶದ ಆರು ತಲೆಮಾರುಗಳ ಚಿತ್ರಣವನ್ನು ನೀಡುತ್ತದೆ. ಈಶ್ವರೀಮೂಲೆ ಎನ್ನುವ ಹವ್ಯಕ ಬ್ರಾಹ್ಮಣ ಮನೆತನವೊಂದರ ಕಥಾನಕ ಇದಾಗಿದ್ದು, ೨೦೦ರಿಂದ ೩೦೦ ವರ್ಷಗಳಲ್ಲಿ ಕರಾವಳಿ ಪ್ರದೇಶದಲ್ಲಾದ ಬದಲಾವಣೆ- ಬೆಳವಣಿಗೆಗಳು ಇದರಲ್ಲಿವೆ. ಸಾಂಸ್ಕೃತಿಕ ಪಲ್ಲಟಗಳನ್ನು 'ಮುಖಾಂತರ' ಕಾದಂಬರಿಯಲ್ಲಿ ಕಾಣಬಹುದು. ವೆಂಕಪ್ಪ ಶೆಟ್ಟರ ಮನೆಯಲ್ಲಿ ಸತ್ಯನಾರಾಯಣ ಪೂಜೆ ನಡೆಯುತ್ತದೆ. 'ಬ್ರಾಹ್ಮಣೀಕರಣ' ಪ್ರಕ್ರಿಯೆಯನ್ನು ಇಲ್ಲಿ ಹೇಳಲಾಗಿದೆ. ದುರ್ಗೆಗೆ ಮದ್ಯವನ್ನಿಟ್ಟು ಆರಾಧಿಸುವ ಸಂಪ್ರದಾಯ ಕೆಲವು ಬ್ರಾಹ್ಮಣ ಮನೆತನಗಳಲ್ಲಿ ಕಂಡುಬರುತ್ತದೆ. ಪ್ರಧಾನ ಸಂಸ್ಕೃತಿಯು ಪ್ರತಿ ಸಂಸ್ಕೃತಿಯ ಲಕ್ಷಣಗಳನ್ನು ಹೊಂದುವುದನ್ನು ಈ ಮೂಲಕ ಗುರುತಿಸಿಕೊಳ್ಳಬಹುದು. ಆಧುನಿಕ ಕಾಲಘಟ್ಟದ ಬದಲಾವಣೆಗಳಿಗೆ ಕರಾವಳಿ ಪ್ರದೇಶವು ಒಳಗಾಗುತ್ತಿರುವುದನ್ನು ಕಾದಂಬರಿ ಗಮನಿಸಿಕೊಂಡಿದೆ.

ಸ್ವತಂತ್ರವಾಗಿ ಜಮೀನನ್ನು ಹೊಂದಿ, ಸ್ವಾವಲಂಬನೆಯಿಂದ ಬದುಕಲು ಪ್ರಯತ್ನಿಸುವ ಒಕ್ಕಲು ಕುಟುಂಬವೊಂದು ಮನೆಯ ಹಿರಿಯ ಮಗನ ವಿವೇಚನಾರಹಿತ ನಡೆವಳಿಕೆಯಿಂದಾಗಿ ಗಳಿಸಿದ್ದೆಲ್ಲವನ್ನೂ ಕಳೆದುಕೊಳ್ಳುವ ಕಥಾನಕವನ್ನು 'ಮಣ್ಣಿನ ಮಕ್ಕಳು' ಕಾದಂಬರಿ ಒಳಗೊಂಡಿದೆ. ಜಮೀನ್ದಾರಿ ವ್ಯವಸ್ಥೆಯ ಒಳಿತು ಕೆಡುಕುಗಳೆರಡೂ ಕರಾವಳಿ ಪ್ರದೇಶವನ್ನು ಪ್ರಭಾವಿಸಿದ ರೀತಿಯನ್ನು ಈ ಕಾದಂಬರಿ ತಿಳಿಸಿಕೊಟ್ಟಿದೆ. ಪ್ರಾದೇಶಿಕ ಸಂಸ್ಕೃತಿಯನ್ನು ಉಳಿಸಬೇಕೆಂಬ ಆಶಯವನ್ನು 'ಅರ್ಥ' ಕಾದಂಬರಿ ಒಳಗೊಂಡಿದೆ. ಅಡಿಕೆಯ ಬೆಲೆ ಕುಸಿತ, ಅದಕ್ಕಾಗಿ ಹೊಸ ಮಾರುಕಟ್ಟೆಯ ಅನ್ವೇಷಣೆ, ತಾಂಬೂಲ ಸೇವನೆಯ ಪರಂಪರೆ ನಾಶವಾಗಿರುವುದು, ಕ್ಯಾನ್ಸರ್ ಖಾಯಿಲೆ ಕಾಣಿಸಿಕೊಂಡಿರುವುದು, ಎಂಡೋಸಲ್ಫಾನ್ ದುಷ್ಪರಿಣಾಮ, ನವವಸಾಹತೀಕರಣದಿಂದಾಗಿ ಪ್ರಾದೇಶಿಕ ಭಾಷೆಗಳ ಅವನತಿ- ಹೀಗೆ ಉದಾರಿಕರಣದಿಂದಾಗಿ ಕರಾವಳಿ ಪ್ರದೇಶದಲ್ಲಿ ಆಗಿರುವ ಅನಾಹುತಗಳನ್ನು ಕಾದಂಬರಿಯಲ್ಲಿ ಗಮನಿಸಿಕೊಳ್ಳಬಹುದು. ಪ್ರಾದೇಶಿಕ ರಾಜಕೀಯದ ಕುರಿತಾದ ಚರ್ಚೆ 'ದೃಷ್ಟಿ' ಕಾದಂಬರಿಯಲ್ಲಿದೆ. 'ಉಪ್ಪು' ಕಾದಂಬರಿಯಲ್ಲಿ, ಉದ್ಯಾವರ

ಎಂಬ ಪ್ರದೇಶದ ಜನರು ರಾಜಕೀಯ ಕಾರಣಗಳಿಗಾಗಿ ಸಂಘರ್ಷದಲ್ಲಿ ತೊಡಗಿಕೊಳ್ಳುತ್ತಾರೆ. 'ಪಂಥ' ಕಾದಂಬರಿಯಲ್ಲಿನ ತಿಮ್ಮಯ್ಯ ಹೆಗ್ಡೆ ಪ್ರಾದೇಶಿಕವಾಗಿ ನಡೆದ ಧಾರ್ಮಿಕ ಸಂಘರ್ಷವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತಾರೆ. ಹವ್ಯಕ ಬ್ರಾಹ್ಮಣ ಜನಾಂಗದ ರೂಢೀಗತ ವ್ಯವಸ್ಥೆಯನ್ನು ಮೀರುವ ಪ್ರಯತ್ನವನ್ನು ಹೊಂದಿರುವ 'ಅನಂತ' ಕಾದಂಬರಿಯು ಅದೇ ಕಾರಣದಿಂದ ಮುಖ್ಯವಾಗುತ್ತದೆ. ಆದರೆ ಸಂಪ್ರದಾಯವನ್ನು ಮೀರುವ ಅನಂತನ ಪ್ರಯತ್ನ ದುರಂತದಲ್ಲಿ ಕೊನೆಗೊಳ್ಳುವಂತಾಗುತ್ತದೆ. ಭೂಮಾಲೀಕರ ದಬ್ಬಾಳಿಕೆಯು ಎಲಿಜಾಳ ಯೋಚನೆಯ ಮೂಲಕ 'ನೆಲಮುಗಿಲುಗಳ ಮಧ್ಯೆ' ಕಾದಂಬರಿಯಲ್ಲಿ ಪ್ರಸ್ತಾಪಗೊಂಡಿದೆ. ಗೇಣಿ ಕೊಡದವರನ್ನು, ಎದುರಾಡಿದವರನ್ನು ಶೋಷಿಸುವುದು ಮಾಮೂಲಿಯಾಗಿದ್ದರೂ ಉಡುಪಿ ಮಠದ ಒಕ್ಕಲಾಗಿದ್ದ ಎಲಿಜಾಳ ತಂದೆಗೆ ಈ ರೀತಿಯ ತೊಂದರೆ ಇರಲಿಲ್ಲ ಎನ್ನುವ ಪ್ರಸ್ತಾಪವಿದೆ. 'ಕನಸಿನ ಬಳ್ಳಿ' ಕಾದಂಬರಿಯ ನರ್ಸಪ್ಪಯ್ಯನವರು ಹಳ್ಳಿಯ ಆಸ್ತಿಯನ್ನು ಮಾರಲು ನಿರ್ಧರಿಸುತ್ತಾರೆ. ಆದರೆ ಮಗ ಸದಾನಂದನಿಗೆ ಹಳ್ಳಿಯ ವಾತಾವರಣ, ಅಲ್ಲಿಯ ಮನೋಭಾವ ಹಿಡಿಸುತ್ತದೆ. ಹಿರಿಯ ತಲೆಮಾರಿಗೆ ಬೇಡವಾದ ಗ್ರಾಮೀಣ ಸಂಸ್ಕೃತಿ, ಕೃಷಿ ಪದ್ಧತಿಯನ್ನು ಆಧುನಿಕ ತಲೆಮಾರು ಒಪ್ಪಿಕೊಳ್ಳುವುದು ಯುವ ತಲೆಮಾರಿನ ಆಸಕ್ತಿ– ಅಭಿರುಚಿಗಳ ಮತ್ತೊಂದು ಆಯಾಮವನ್ನು ಅನಾವರಣಗೊಳಿಸಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಚಟುವಟಿಕೆಗಳು ಪ್ರಾದೇಶಿಕ ಅರಣ್ಯ ನಾಶಕ್ಕೆ ಕಾರಣವಾಗುತ್ತಿರುವುದರ ಕುರಿತಾದ ವ್ಯಂಗ್ಯ 'ದಿಗಂತ' ಕಾದಂಬರಿಯಲ್ಲಿದೆ.

'ಉಲ್ಲಂಘನೆ' ಮತ್ತು 'ಮುಖಾಂತರ' ಕಾದಂಬರಿಗಳಲ್ಲಿ ನವ ಚಾರಿತ್ರಿಕತೆಯ ಆಶಯ ಕಂಡುಬರುತ್ತದೆ. ಪ್ರದೇಶದ ಇತಿಹಾಸವನ್ನು ಹೊಸದಾಗಿ ಕಟ್ಟಿಕೊಡುವ ರೀತಿ ಇಲ್ಲಿದೆ. ಇದನ್ನು ಶಿವರಾಮ ಪಡಿಕ್ಕಲ್ ಮತ್ತು ಡಾ. ಬಿ. ಜನಾರ್ದನ ಭಟ್ ಅವರು ಗುರುತಿಸಿದ್ದಾರೆ.

ಮೊಗಸಾಲೆಯವರ ಸಣ್ಣಕಥೆಗಳು ಹಾಗೂ ಕಾದಂಬರಿಗಳಿಗೆ ಹೋಲಿಸಿದರೆ ಕವನಗಳಲ್ಲಿ ಪ್ರಾದೇಶಿಕತೆಯು ಕಡಿಮೆ ಪ್ರಮಾಣದಲ್ಲಿ ವ್ಯಕ್ತಗೊಂಡಿದೆ. ವ್ಯಕ್ತಿಗತ ವಿಚಾರಗಳ ಆಧಾರದಲ್ಲಿ ಕರಾವಳಿಯ ಬದುಕನ್ನು ವೀಕ್ಷಿಸುವ ಪ್ರಯತ್ನ ಅವರ ಬಹುತೇಕ ಕವನಗಳಲ್ಲಿ ಕಂಡುಬರುತ್ತದೆ. ಕಾವ್ಯದಲ್ಲಿ ಮೊಗಸಾಲೆ ಸ್ವಾನುಭವಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಮೊಗಸಾಲೆಯವರ ಬಹುತೇಕ ಕವನಗಳು ಅವರು ಹುಟ್ಟಿ ಬೆಳೆದ, ಪ್ರಸ್ತುತ ವಾಸಿಸುತ್ತಿರುವ ಪ್ರದೇಶಗಳ ಕುರಿತಾಗಿವೆ. ಹುಟ್ಟೂರಿನಿಂದ ದೂರವಿದ್ದು ನೆನಪಿಸಿಕೊಳ್ಳುವ, ಹಲವು ವರ್ಷಗಳ ಬಳಿಕ ಹುಟ್ಟೂರಿಗೆ ತೆರಳಿದಾಗ ಹಳೆಯ ಕಾಲಘಟ್ಟವನ್ನು ಮತ್ತೆ ಕಣ್ಮುಂದೆ ತಂದುಕೊಳ್ಳುವ ಮಾದರಿಯ ಹಲವು ಕವನಗಳಿವೆ. ಮೊಗಸಾಲೆಯವರು ಕೆಲವು ಕವನಗಳಲ್ಲಿ ಇಲ್ಲಿನ ಪ್ರದೇಶಕ್ಕೂ ತನ್ನ ಬದುಕಿಗೂ ಸಂಬಂಧವನ್ನು ಏರ್ಪಡಿಸಿಕೊಂಡಿದ್ದಾರೆ. 'ಕರಾವಳಿಯ ಮಳೆಗಾಲದ ಮುಂಜಾನೆ', 'ಕರಾವಳಿಯ ಮುಂಗಾರು', 'ಕರಾವಳಿಯ ಮಳೆಗಾಲದ ನದಿಗಳು' ಹಾಗೂ 'ಕರಾವಳಿಯ ಬೇಸಗೆಯ ಹೊಳೆ' ಕವಿತೆಗಳಲ್ಲಿ ಇಲ್ಲಿಯ ಜನರ ಬದುಕಿನ ಸಂಕೇತವಾಗಿ ಮಳೆಯನ್ನು ಕಾಣಲಾಗಿದೆ. ಕರಾವಳಿಯ ಗ್ರಾಮೀಣ ಬದುಕು ಹೊಸತನದೆಡೆಗೆ ಪ್ರವಹಿಸುತ್ತಿರುವುದನ್ನು ಗುರುತಿಸುವ ಕೆಲವು ಗಮನಾರ್ಹ ಕವಿತೆಗಳಿವೆ. ಕರಾವಳಿ ಪ್ರದೇಶದ ವ್ಯಕ್ತಿಗಳ ಸಹಜ ಸ್ವಭಾವದಲ್ಲಿರುವ ವಿಶಿಷ್ಟತೆಯನ್ನು ಹಲವು ಕವಿತೆಗಳು ಗುರುತಿಸಿವೆ. 'ಮಾರಣ್ಣಿ ಮಾಡ', 'ಈತ– ಲಕ್ಷ್ಮಣ', 'ನೀವು ಅಶ್ವತ್ಥಮರ' 'ದಾಳಿಂಬೆ ಗಿಡದ ಹಾಗೆ ಇದ್ದ', 'ಕಾರಂತರೆಂದರೆ', 'ಮರದ ನೆರಳೆಲ್ಲ ಅವನದೇ', 'ಗುರು', 'ಪುಟ್ಟತ್ತೆ ಇದ್ದಿದ್ದರೆ', 'ಚಿಕ್ಕಪ್ಪ ಇನ್ನೂ', 'ದಿ। ಚರು ಮುಜುಂದಾರನಿಗೊಂದು ಪತ್ರ' ಕವನಗಳು ಈ ಮಾದರಿಯ ಕವಿತೆಗಳಾಗಿವೆ.

ನಾಲ್ಕನೇ ಅಧ್ಯಾಯವಾದ **'ಡಾ। ಮೊಗಸಾಲೆಯವರ ಸಾಹಿತ್ಯ ಬಿಂಬಿಸುವ ಪ್ರಾದೇಶಿಕ ಮಹಿಳಾ ಪ್ರತಿನಿಧೀಕರಣ'**ದಲ್ಲಿ ಕರಾವಳಿ ಪ್ರದೇಶದ ಮಹಿಳಾ ಸಂವೇದನೆಗಳು ಮೊಗಸಾಲೆಯವರ ಸಾಹಿತ್ಯದಲ್ಲಿ ವ್ಯಕ್ತಗೊಂಡ ರೀತಿಯನ್ನು ಮತ್ತು

ಅದರ ಹಿಂದಿರುವ ವಾಸ್ತವತೆಯನ್ನು ಕಂಡುಕೊಳ್ಳಲಾಗಿದೆ. ಡಾ। ನಾ. ಮೊಗಸಾಲೆ ಅವರ ಸಾಹಿತ್ಯದಲ್ಲಿ ಪ್ರಾದೇಶಿಕ ಮಹಿಳಾ ಪ್ರತಿನಿಧೀಕರಣವನ್ನು ಮೂರು ನೆಲೆಗಳಲ್ಲಿ ಗಮನಿಸಿಕೊಳ್ಳಬಹುದಾಗಿದೆ. ಅವುಗಳೆಂದರೆ: ೧. ಸಮಾನತೆಯ ನೆಲೆ ೨. ಬಂಡಾಯದ ನೆಲೆ ೩. ಅಂತಃಕರಣದ ನೆಲೆ. 'ಸೀತಾಪುರದ ಕತೆಗಳು' ಸಂಕಲನದ 'ಪುರುಷಾರ್ಥ' ಕಥೆಯ ಲೀಲಾ ಮೇಡಂ ಹಾಗೂ 'ಸನ್ನಿಧಿಯಲ್ಲಿ ಸೀತಾಪುರ' ಸಂಕಲನದ 'ಭಾಷೆ ಎಂಬುದು ಪ್ರಾಣಘಾತಕ' ಕಥೆಯ ಸರಸ್ವತಿ– ಇವರಿಬ್ಬರ ಮೂಲಕ ಪ್ರಾದೇಶಿಕವಾಗಿ ಅಸ್ತಿತ್ವದಲ್ಲಿರುವ ಮಹಿಳಾ ಸಮಾನತೆಯು ಚಿತ್ರಿತಗೊಂಡಿದೆ. 'ಸೀತಾಪುರದ ಕತೆಗಳು' ಸಂಕಲನದ 'ಅಪ್ಪ ಅಮ್ಮನ ಪುಣ್ಯ' ಕಥೆಯ ನತ್ತಲಾಬಾಯಿ ಕೌಟುಂಬಿಕ ಸಮಾನತೆಯ ನೆಲೆಯಿಂದ ಅತ್ಯಂತ ಮಹತ್ತರವಾಗಿ ಗುರುತಿಸಲ್ಪಡುವ ಪಾತ್ರವಾಗಿದೆ. 'ಉಲ್ಲಂಘನೆ' ಕಾದಂಬರಿಯ ಅಂಬಕ್ಕೆ ಹಾಗೂ 'ಮುಖಾಂತರ' ಕಾದಂಬರಿಯ ಪಾರ್ವತಕ್ಕ– ಕೌಟುಂಬಿಕ ನೆಲೆಯ ಸಮಾನತೆಯನ್ನೂ ಮೀರಿ, ಕೌಟುಂಬಿಕ ಶ್ರೇಷ್ಠತೆಯ ನೆಲೆಯಿಂದ ಗುರುತಿಸಬಹುದಾದ ಗಟ್ಟಿ ಪಾತ್ರಗಳಾಗಿವೆ.

ಸ್ತ್ರೀ ಬಂಡಾಯವು ಅತ್ಯಂತ ವಿಶಿಷ್ಟ ರೀತಿಯಲ್ಲಿ 'ಸೀತಾಪುರದಲ್ಲಿ ಗಾಂಧೀಜಿ' ಸಂಕಲನದ 'ಚಾರಣ' ಕಥೆಯಲ್ಲಿ ವ್ಯಕ್ತಗೊಂಡಿದೆ. ಈ ಕಥೆಯಲ್ಲಿ ಪುರುಷ ಪಾರಮ್ಯವನ್ನು ಪ್ರಶ್ನಿಸುವ, ಪ್ರತಿರೋಧಿಸುವ ನೆಲೆಯಲ್ಲಿ ತುಂಬಕ್ಕೆ ಮಹತ್ವವನ್ನು ಗಳಿಸಿಕೊಳ್ಳುತ್ತಾಳೆ. ಕೌಟುಂಬಿಕ ನೆಲೆಯ ಮಹಿಳಾ ಬಂಡಾಯವನ್ನು 'ಸೀತಾಪುರದ ಕತೆಗಳು' ಸಂಕಲನದ 'ಒಳಗಿದ್ದವಳು(ನು)' ಕಥೆಯಲ್ಲಿ ಕಾಣಬಹುದು. ಕೂಲಿ ಕೆಲಸದ ಹೆಣ್ಣುಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ ಜಮೀನ್ದಾರರ ವಿರುದ್ಧದ ಸಾತ್ವಿಕ ಬಂಡಾಯ/ ಬೌದ್ಧಿಕ ಬಂಡಾಯ 'ಮಾತು ಕತೆಯಾದ ಕತೆ' ಎನ್ನುವ ಕಥೆಯಲ್ಲಿದೆ. 'ಸುಂದರಿಯ ಎರಡನೇ ಅವತಾರ' ಕಥೆಯಲ್ಲಿ ವ್ಯಕ್ತಗೊಳ್ಳುವ ಮಹಿಳಾ ಪ್ರತಿರೋಧವು ಮೊಗಸಾಲೆಯವರ ಉಳಿದ ಕಥೆ– ಕಾದಂಬರಿಗಳಲ್ಲಿ ಕಂಡುಬರುವ ಮಹಿಳಾ ಬಂಡಾಯಕ್ಕಿಂತ ಭಿನ್ನವಾಗಿ ಕಂಡುಬರುತ್ತದೆ. ವೇಶ್ಯೆ ಎಂದು ತನ್ನನ್ನು ಅವಮಾನಿಸಿದ ವ್ಯಕ್ತಿಗೆ ಅವಮಾನಕ್ಕೊಳಗಾದ ಸುಂದರಿ ಎಂಬ ಹೆಣ್ಣುಮಗಳು ಲಂಗೋಟಿಯಲ್ಲಿ ಬಾರಿಸುತ್ತಾಳೆ. ಆಕೆಯ ಈ ಬಗೆಯ ಪ್ರತಿರೋಧದ ಹಿನ್ನೆಲೆಯಲ್ಲಿ ಊರಿನ ವೈದ್ಯರನ್ನು ರಕ್ಷಿಸುವ ಉದ್ದೇಶದ ಜೊತೆಗೆ ತನ್ನ ಮೇಲಿನ ಶೋಷಣೆಗೆ ಪ್ರತಿಕಾರವನ್ನು ತೀರಿಸಿಕೊಳ್ಳುವ ಮನೋಭಾವವೂ ಇದ್ದುದು ಸ್ಪಷ್ಟಗೊಳ್ಳುತ್ತದೆ. 'ಉಲ್ಲಂಘನೆ' ಕಾದಂಬರಿಯಲ್ಲಿಯೂ ಇದೇ ರೀತಿಯ ಸನ್ನಿವೇಶವಿದೆ. ಗಂಗಯ್ಯ ಶೇಂದಿ ಅಂಗಡಿಯಲ್ಲಿದ್ದಾಗ ಅಲ್ಲಿಗೆ ಹೋದ ಕರ್ಗಿ ಅಲ್ಲಿದ್ದ ಹತ್ತಾರು ಜನರ ಎದುರೇ ತನ್ನ ಲಂಗೋಟಿಯನ್ನು ಬಿಚ್ಚಿ ಆತನ ಮುಖಕ್ಕೆ ಅದರಿಂದ ಬಾರಿಸಿ, ಅಲ್ಲಿಂದ ಹೊರಟುಹೋಗುತ್ತಾಳೆ. ಸಮಾನತೆಯ ಆಶಯವನ್ನು ಇರಿಸಿಕೊಂಡು ಹೆಂಡತಿಯಾದವಳು ಗಂಡನನ್ನು ಪ್ರಶ್ನಿಸುವ, ಸಿಡಿದೇಳುವ ಚಿತ್ರಣ 'ಸನ್ನಿಧಿಯಲ್ಲಿ ಸೀತಾಪುರ' ಸಂಕಲನದ 'ಇನ್ನುಮುಂದೆ ಶಬ್ಧ ಇಲ್ಲ' ಕಥೆಯಲ್ಲಿ ಕಂಡುಬರುತ್ತದೆ. 'ಪ್ರಭುಸಮ್ಮಿತ' ಕಥೆಯ ಕರ್ಗಿ ಶೆಡ್ತಿ ಪ್ರಧಾನ ನೆಲೆಯಲ್ಲಿ ಅಲ್ಲದಿದ್ದರೂ ಆಂಶಿಕ ನೆಲೆಯಲ್ಲಿ ದಿಟ್ಟತನವನ್ನು ಪ್ರದರ್ಶಿಸುತ್ತಾಳೆ. 'ಅರ್ಥ' ಕಾದಂಬರಿಯ ಪುಟ್ಟಕ್ಕಳ ಕೌಟುಂಬಿಕ ಬಂಡಾಯ ಬಹಳ ತೀಕ್ಷ್ಣವಾದ ಮತ್ತು ಅರ್ಥಪೂರ್ಣವಾದ ನೆಲೆಯನ್ನು ಹೊಂದಿದೆ.

'ನುಗ್ಗೆಗಿಡ' ಕಥೆಯ ಪ್ರೇಮಕ್ಕ ಅವರ ಮೂಲಕ ವ್ಯಕ್ತಗೊಳ್ಳುವ ಅಂತಃಕರಣವು ಹೆಚ್ಚು ಬಲಯುತವಾದದ್ದು. ಆಕ್ರೋಶವನ್ನೂ ಮರೆತು ಪ್ರಕಟಗೊಳ್ಳುವ ಅಂತಃಕರಣವು ಪ್ರಾದೇಶಿಕವಾಗಿ ಮಹಿಳೆಯರಲ್ಲಿರುವ ವಿಶಿಷ್ಟ ಶಕ್ತಿಯನ್ನು ಸೂಚಿಸುತ್ತದೆ. 'ಗುಹೇಶ್ವರನೆಂಬ ಅಪ್ರಮಾಣ' ಕಥೆಯಲ್ಲಿ ಪ್ರಾದೇಶಿಕ ಮಹಿಳಾ ಅಂತಃಕರಣದ ನೆಲೆಯಿದೆ. ಕುಪ್ಪಣ್ಣಯ್ಯ ಹಾಗೂ ದೇಜಪ್ಪ ಮಾಸ್ತ್ರ ಪತ್ನಿಯರು ಮಂಗಗಳನ್ನು ಕೊಲ್ಲುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ. ಸ್ತ್ರೀ ಅಂತಃಕರಣವನ್ನು ಇಲ್ಲಿ ಗುರುತಿಸಬಹುದು.

ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸ್ತ್ರೀ ಸಂವೇದನೆಯು ಗಮನಾರ್ಹ ಪ್ರಮಾಣದಲ್ಲಿದೆ. ಸ್ತ್ರೀ ಸಂವೇದನೆಯ ಅಭಿವ್ಯಕ್ತಿಯಲ್ಲಿ ಬಂಡಾಯವನ್ನು ಪ್ರಧಾನ ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ. ಸಮಾನತೆಯ ಆಶಯವೂ ಅತ್ಯಂತ ಗಾಢವಾಗಿ ಪ್ರತಿಬಿಂಬಿತಗೊಂಡಿದೆ. ಸರ್ವೇಸಾಮಾನ್ಯವಾಗಿ ಮಹಿಳೆಯರ ಮೂಲಭೂತ ಗುಣವೆಂದು ಮಾನ್ಯವಾಗಿರುವ ಅಂತಃಕರಣದ ಚಿತ್ರಣಕ್ಕೆ ಕಡಿಮೆ ಪ್ರಾಶಸ್ತ್ಯವನ್ನು ನೀಡಲಾಗಿದೆ.
ಮೊಗಸಾಲೆಯವರು ಅಭಿವ್ಯಕ್ತಿಸಿರುವ ಮಹಿಳಾ ಬಂಡಾಯ, ಮಹಿಳಾ ಸಮಾನತೆ, ಮಹಿಳಾ ಅಂತಃಕರಣಗಳು ಕೋಳ್ಯೂರು, ಉಡುಪಿ, ಕಾಂತಾವರ ಪ್ರದೇಶಗಳನ್ನು ಆಧರಿಸಿಕೊಂಡಿವೆ. 'ಚಾರಣ' ಕಥೆಯ ತುಂಬಕ್ಕೆ, 'ಒಳಗಿದ್ದವಳು(ನು)' ಕಥೆಯ ಅಚ್ಚುಮಕ್ಕ, 'ಮಾತು ಕತೆಯಾದ ಕತೆ' ಕಥೆಯ ಕಾವೇರಿ, 'ಸುಂದರಿಯ ಎರಡನೇ ಅವತಾರ' ಕಥೆಯ ಸುಂದರಿ, 'ಉಲ್ಲಂಘನೆ' ಕಾದಂಬರಿಯ ಕರ್ಗಿ ಇವರ ಬಂಡಾಯದ ಸನ್ನಿವೇಶಗಳು ಉಡುಪಿ ಹಾಗೂ ಕಾಂತಾವರ ಪ್ರದೇಶದಲ್ಲಿ ನಡೆದ ನೈಜ ಘಟನೆಗಳಾಗಿವೆ. 'ಅರ್ಥ' ಕಾದಂಬರಿಯ ಪುಟ್ಟಕ್ಕಳ ಪಾತ್ರವು ಮೊಗಸಾಲೆಯವರ ಪುಟ್ಟತ್ತೆಯವರ ವ್ಯಕ್ತಿತ್ವದ ಪ್ರೇರಣೆಗೊಳಗಾಗಿದೆ. ಗಂಡನಿದ್ದೂ ವಿಧವೆಯ ಹಾಗೆ ಬದುಕಿದ ಹಾಗೂ ಇಂತಹ ಬದುಕನ್ನು ನಡೆಸಬೇಕಾಗಿ ಬಂದದ್ದಕ್ಕಾಗಿ ವ್ಯಥೆಪಡದ ಪುಟ್ಟತ್ತೆಯ ದಿಟ್ಟತನ ಪುಟ್ಟಕ್ಕಳ ಗುಣ-ಸ್ವಭಾವಗಳಲ್ಲಿ ಸ್ಪಷ್ಟವಾಗಿ ನೆಲೆಗೊಂಡಿದೆ. ಮಹಿಳಾ ಸಮಾನತೆಯನ್ನು ಸಾರುವ ಲೀಲಾ ಮೇಡಮ್, ನತ್ತಲಾಬಾಯಿ ಮೊದಲಾದವರು ಕಾಂತಾವರದ ದಿಟ್ಟ ಮಹಿಳೆಯರ ಪ್ರತಿನಿಧಿಗಳಾಗಿದ್ದಾರೆ. ಮದ್ದಳೆಗಾರ್ತಿಯಾಗಿ ತೊಡಗಿಕೊಳ್ಳುವ ಸರಸ್ವತಿಯ ಪಾತ್ರಚಿತ್ರಣದ ಮೂಲಕ' ವಿಟ್ಲ, ಕಾಸರಗೋಡು ಭಾಗದ ಮಹಿಳೆಯರಲ್ಲಿರುವ ಕಲಾಸಕ್ತಿಯನ್ನು ಪ್ರಸ್ತುತಪಡಿಸಲಾಗಿದೆ. 'ಉಲ್ಲಂಘನೆ' ಕಾದಂಬರಿಯುದ್ದಕ್ಕೂ ಗಮನ ಸೆಳೆಯುವ ಅಂಬಕ್ಕೆಯ ಪಾತ್ರವು ದಕ್ಷಿಣ ಕನ್ನಡ ಜಿಲ್ಲೆಯ ಗುತ್ತಿನ ಮನೆಯ ಹೆಣ್ಣುಮಗಳೊಬ್ಬಳ ವ್ಯಕ್ತಿತ್ವದ ಯಥಾವತ್ ಚಿತ್ರಣವಾಗಿದೆ. 'ಮುಖಾಂತರ' ಕಾದಂಬರಿಯು ಮೊಗಸಾಲೆಯವರ ಮನೆತನದ ಚಿತ್ರಣವಲ್ಲದಿದ್ದರೂ, ಇಲ್ಲಿ ಬರುವ ಪಾರ್ವತಕ್ಕ ಎನ್ನುವ ಪಾತ್ರಕ್ಕೆ ಮೊಗಸಾಲೆಯವರ ಹಿಂದಿನ ತಲೆಮಾರಿನ ಹೆಣ್ಣುಮಗಳನ್ನು ಸ್ಫೂರ್ತಿಯಾಗಿ ಇರಿಸಿಕೊಳ್ಳಲಾಗಿದೆ. ತಮ್ಮ ಪತ್ನಿ ಶ್ರೀಮತಿ ಪ್ರೇಮಾ ಮೊಗಸಾಲೆಯವರ ವಿಶಿಷ್ಟ ವ್ಯಕ್ತಿತ್ವವನ್ನೇ ಆಧಾರವಾಗಿಟ್ಟುಕೊಂಡು ಮೊಗಸಾಲೆಯವರು 'ನುಗ್ಗೆಗಿಡ' ಕಥೆಯ ಪ್ರೇಮಕ್ಕ ಪಾತ್ರವನ್ನು ರೂಪಿಸಿದ್ದಾರೆ.

'ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಧರ್ಮ- ಸಮುದಾಯ ಆಧಾರಿತವಾಗಿ ಕರಾವಳಿ ಪ್ರದೇಶದ ಚಿತ್ರಣ'ವು ಐದನೇ ಅಧ್ಯಾಯವಾಗಿದ್ದು, ಕರಾವಳಿ ಪ್ರದೇಶದ ಧರ್ಮ- ಸಮುದಾಯಗಳಿಗೆ ಸಂಬಂಧಪಟ್ಟ ಹಲವು ಸಂಗತಿಗಳನ್ನು ಬಹು ಆಯಾಮಗಳಲ್ಲಿ ಶೋಧಿಸಲಾಗಿದೆ. 'ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು', 'ಬಿಜಾಗರಿ', 'ಅಪ್ಪ ಅಮ್ಮನ ಪುಣ್ಯ', 'ನುಗ್ಗೆಗಿಡ', 'ದನಕರು', 'ಭೂಮಿ ಮತ್ತು ಆಕಾಶ' ಕಥೆಗಳಲ್ಲಿ ಹಾಗೂ 'ನೆಲಮುಗಿಲುಗಳ ಮಧ್ಯೆ', 'ಮುಖಾಂತರ', 'ಉಲ್ಲಂಘನೆ', 'ಮಣ್ಣಿನ ಮಕ್ಕಳು', 'ಅರ್ಥ' ಕಾದಂಬರಿಗಳಲ್ಲಿ ಧಾರ್ಮಿಕ ಸೌಹಾರ್ದತೆಯ ಚಿತ್ರಣವಿದೆ. ಮತಾಂತರದ ಪ್ರಕ್ರಿಯೆ ಮತ್ತು ಪರಿಣಾಮಗಳನ್ನು ಪ್ರಧಾನವಾಗಿ 'ಪಂಥ' ಕಾದಂಬರಿಯು ಒಳಗೊಂಡಿದೆ. ಹೊನ್ನಿ ಮತಾಂತರ ಆಗುವುದಕ್ಕೆ ಅವಳ ಮಗನಿಗಿರುವ ಅನಾರೋಗ್ಯ ಒಂದು ಕಾರಣವಾದರೆ ಅಸ್ಪೃಶ್ಯತೆ, ಜಾತ್ಯಾಧಾರಿತ ಶೋಷಣೆ ಇನ್ನೊಂದು ಕಾರಣವಾಗಿರುತ್ತದೆ. ಹೊನ್ನಿಯ ಮತಾಂತರವು ಊರಿನಲ್ಲಿ ಅನೇಕ ಪಲ್ಲಟಗಳಿಗೆ ಎಡೆಮಾಡಿಕೊಡುತ್ತದೆ. 'ಬೆಟ್ಟದ ನೆಲ್ಲಿ ಮತ್ತು ಕಡಲಿನ ಉಪ್ಪು' ಕಥೆಯಲ್ಲಿ ಹಾಗೂ 'ನೆಲಮುಗಿಲುಗಳ ಮಧ್ಯೆ' ಕಾದಂಬರಿಯಲ್ಲಿ ಆಂಶಿಕವಾಗಿ ಮತಾಂತರದ ಪ್ರಸ್ತಾಪ ಇದೆ. 'ನೆಲಮುಗಿಲುಗಳ ಮಧ್ಯೆ' ಕಾದಂಬರಿಯಲ್ಲಿ ಮತಾಂತರದ ಪರಿಣಾಮವು ವ್ಯಕ್ತಿಯ ಬದುಕಿನುದ್ದಕ್ಕೂ ಅನೇಕ ದುರ್ಘಟನೆಗಳಿಗೆ ಎಡೆಮಾಡಿಕೊಡುತ್ತಲೇ ಹೋಗುವ ಚಿತ್ರಣವಿದೆ. 'ಬೆಟ್ಟದ ನೆಲ್ಲಿ ಮತ್ತು ಕಡಲಿನ ಉಪ್ಪು' ಕಥೆಯಲ್ಲಿ ಪೀನಾಬ್ಯಾ ಕುಪ್ಪಣ್ಣಯ್ಯನವರಲ್ಲಿ ಹೇಳುವ ಮಾತಿನಲ್ಲಿ ಕರಾವಳಿ ಪ್ರದೇಶದಲ್ಲಿ ನಡೆಯುತ್ತಿದ್ದ ಮತಾಂತರದ ಪ್ರಸ್ತಾಪವಿದೆ.

ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಧಾರ್ಮಿಕ ಸಂಘರ್ಷವು ಎರಡು ನೆಲೆಗಳನ್ನು ಆಧರಿಸಿಕೊಂಡಿದೆ. ಆ ಎರಡು ನೆಲೆಗಳು: ೧. ಸೈದ್ಧಾಂತಿಕ ನೆಲೆ. ೨. ವ್ಯಾಪಾರದ ಏಕಸ್ವಾಮ್ಯದ ನೆಲೆ. 'ಮುಖಾಮುಖಿ' ಕಥೆಯಲ್ಲಿ ಹಾಗೂ 'ದಿಗಂತ' ಕಾದಂಬರಿಯಲ್ಲಿ ಸೈದ್ಧಾಂತಿಕ ನೆಲೆಯನ್ನು ಒಳಗೊಂಡ ಧಾರ್ಮಿಕ ಸಂಘರ್ಷ ಕಂಡುಬರುತ್ತದೆ. 'ಮುಖಾಮುಖಿ' ಕಥೆಯು ವಿಚಾರವಾದಿಯಾಗಿದ್ದ ಸಿರಿಲ್ ಎನ್ನುವ ವ್ಯಕ್ತಿ ಪುತ್ತೂರು ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ನಡೆಸಿದ ಸೈದ್ಧಾಂತಿಕ ಹೋರಾಟವನ್ನು ಮುಖ್ಯಭೂಮಿಕೆಯಗಿರಿಸಿಕೊಂಡಿದೆ. 'ದಿಗಂತ' ಕಾದಂಬರಿಯಲ್ಲಿ ಆಸ್ತಿಕತೆ ಹಾಗೂ ನಾಸ್ತಿಕತೆಗಳನ್ನು ಆಧರಿಸಿದ ಸಿದ್ಧಾಂತಗಳು ಧಾರ್ಮಿಕತೆಯನ್ನು ಕೇಂದ್ರವಾಗಿರಿಸಿಕೊಂಡು ಮುಖಾಮುಖಿಯಾಗುತ್ತವೆ. ವೈಜ್ಞಾನಿಕತೆ ಹಾಗೂ ಧಾರ್ಮಿಕತೆಗಳ ನಡುವಿನ ಸೈದ್ಧಾಂತಿಕ ಸಂಘರ್ಷ ಈ ಕಾದಂಬರಿಯಲ್ಲಿದೆ. 'ಉಲ್ಲಂಘನೆ' ಕಾದಂಬರಿಯಲ್ಲಿ ವ್ಯಾಪಾರದ ಏಕಸ್ವಾಮ್ಯದ ನೆಲೆಯಿಂದ ಧಾರ್ಮಿಕ ಸಂಘರ್ಷ ನಡೆಯುತ್ತದೆ. ಆದಂ ಕುಟ್ಟಿಯು ವ್ಯಾಪಾರದಲ್ಲಿ ಸಾಧಿಸಿದ್ದ ಏಕಸ್ವಾಮ್ಯತೆಯು ಧಾರ್ಮಿಕ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ.

ಕರಾವಳಿ ಪ್ರದೇಶದ ಜನರಲ್ಲಿರುವ ಧಾರ್ಮಿಕ ಪ್ರಜ್ಞೆಯನ್ನು ಮೊಗಸಾಲೆಯವರ ಸಾಹಿತ್ಯದಲ್ಲಿ ಗಮನಿಸಿಕೊಳ್ಳಬಹುದು. 'ಈ ಕತೆ ಸುಮ್ಮನೆ ಅಲ್ಲ' ಕಥೆಯಲ್ಲಿ ಭೂತ ಪಿಶಾಚಿಗಳ ಅಸ್ತಿತ್ವವನ್ನು ಅಲ್ಲಗಳೆದ ಗ್ರೆಗರಿ ಕ್ರಾಸ್ತರ ಮಾತು ಅವಗಣನೆಗೆ ಒಳಗಾಗುವುದಕ್ಕೆ ಅವರ ಧರ್ಮ ಕಾರಣವಾಗುತ್ತದೆ. 'ಇದು ನೀವೇ ಕೊಟ್ಟ ತೀರ್ಪು, ದೇವರೇ' ಕಥೆಯಲ್ಲಿಯೂ ಕೂಡಾ ಇದೇ ತರಹದ ಸನ್ನಿವೇಶ ಕಂಡುಬರುತ್ತದೆ. ಶೇಕಬ್ಬ ಒಳ್ಳೆಯ ರೀತಿಯಲ್ಲಿ ದಾಲ್ಚಿನಿ ವ್ಯವಹಾರವನ್ನು ಮಾಡಿ ಅಭಿವೃದ್ಧಿಯನ್ನು ಸಾಧಿಸುತ್ತಾನೆ. ಆದರೆ ಆತ ಮುಸ್ಲಿಮನಾಗಿದ್ದ ಕಾರಣಕ್ಕೆ ಊರವರು ಆತನ ಬೆಳವಣಿಗೆಯ ಕುರಿತು ಸಂಶಯವನ್ನು ಹೊಂದುತ್ತಾರೆ. ಕರಾವಳಿಯ ಜನಸಮುದಾಯಗಳಲ್ಲಿರುವ ಆಸ್ತಿಕತೆಯ ಗಾಢತೆಯನ್ನು 'ಅಳಿಯುವ ಮೊದಲೇ' ಕಥೆ ಮನಗಾಣಿಸುತ್ತದೆ. ಕುಪ್ಪಣ್ಣಾಚಾರ್ಯರಿಗೆ ದೇವರ ಕುರಿತು ನಂಬಿಕೆ ಇಲ್ಲದಿರುವುದೇ ಅವರನ್ನು ಊರಿನ ಜನರು ವಿರೋಧಿಸುವುದಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಜನರಲ್ಲಿರುವ ಧಾರ್ಮಿಕ ನಂಬಿಕೆಯನ್ನು ವೈಯಕ್ತಿಕ ಗುರುತಿಸುವಿಕೆ, ಜನಪ್ರಿಯತೆಗೆ ಬಳಸಿಕೊಳ್ಳುವ ಮನೋಧರ್ಮ 'ಮಾಯೆ ಅಲ್ಲದ ಮಾಯೆ' ಕಥೆಯಲ್ಲಿ ಕಂಡುಬರುತ್ತದೆ. ಭೀಮಸೇನಾಚಾರ್ಯರು 'ಶುದ್ಧಾದ್ವೈತ' ಎನ್ನುವ ಧಾರ್ಮಿಕ ಪಂಥ ಇದೆ ಎನ್ನುವ ಸುಳ್ಳು ಸುದ್ದಿಯನ್ನು ಹರಡುತ್ತಾರೆ. ಈ ಮೂಲಕ ಜನರನ್ನು ನಂಬಿಸಿ, ಜನಪ್ರಿಯತೆ ಗಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಸಮುದಾಯವನ್ನು ಒಳ್ಳೆಯ ಉದ್ದೇಶಕ್ಕೆ ಬಳಸಿಕೊಳ್ಳುವ ಆಶಯ 'ಐಕಾರ್ನಿಯಾ' ಕಥೆಯಲ್ಲಿದೆ. ಸಮುದಾಯ ಸಂಘಟನೆಯ ಮೂಲಕ ಊರಿನ ಆಡಳಿತ ವ್ಯವಸ್ಥೆಯನ್ನು, ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾಯಿಸುವ ಆಶಯ ಇಲ್ಲಿದೆ. ಬ್ರಾಹ್ಮಣ ಸಮುದಾಯದೊಳಗಡೆಯೇ ಇರುವ ಮಾತ್ಸರ್ಯವನ್ನು 'ಬಿಜಾಗರಿ' ಕಥೆಯು ಪ್ರಕಟಪಡಿಸಿದೆ. ಅಂತರ್ಸಮುದಾಯ ವಿವಾಹದ ಕುರಿತು ತುಂಬಾ ಗಂಭೀರ ನೆಲೆಯ ಪ್ರಸ್ತಾಪ 'ಹದ್ದು' ಕಥೆಯಲ್ಲಿ ಕಂಡುಬರುತ್ತದೆ.

ಧರ್ಮ ಸಂಘಟನೆಯು ಸಮುದಾಯ ಪ್ರಜ್ಞೆಯನ್ನು ಪರಿಭಾವಿಸುವ ಎರಡು ನೆಲೆಗಳನ್ನು 'ಹದ್ದು' ಕಥೆಯಲ್ಲಿ ಗುರುತಿಸಲಾಗಿದೆ. ಆ ಎರಡು ನೆಲೆಗಳೆಂದರೆ:

೧. ಸಮುದಾಯ ಪ್ರಜ್ಞೆ ನಿರ್ಮೂಲನವಾಗಬೇಕು. ಅಂತರ್ಸಮುದಾಯ ವಿವಾಹಗಳಾಗಬೇಕು.

೨. ಸಮುದಾಯ ನಿರ್ಮೂಲನೆ ಸಾಧ್ಯವಿಲ್ಲ. ಸಮುದಾಯದ ಹೆಸರಿನಲ್ಲಿ ಶೋಷಣೆ ಬೇಡ. ಸಮುದಾಯ ಕಟ್ಟುಪಾಡು ಅವರವರ ಮನೆಯಲ್ಲಿ ಇರಲಿ. ಸಾರ್ವಜನಿಕವಾಗಿ ನಾವೆಲ್ಲ ಒಂದು ಎಂಬ ಘೋಷಣೆ ಮತ್ತು ಕಾರ್ಯಾಚರಣೆಯಿರಲಿ.

‘ಅನಂತ’ ಕಾದಂಬರಿಯಲ್ಲಿ ಅನಂತನ ಅಜ್ಜಿ ಹೇಳುವ ಮಾತು ಸಮುದಾಯ ತಾರತಮ್ಯವನ್ನು, ಅಸ್ಪೃಶ್ಯತೆಯನ್ನು ಸೂಚಿಸುತ್ತದೆ. ‘ದೃಷ್ಟಿ’ ಕಾದಂಬರಿಯ ವಾಸು ತನ್ನ ಸ್ನೇಹಿತ ಪುಟ್ಟಣ್ಣಯ್ಯನ ಮನೆಯಲ್ಲಿ ಊಟ ಮಾಡಿದ ಕಾರಣಕ್ಕಾಗಿ ವಾಸುವಿನ ಚಿಕ್ಕಪ್ಪ- ಚಿಕ್ಕಮ್ಮ ಅಸಮಾಧಾನಕ್ಕೆ ಒಳಗಾಗುತ್ತಾರೆ. ‘ನೆಲಮುಗಿಲುಗಳ ನಡುವೆ’ ಕಥೆಯಲ್ಲಿ ಕೃಷ್ಣಯ್ಯನವರ ಪತ್ನಿ ರಾಧಮ್ಮ ತನ್ನ ಗಂಡನಿಗೆ ಆತ್ಮೀಯರಾದ ಅನ್ಯ ಸಮುದಾಯದ ಜನರ ಎಂಜಲು ತಟ್ಟೆಗಳನ್ನು ತೆಗೆಯಲು ಸುತಾರಾಂ ಒಪ್ಪುವುದಿಲ್ಲ. ಸಮುದಾಯ ಪ್ರಜ್ಞೆಯ ಮನೋಭಾವ ‘ಪ್ರಭುಸಮ್ಮಿತ’ ಕಥೆಯೊಳಗಡೆ ವ್ಯಕ್ತವಾಗಿದೆ. ಬ್ರಾಹ್ಮಣೇತರ ಸಮುದಾಯಗಳಲ್ಲಿ ಕಂಡುಬರುವ ಅಸಮಾನತೆಯನ್ನು ‘ಲಂಗೋಟಿಯ ನ್ಯಾಯಪ್ರಕರಣ ಎಂಬ ಕಥಾವಾಚನವು’ ಕಥೆಯಲ್ಲಿ ನಾರ್ಣಪ್ಪ ಹಾಗೂ ಮಂಜಯ್ಯ ಪಾತ್ರಗಳ ಮೂಲಕ ಗುರುತಿಸಲಾಗಿದೆ. ಶ್ರಮಿಕ ವರ್ಗಕ್ಕೆ ಸೇರಿದ ಇವರ ಆಹಾರ ಪದ್ಧತಿ ಒಂದೇ ಆಗಿದ್ದರೂ ಸಮುದಾಯದ ಆಧಾರದಲ್ಲಿ ಮೇಲು- ಕೀಳು ಭಾವನೆ ಕಂಡುಬರುತ್ತದೆ. ಬ್ರಾಹ್ಮಣ ಸಮುದಾಯದೊಳಗಡೆಯೇ ಇರುವ ತಾರತಮ್ಯವು ‘ಉಲ್ಲಂಘನೆ’ ಕಾದಂಬರಿಯಲ್ಲಿ ಉಲ್ಲೇಖಗೊಂಡಿದೆ. ಕೋಟ ಬ್ರಾಹ್ಮಣ ಅಡುಗೆಯವರು ಸ್ಥಾನಿಕ ಬ್ರಾಹ್ಮಣರ ಮನೆಗೆ ಅಡುಗೆಗೆ ಬರುತ್ತಿರಲಿಲ್ಲ. ಶಿವಳ್ಳಿ ಬ್ರಾಹ್ಮಣರ ಮನೆಯಲ್ಲಿ ಸ್ಥಾನಿಕ ಬ್ರಾಹ್ಮಣರಿಗೆ ಅಡ್ಡಪಂಕ್ತಿ ಹಾಕಲಾಗುತ್ತಿತ್ತು. ‘ಮುಖಾಂತರ’ ಕಾದಂಬರಿಯಲ್ಲಿ ವರ್ಕಾಡಿಯ ಮುಚ್ಚಿಂತಾಯರು ಆಡುವ ಮಾತಿನಲ್ಲಿ ಮಾಧ್ವ ಬ್ರಾಹ್ಮಣ ಪಾರಮ್ಯ ಮನೋಭಾವ ವ್ಯಕ್ತಗೊಂಡಿದೆ. ಅಸ್ಪೃಶ್ಯತೆ ಎನ್ನುವುದು ಪ್ರತೀ ಸಮುದಾಯದ ಒಳಗೂ ಇದೆ ಎಂಬ ಅಭಿಪ್ರಾಯ ‘ಹದ್ದು’ ಕಥೆಯಲ್ಲಿ ವ್ಯಕ್ತಗೊಂಡಿದೆ. ‘ದಿಗಂತ’ ಕಾದಂಬರಿಯಲ್ಲಿ ಸಮುದಾಯ ಶ್ರೇಷ್ಠತೆಯ ಮನೋಭಾವ ವ್ಯಕ್ತಗೊಂಡಿದೆ. ಆಂಜನೇಯ ಗುಡಿಯ ಜೀರ್ಣೋದ್ಧಾರಕ್ಕೆ ಸಂಬಂಧಪಟ್ಟಂತೆ ನರ್ಸಪ್ಪಯ್ಯನವರು ಶ್ರೀ ಶೀಂತ್ರಿಯವರಲ್ಲಿ ಹೇಳುವ ಮಾತಿನಲ್ಲಿ ಬ್ರಾಹ್ಮಣ ಸಮುದಾಯವೇ ಮೇಲು ಎಂಬ ಭಾವನೆಯಿದೆ. ಸಮುದಾಯದ ಆಧಾರದಲ್ಲಿ ಶಿಕ್ಷಣವನ್ನು ನಿರಾಕರಿಸುವ ಧೋರಣೆ ‘ಉಲ್ಲಂಘನೆ’ ಕಾದಂಬರಿಯಲ್ಲಿ ವ್ಯಕ್ತಗೊಂಡಿದೆ.

ಸಮುದಾಯದ ಆಧಾರದಲ್ಲಿ ಗುಣವನ್ನು ಆರೋಹಿಸುವ ಹಲವು ಸನ್ನಿವೇಶ- ಸಂದರ್ಭಗಳು ಮೊಗಸಾಲೆಯವರ ಸಾಹಿತ್ಯದಲ್ಲಿವೆ. ‘ನನ್ನದಲ್ಲದ್ದು’ ಕಾದಂಬರಿಯ ಶಾಸ್ತ್ರಿಗಳು ಹೇಳುವ ‘ಕೊಂಕಣಿ ಬುದ್ಧಿ’ ಎಂಬ ಪದಪ್ರಯೋಗಕ್ಕೆ ‘ವ್ಯಾಪಾರದಲ್ಲಿನ ಕುಶಲತೆ’ ಹಾಗೂ ‘ಜಿಪುಣತನದ ಮೂಲಕ ಲಾಭ ಗಳಿಸುವ ಕುತಂತ್ರ’ ಎಂಬ ಎರಡು ಅರ್ಥಗಳಿವೆ. ‘ಪಲ್ಲಟ’ ಕಾದಂಬರಿಯಲ್ಲಿ ಬುಡಾನ್ ಸಾಹೇಬರು ಮಾರಪ್ಪ ಶೆಟ್ಟರ ಕುರಿತಾಗಿ ಅವರ ಅನುಪಸ್ಥಿತಿಯಲ್ಲಿ ಹೇಳುವ ‘ಬಂಟರ ಸಹವಾಸ’, ಮಾರಪ್ಪ ಶೆಟ್ಟರು ಶ್ಯಾನುಭೋಗರಾಗಿದ್ದ ರಾಮಕೃಷ್ಣ ಗೋರೆಯವರಿಗೆ ಹೇಳುವ ‘ಬ್ರಾಹ್ಮಣ ಬುದ್ಧಿ’- ಮೊದಲಾದ ಪದಬಳಕೆಯಲ್ಲಿ ಸಮುದಾಯಕ್ಕನುಗುಣವಾಗಿ ಸ್ವಭಾವವನ್ನು ಆರೋಹಿಸಲಾಗಿದೆ. ‘ಮುಖಾಂತರ’ ಕಾದಂಬರಿಯ ವೆಂಕಪ್ಪ ಮಂಜುನಾಥನಿಗೆ ಹೇಳುವ ಮಾತಿನಲ್ಲಿ ಬ್ರಾಹ್ಮಣರು ಅಂಜುಬುರುಕರು ಎಂಬ ಅಭಿಪ್ರಾಯ ಕಂಡುಬರುತ್ತದೆ. ಮಾರಪ್ಪ ಶೆಟ್ಟರು ವಿಷ್ಣು ಐತಾಳ ಹಾಗೂ ಶಂಕರನಲ್ಲಿ ಹೇಳುವ ಮಾತಿನಲ್ಲಿ ದಲಿತರಿಗೆ ಶಿಕ್ಷಣ ಪಡೆದುಕೊಳ್ಳುವಷ್ಟು ಬುದ್ಧಿಶಕ್ತಿ ಇಲ್ಲ ಎಂಬ ಅಭಿಪ್ರಾಯವಿದೆ.

‘ಪ್ರಭುಸಮ್ಮಿತ’ ಕಥೆಯಲ್ಲಿ ಸಮುದಾಯಗಳನ್ನು ಮೀರಿನಿಂತ ನಂಬಿಕೆ- ವಿಶ್ವಾಸಗಳ ಚಿತ್ರಣವಿದೆ. ‘ದೃಷ್ಟಿ’ ಕಾದಂಬರಿಯಲ್ಲಿ ಬೆಂಕಿ ಅವಘಡದಿಂದ ಮನೆಯನ್ನು ಕಳೆದುಕೊಂಡ ಪುಟ್ಟಣ್ಣಯ್ಯನ ಮನೆಯನ್ನು ಮರುನಿರ್ಮಿಸಲು ಊರಿನ ಜನರು ಸಮುದಾಯಾತೀತವಾಗಿ ಸ್ಪಂದಿಸುತ್ತಾರೆ. ‘ಮುಖಾಂತರ’ ಕಾದಂಬರಿಯಲ್ಲಿ ಕೃಷ್ಣಯ್ಯ ತನ್ನ ಮೊಮ್ಮಗ ಶಂಕರನನ್ನು ಉಡುಪಿಗೆ ವಿಷ್ಣು ಐತಾಳರ ಜೊತೆಗೆ ಕರೆದುಕೊಂಡು ಹೋಗುವ ಪ್ರಯಾಣದ ಮಧ್ಯೆ ಕಮ್ತೀ(ಕಾಮತ್)ಯವರ ಅಂಗಡಿಗೆ ಹೋಗುತ್ತಾರೆ. ಕಮ್ತೀಯವರು ತಾವು ಬಡತನದಲ್ಲಿದ್ದರೂ ಕೂಡಾ ಅವರು ಖರೀದಿಸಿದ ಆಹಾರ ಸಾಮಾಗ್ರಿಗಳಿಗೆ ಹಣವನ್ನು ತೆಗೆದುಕೊಳ್ಳುವುದಿಲ್ಲ. ಸಮುದಾಯಭೇದಗಳನ್ನು ಮೀರಿದ ಮಾನವೀಯತೆಯನ್ನು ‘ಲಂಗೋಟಿಯ ನ್ಯಾಯಪ್ರಕರಣ ಎಂಬ ಕಥಾವಾಚನವು’ ಕಥೆಯು ಒಳಗೊಂಡಿದೆ.

ಸಮುದಾಯಾಧಾರಿತ ಸಂಘರ್ಷವು 'ಪಲ್ಲಟ' ಕಾದಂಬರಿಯಲ್ಲಿ ವೈಪರೀತ್ಯಕ್ಕೆ ಹೋಗುತ್ತದೆ. ಮಾರಪ್ಪ ಶೆಟ್ಟರು ಹಾಗೂ ಶ್ಯಾನುಭೋಗರ ನಡುವಿನ ಆಡಳಿತಸಂಬಂಧಿ ವಾಗ್ವಾದವು ಸಾಮುದಾಯಿಕ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. 'ಉಲ್ಲಂಘನೆ' ಕಾದಂಬರಿಯಲ್ಲಿ ಗುತ್ತಿನಾರ್ ಅವರ ಪ್ರೌಢತೆಯಿಂದಾಗಿ ಸಾಮುದಾಯಿಕ ಸಂಘರ್ಷ ನಡೆಯುವುದಿಲ್ಲ. ಸುಬ್ಬಣ್ಣ ಭಟ್ಟರು ಹಾಗೂ ಇನಾಸ ಪರ್ಬು ನಡುವೆ ಜಗಳ ಏರ್ಪಟ್ಟು, ಅದು ವಿಪರೀತಕ್ಕೆ ಹೋದಾಗ ಗುತ್ತಿನಾರ್ ಶೀನಪ್ಪ ಹೆಗ್ಡೆ ಆ ಸನ್ನಿವೇಶವನ್ನು ತುಂಬಾ ಪ್ರೌಢತೆಯಿಂದ ನಿಭಾಯಿಸುತ್ತಾರೆ.
'ಉಲ್ಲಂಘನೆ' ಕಾದಂಬರಿಯಲ್ಲಿ ಸಮುದಾಯದ ದೃಷ್ಟಿಯಿಂದ ಬರುವ ಕೆಲವು ವಿವರಗಳು ವಾಸ್ತವದಿಂದ ಬಹುದೂರ ಉಳಿದುಕೊಂಡಿದೆ. ಸಾಂತೇರ್ ಗುತ್ತಿನ ಮೂಲದಾಳುಗಳಾದ ಕೊರಗು ಮತ್ತು ಕರ್ಗಿ ಅಂಬಕ್ಕೆಗೆ ಅಡುಗೆ ಮಾಡಿ ಬಡಿಸುವ ಚಿತ್ರಣ ಕಾದಂಬರಿಯಲ್ಲಿದೆ. ಈ ಚಿತ್ರಣ ನೈಜತೆಯಿಂದ ಕೂಡಿಲ್ಲ. ಗುತ್ತಿನ ಮನೆಗಳಲ್ಲಿ ತಳ ಸಮುದಾಯದವರಿಗೆ ಮುಕ್ತ ಪ್ರವೇಶ ಇರಲಿಲ್ಲ ಎನ್ನುವುದು ವಾಸ್ತವವಾಗಿದೆ.

'ಡಾ। ನಾ. ಮೊಗಸಾಲೆಯವರ ಸಾಹಿತ್ಯದಲ್ಲಿ ಪ್ರಾದೇಶಿಕವಾಗಿ ವ್ಯಕ್ತಗೊಂಡಿರುವ ಗಾಂಧಿವಾದದ ಅವಲೋಕನ' ಎನ್ನುವ ಆರನೇ ಅಧ್ಯಾಯದಲ್ಲಿ ಕರಾವಳಿ ಪ್ರದೇಶವು ಗಾಂಧೀವಾದದ ಪ್ರಭಾವಕ್ಕೆ ಒಳಗಾದ ರೀತಿ, ಸ್ವಾತಂತ್ರ್ಯ ಹೋರಾಟಕ್ಕೆ ಕರಾವಳಿ ಪ್ರದೇಶ ಪ್ರತಿಸ್ಪಂದಿಸಿದ ಬಗೆಯನ್ನು ಗುರುತಿಸಿಕೊಳ್ಳಲಾಗಿದೆ. 'ಸೀತಾಪುರದಲ್ಲಿ ಗಾಂಧೀಜಿ' ಕಥಾ ಸಂಕಲನದ ಒಂಭತ್ತು ಕಥೆಗಳಲ್ಲಿಯೂ ಗಾಂಧಿವಾದದ ಉಲ್ಲೇಖವಿದೆ. ಕಥೆಯೊಳಗೆ ವ್ಯಕ್ತಗೊಂಡಿರುವ ವ್ಯಕ್ತಿಗಳ ವಿಶಿಷ್ಟ ವ್ಯಕ್ತಿತ್ವ, ಸನ್ನಿವೇಶ ನಿಭಾವಣೆಯ ವಿಧಾನಗಳು, ಕಷ್ಟಕರ ಪರಿಸ್ಥಿತಿಯಲ್ಲಿ ಪ್ರಕಟಗೊಳ್ಳುವ ನಡೆವಳಿಕೆ, ವಿವಿಧ ವಿದ್ಯಮಾನಗಳಿಗೆ ಪ್ರತಿಸ್ಪಂದಿಸುವ ರೀತಿ, ವ್ಯವಸ್ಥೆಯೊಳಗಿನ ಋಣಾತ್ಮಕ ಸಂಗತಿಗಳಿಗೆ ಮುಖಾಮುಖಿಯಾಗುವ ಸಂದರ್ಭ– ಇವೆಲ್ಲವೂ ಕರಾವಳಿ ಪ್ರದೇಶದಲ್ಲಿ ಅನ್ವಯಿಸಲ್ಪಟ್ಟಿರುವ ಗಾಂಧಿ ತತ್ತ್ವಗಳನ್ನು ಮನಗಾಣಿಸುತ್ತದೆ. ಸಂಕಲನದ ಮೊದಲ ಕಥೆಯಾದ 'ಸೀತಾಪುರದಲ್ಲಿ ಗಾಂಧೀಜಿ' ಕಥೆಯಲ್ಲಿ ಗಾಂಧಿವಾದವು ಪ್ರಧಾನ ಭೂಮಿಕೆಯಲ್ಲಿದೆ. ಗ್ರಾಮಸೇವಕ ಅಶ್ವತ್ಥನಾರಾಯಣರು ಹಾಗೂ ಕುಪ್ಪಣ್ಣಯ್ಯ ಇಬ್ಬರೂ ಗಾಂಧಿ ಪ್ರಜ್ಞೆಯನ್ನು ಉನ್ನತವಾಗಿ ಪ್ರಕಟಪಡಿಸುತ್ತಾರೆ. ಸಂಕಲನದ ಮುಂದಿನ ಕಥೆ 'ನುಗ್ಗಿಗಿಡ'ವು ಕುಪ್ಪಣ್ಣಯ್ಯ ಹಾಗೂ ಪ್ರೇಮಕ್ಕಳ ವ್ಯಕ್ತಿತ್ವದ ಮೂಲಕ ಗಾಂಧಿವಾದವನ್ನು ಹೊರಗೆಡಹಿದೆ. 'ದನಕರು' ಕಥೆಯಲ್ಲಿ ಕುಪ್ಪಣ್ಣಯ್ಯ ಗಾಂಧೀಜಿ ತತ್ತ್ವದ ಪ್ರಭಾವಕ್ಕೆ ಒಳಗಾಗಿ, ಏಕಾಂಗಿ ನೆಲೆಯಲ್ಲಿ ಸೈದ್ಧಾಂತಿಕವಾದ ಹೋರಾಟವನ್ನು ಕೈಗೊಳ್ಳುತ್ತಾರೆ. ವರ್ತಮಾನದ ಬದಲಾವಣೆಗಳಿಗೆ ನೈತಿಕತೆಯನ್ನು ಮುಖಾಮುಖಿಗೊಳಿಸುವ ಪ್ರಯತ್ನ 'ಸೀತಾಪುರದಲ್ಲಿ ಗಾಂಧೀಜಿ', 'ನುಗ್ಗಿಗಿಡ' ಹಾಗೂ 'ದನಕರು' ಕಥೆಗಳ ಕುಪ್ಪಣ್ಣಯ್ಯನವರ ಮೂಲಕ ನಡೆಯುತ್ತದೆ. 'ಸುಣ್ಣ ಎದ್ದು ಹೋದ ಗೋಡೆ' ಕಥೆಯಲ್ಲಿ ಶಿಕ್ಷಣ ವ್ಯವಸ್ಥೆಯ ಸ್ವಂತಿಕೆಯನ್ನು ಕಾಪಾಡಿಕೊಳ್ಳುವ ಪ್ರಯತ್ನವಿದೆ. ಗ್ರಾಮೀಣ ಭಾಗದ ಸಾಮಾನ್ಯ ವ್ಯಕ್ತಿಯೊಬ್ಬನಲ್ಲಿ ನೆಲೆಗೊಂಡಿರುವ ವಿಶಿಷ್ಟ ವ್ಯಕ್ತಿತ್ವವನ್ನು 'ಒದ್ದೆಯಾದ ಆಕಾಶ' ಕಥೆಯು ಒಳಗೊಂಡಿದೆ. ಸಾಲ್ದೊಟ್ಟು ಕೊರಗಶೆಟ್ಟರೆಂಬ ವ್ಯಕ್ತಿ ಹೊಂದಿದ್ದ ಸತ್ಯ, ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥತೆ ಇವೆಲ್ಲವೂ ಕಥೆಯ ಪ್ರಮುಖ ಭೂಮಿಕೆಯಲ್ಲಿವೆ. ಈ ಸಂಕಲನದ 'ಚಾರಣ' ಕಥೆಯು ಪ್ರಾದೇಶಿಕ ಮಹಿಳಾ ಪ್ರತಿರೋಧದ ಅಭಿವ್ಯಕ್ತಿಯ ದೃಷ್ಟಿಯಿಂದ ಮುಖ್ಯವಾಗುವಂತೆಯೇ, ಪ್ರಾದೇಶಿಕವಾಗಿ ನೆಲೆಗೊಂಡಿರುವ ಗಾಂಧಿವಾದವನ್ನು ಗುರುತಿಸುವ ನೆಲೆಯಿಂದಲೂ ಮುಖ್ಯವಾಗುತ್ತದೆ. ಗಾಂಧೀಜಿಯವರ ಒಟ್ಟು ಹೋರಾಟದ ವಿಧಾನದೊಳಗಣ ಸೂಕ್ಷ್ಮವನ್ನು ಕಥೆಗೆ ಅನ್ವಯಿಸಿಕೊಳ್ಳಲಾಗಿದೆ. ಲೈಂಗಿಕ ಆಕ್ರಮಣವನ್ನು ಪ್ರತಿರೋಧಿಸುವ ತುಂಬಕ್ಕೆ ಗಾಂಧೀಜಿಯವರ ಹೋರಾಟದ ಮಾದರಿಯನ್ನು ನೆನಪಿಗೆ ತರುತ್ತಾಳೆ. ಈ ಸಂಕಲನದ ಆರು ಕಥೆಗಳು ಪ್ರಧಾನ ಭೂಮಿಕೆಯಲ್ಲಿ, ಅತ್ಯಂತ ಪರಿಣಾಮಕಾರಿಯಾಗಿ ಗಾಂಧಿವಾದವನ್ನು ವ್ಯಕ್ತಗೊಳಿಸಿವೆ. ಉಳಿದ ಮೂರು ಕಥೆಗಳು ಆಂಶಿಕವಾಗಿ ಗಾಂಧಿವಾದವನ್ನು ಒಳಗೊಂಡಿವೆ.

‘ಉಲ್ಲಂಘನೆ’ ಕಾದಂಬರಿಯಲ್ಲಿ ಸಾಂತೇರ್ ಗುತ್ತನ್ನು ಆಧಾರವಾಗಿರಿಸಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಪ್ರಾದೇಶಿಕ ಸ್ಪಂದನೆಯನ್ನು ಗುರುತಿಸಿಕೊಳ್ಳಲಾಗಿದೆ. ಗುತ್ತಿನ ಮನೆಯು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಬ್ರಿಟೀಷರಿಂದ ಪಟೇಲ್ದಾರಿಕೆಯ ಗೌರವವನ್ನು ಪಡೆದ ವೆಂಕಪ್ಪಹೆಗ್ಡೆಯವರು ಬ್ರಿಟೀಷ್ ಸರಕಾರದ ಕುರಿತು ಇರಿಸಿಕೊಂಡಿದ್ದ ನಿಷ್ಠೆಯನ್ನು ಅವರ ನಂತರ ಗುತ್ತಿನಾರ್ ಆದ ಶೀನಪ್ಪಹೆಗ್ಡೆಯವರು ಮುಂದುವರಿಸಿಕೊಂಡು ಹೋಗುತ್ತಾರೆ. ಆದರೆ ಮೂರನೇ ತಲೆಮಾರಿನ ಗುತ್ತಿನ ಮನೆಯು ಸ್ವಾತಂತ್ರ್ಯ ಹೋರಾಟದ ಕುರಿತು ಆಸಕ್ತಿ ವಹಿಸುತ್ತದೆ. ಗಾಂಧೀಜಿಯವರ ತತ್ತ್ವ- ಸಿದ್ಧಾಂತಗಳು ಇದಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಸಂಕಪ್ಪಹೆಗ್ಡೆಯವರ ಪ್ರತಿಪಾದನೆಯ ಗಾಂಧಿವಾದವು ಗುತ್ತಿನ ಮನೆಯ ಮೇಲೆ ದೀರ್ಘಕಾಲೀನ ಪರಿಣಾಮವನ್ನು ಬೀರುತ್ತದೆ. ಗುತ್ತಿನ ಮನೆಯ ಪ್ರತಿಷ್ಠೆಯು ಕಡಿಮೆಗೊಳ್ಳುವುದಕ್ಕೆ ಸಂಕಪ್ಪಹೆಗ್ಡೆಯವರು ಅಳವಡಿಸಿಕೊಂಡಿದ್ದ ಗಾಂಧಿವಾದವು ಪ್ರಮುಖ ಕಾರಣವಾಗಿ ಕಂಡುಬರುತ್ತದೆ. ‘ಮುಖಾಂತರ’ ಕಾದಂಬರಿಯ ಪಟೇಲ ಮಾರಪ್ಪಶೆಟ್ಟರ ವ್ಯಕ್ತಿತ್ವ ಬದಲಾವಣೆಯ ಮೂಲಕ ಕರಾವಳಿ ಪ್ರದೇಶದ ಸಂಪ್ರದಾಯಬದ್ಧವಾದ ಆಡಳಿತ ವ್ಯವಸ್ಥೆಯ ಮೇಲಾಗಿರುವ ಗಾಂಧಿವಾದದ ಪ್ರಭಾವವನ್ನು ಗುರುತಿಸಬಹುದು. ಗಾಂಧೀಜಿಯವರ ಹೋರಾಟವನ್ನು ಕೀಳಂದಾಜಿಸುತ್ತಿದ್ದ ಮಾರಪ್ಪಶೆಟ್ಟರು ಅಂತಿಮವಾಗಿ ಗಾಂಧಿವಾದದ ಪ್ರಭಾವಕ್ಕೆ ಒಳಗಾಗುತ್ತಾರೆ. ಅವರ ಮಗ ಮಂಜುನಾಥ ಗಾಂಧಿವಾದಿಯಾಗಿ ರೂಪುಗೊಳ್ಳುತ್ತಾನೆ. ಮಂಜುನಾಥನ ವರ್ತನೆಯು ಗುತ್ತಿನ ಮನೆಯಲ್ಲಿ ಸಂಚಲನವನ್ನು ಉಂಟುಮಾಡುತ್ತದೆ. ಒಂದು ಹಂತದಲ್ಲಿ ಸ್ವತಃ ಮಾರಪ್ಪಶೆಟ್ಟರು ಗಾಂಧೀಜಿಯವರ ತತ್ತ್ವಸಿದ್ಧಾಂತಗಳಿಂದ ಪ್ರೇರಿತರಾದಂತೆ ಕಂಡುಬರುತ್ತಾರೆ. ಮಾರಪ್ಪಶೆಟ್ಟರು ಪಟೇಲ್ದಾರಿಕೆಯನ್ನು ಬಿಟ್ಟು ಗಾಂಧಿವಾದವನ್ನು ಒಪ್ಪಿಕೊಂಡರೂ ಗಾಂಧೀಜಿಯವರ ತತ್ತ್ವಸಿದ್ಧಾಂತಗಳ ಆಚರಣೆಯ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ‘ಮುಖಾಂತರ’ ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಕರಾವಳಿ ಪ್ರದೇಶವು ನೀಡಿದ ಸ್ಪಂದನೆಯನ್ನು ಗಮನಿಸಿಕೊಳ್ಳಬಹುದು. ಮಂಗಳೂರಿನಿಂದ ಗುತ್ತಿನ ಮನೆಗೆ ಮರಳಿದ ಮಂಜುನಾಥ ಜಾತಿ ತಾರತಮ್ಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಯತ್ನಪಡುವುದು, ಕಾರ್ನಾಡು ಸದಾಶಿವರಾಯರು ಅಸ್ಪೃಶ್ಯರಿಗೆ ತಮ್ಮ ಮನೆಯಲ್ಲಿ ಸಹಪಂಕ್ತಿ ಭೋಜನವನ್ನೇರ್ಪಡಿಸುವ ನಿರ್ಧಾರ ತೆಗೆದುಕೊಳ್ಳುವುದು, ಸೀತಾಪುರಕ್ಕೆ ಆಗಮಿಸಿದ ಗಾಂಧಿಶಂಭಟ್ಟರು ಸ್ವಾತಂತ್ರ್ಯ ಹೋರಾಟದ ದಿಶೆಯಿಂದ ಊರಿನವರನ್ನು ಪ್ರಭಾವಿಸುವುದು ಮೊದಲಾದವು ಈ ಮಾದರಿಯ ಘಟನೆಗಳಾಗಿವೆ. ರಾಜಾಜಿಯವರು ಮಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪೋಲೀಸರ ನಡುವೆ ಸಂಘರ್ಷ ಉಂಟಾದ ಘಟನೆಯೊಂದು ‘ಮುಖಾಂತರ’ ಕಾದಂಬರಿಯಲ್ಲಿದೆ. ಕರಾವಳಿಯ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಗಮನಿಸಿಕೊಂಡಾಗ ಈ ಘಟನೆ ಕಲ್ಪನಾಪ್ರಧಾನವಾದದ್ದು ಎನ್ನುವುದು ಸ್ಪಷ್ಟವಾಗುತ್ತದೆ. ನವಯುಗ, ಸ್ವದೇಶಿ ಪ್ರಚಾರಕ, ಸ್ವಾತಂತ್ರ್ಯ ಭಾರತ, ಶಕ್ತಿ, ರಾಷ್ಟ್ರಬಂಧು- ಮೊದಲಾದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ನೀಡುತ್ತಿದ್ದ ಪತ್ರಿಕೆಗಳ ಉಲ್ಲೇಖ ‘ಮುಖಾಂತರ’ ಕಾದಂಬರಿಯಲ್ಲಿದೆ.

‘ಸಮಾರೋಪ’ದಲ್ಲಿ ಅಧ್ಯಯನದ ಫಲಿತಗಳನ್ನು ಕೊಡಲಾಗಿದೆ:

* ಮೊಗಸಾಲೆಯವರು ‘ಸೀತಾಪುರ’ ಎನ್ನುವ ಕಾಲ್ಪನಿಕ ಪ್ರದೇಶವನ್ನು ಸೃಷ್ಟಿಸಿರುವ ಹಿನ್ನೆಯಲ್ಲಿ ಪ್ರಬಲವಾದ ಕಾರಣವಿದೆ. ನವ್ಯಶೈಲಿಯಲ್ಲಿ ಅವರು ಬರೆದ ‘ಕಾಂತಾವರದ ವರ್ತಮಾನ’ ಎನ್ನುವ ಕವಿತೆಯನ್ನು ತಪ್ಪಾಗಿ ಗ್ರಹಿಸಿಕೊಂಡ ಕಾಂತಾವರದ ಜನರು ತೀವ್ರವಾದ ಆಕ್ರೋಶ ವ್ಯಕ್ತಪಡಿಸಿದ್ದರಿಂದಾಗಿ ಈ ಘಟನೆಯ ನಂತರ ಮೊಗಸಾಲೆಯವರು ‘ಸೀತಾಪುರ’ ಎನ್ನುವ ಕಾಲ್ಪನಿಕ ಪ್ರದೇಶದ ಮೂಲಕ ಕರಾವಳಿಯನ್ನು ಚಿತ್ರಿಸುವ ಪ್ರಯತ್ನ ನಡೆಸಿದ್ದಾರೆ. ಮಣ್ಣಿನ ಮಗಳೆಂದು ಗುರುತಿಸಿಕೊಂಡ ಸೀತೆಯ ಹೆಸರಿನ ಕಾಲ್ಪನಿಕ ಊರಿನ ಮೂಲಕ ಕರಾವಳಿಯ

ಮಣ್ಣನ್ನು ಅಂದರೆ ಇಲ್ಲಿಯ ಜೀವನ ವಿಧಾನವನ್ನು ಕಟ್ಟಿಕೊಡುವುದು ಮೊಗಸಾಲೆಯವರ ಆಶಯವಾಗಿದೆ. ಈ ಕಾರಣದಿಂದ ತಾವು ಹುಟ್ಟುಹಾಕಿದ ಕಾಲ್ಪನಿಕ ಪ್ರದೇಶಕ್ಕೆ 'ಸೀತಾಪುರ' ಎನ್ನುವ ಹೆಸರನ್ನೇ ಇಟ್ಟಿದ್ದಾರೆ.

* ಅಲ್ಲಮಪ್ರಭುವಿನ ದಾರ್ಶನಿಕತೆಗಳನ್ನು ಕರಾವಳಿಯ ಪ್ರದೇಶಕ್ಕೆ ಅನ್ವಯಿಸಿ ಮೊಗಸಾಲೆಯವರು ಬರೆದ ಹನ್ನೆರಡು ಕಥೆಗಳು 'ಸನ್ನಿಧಿಯಲ್ಲಿ ಸೀತಾಪುರ' ಕಥಾಸಂಕಲನದಲ್ಲಿವೆ. ಈ ನೆಲೆಯಲ್ಲಿ ಮೊಗಸಾಲೆಯವರನ್ನು ಪ್ರೇರೇಪಿಸಿದ ಎರಡು ಅಂಶಗಳಿವೆ. ಅಲ್ಲಮನ ವಚನಗಳನ್ನು ನಿರಂತರವಾಗಿ ಅಧ್ಯಯನ ಮಾಡುತ್ತಿದ್ದ ಮೊಗಸಾಲೆಯವರಿಗೆ ಆ ವಚನಗಳ ಕುರಿತು ವಿಪರೀತವಾದ ಆಸ್ಥೆ ಬೆಳೆಯುತ್ತದೆ. ಕೇರಳದ ತಿರುವನಂತಪುರಕ್ಕೆ ಕವಿಗೋಷ್ಠಿಗೆಂದು ಹೋದ ಮೊಗಸಾಲೆಯವರು ಮಲಯಾಳಂನ ಆದಿಕವಿ ಎಡತುಚ್ಚನ್ ಅವರ ಹೆಸರಿನಲ್ಲಿ ಇರುವ ಒಂದು ಸಂಸ್ಥೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವುದನ್ನು ತಿಳಿದುಕೊಳ್ಳುತ್ತಾರೆ. ಇದರಿಂದಾಗಿ ಅಲ್ಲಮಪ್ರಭುವಿನ ಬಗೆಗಿನ ಆಸಕ್ತಿ ಇನ್ನಷ್ಟು ಹೆಚ್ಚಾಗುತ್ತದೆ. ತಾವು ಕಂಡ, ಕೇಳಿದ ಘಟನೆಗಳನ್ನು ಆಧಾರವಾಗಿಟ್ಟುಕೊಂಡು, ಅವುಗಳಿಗೆ ಅಲ್ಲಮನ ಕಾಣ್ಕೆಯನ್ನು ಅನ್ವಯಿಸಿದ್ದಾರೆ. ಈ ಕಾರಣದಿಂದ ಕರಾವಳಿ ಪ್ರದೇಶದ ಅನೇಕ ಘಟನೆಗಳು ಅಲ್ಲಮನ ವಚನಗಳ ಅಂತರಾರ್ಥವನ್ನು, ಆಶಯವನ್ನು ಒಳಗೊಂಡ ಸಣ್ಣಕಥೆಗಳಾಗಿ ಗುರುತಿಸಿಕೊಳ್ಳುವಂತಾಗಿದೆ.

* 'ಉಲ್ಲಂಘನೆ' ಕಾದಂಬರಿಯಲ್ಲಿ ಬರುವ ಸಾಂತೇರ್ ಗುತ್ತಿನ ಚಿತ್ರಣಕ್ಕೆ ಈಗಿನ ಉಳ್ಳಾಲ ಪ್ರದೇಶದ ಗುತ್ತಿನ ಮನೆಯು ಪ್ರೇರಣೆಯಾಗಿದೆ. 'ಶಾಂತಿರಾಜರ ಗುತ್ತು' ಎನ್ನುವ ಹೆಸರು ಜನಸಾಮಾನ್ಯರ ಬಾಯಿಯಲ್ಲಿ 'ಸಾಂತೇರ್ ಗುತ್ತು' ಎಂದು ಮಾರ್ಪಾಡಾಗಿದೆ. ನೈಜವ್ಯಕ್ತಿಗಳ ಹೆಸರನ್ನು ಬದಲಾಯಿಸಿ, ವಾಸ್ತವ ಘಟನೆಗಳ ಜೊತೆಗೆ ಕಲ್ಪನೆಯನ್ನೂ ಒಡಮೂಡಿಸಿಕೊಂಡು ಗುತ್ತಿನ ಮನೆಯ ಒಟ್ಟು ಚಿತ್ರಣವನ್ನು ತರಲಾಗಿದೆ. ಸಂಕಪ್ಪ ಹೆಗ್ಡೆಯವರ ಪಾತ್ರಚಿತ್ರಣವನ್ನು ಮಾಡುವುದಕ್ಕೆ ಮೊಗಸಾಲೆಯವರಿಗೆ ಪ್ರೇರಣೆ ದೊರಕಿದ್ದು ತಮ್ಮ ಮಿತ್ರ ಬೇಲಾಡಿ ಮಾರಣ್ಣ ಮಾಡರಿಂದ.

* ಸ್ವಾನುಭವವನ್ನೇ ಸಣ್ಣಕಥೆಯಾಗಿಸಿಕೊಳ್ಳುವ ಮೊಗಸಾಲೆಯವರ ಕಥಾ ಬರವಣಿಗೆಯ ಮೇಲೆ ಮೌಖಿಕ ಕಥಾ ಪರಂಪರೆಯ ಪ್ರಭಾವ ಕಂಡುಬರುತ್ತದೆ. ಮೊಗಸಾಲೆಯವರಿಗೆ ಇಂತಹ ಮೌಖಿಕ ಕಥಾ ಪರಂಪರೆಯ ಪರಿಚಯ ಅವರ ಸಂಬಂಧಿಕರಾದ ತಲೆಕ್ಕಳ ರಾಮ ಭಟ್(ವಿಟ್ಲದಜ್ಜ) ಎಂಬುವವರಿಂದ ಆಗಿದೆ. ಬಾಲ್ಯದಲ್ಲಿ ಅವರಿಂದ ಅದೆಷ್ಟೋ ಕಥೆಗಳನ್ನು ಮೊಗಸಾಲೆಯವರು ಕೇಳಿಸಿಕೊಂಡಿದ್ದಾರೆ. ಇಂತಹ ಕಥೆಗಳ ನಿರೂಪಣಾ ಶೈಲಿಯನ್ನು ಮೊಗಸಾಲೆಯವರು ತಮ್ಮ ರಚನೆಯ ಕಥೆಗಳಲ್ಲಿ ಅಳವಡಿಸಿಕೊಂಡಿದ್ದಾರೆ.

* ಮೊಗಸಾಲೆಯವರ ಸಾಹಿತ್ಯದಲ್ಲಿ ಉಡುಪಿ ಮಠದ ಚಿತ್ರಣ ಕಂಡುಬರುತ್ತದೆ. ಈ ಚಿತ್ರಣದ ಹಿನ್ನೆಲೆಯಲ್ಲಿ ಅವರ ಸ್ವಾನುಭವವಿದೆ. ಆಯುರ್ವೇದ ವೈದ್ಯಕೀಯ ಪದವಿಯನ್ನು ಪಡೆದುಕೊಳ್ಳುವುದಕ್ಕಾಗಿ ಮೊಗಸಾಲೆಯವರು ಉಡುಪಿ ಮಠದ ಆಶ್ರಯವನ್ನು ಪಡೆದುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ತಮ್ಮ ಅನುಭವಕ್ಕೆ ಬಂದ ವಿಚಾರಗಳನ್ನು ಸಾಹಿತ್ಯದಲ್ಲಿ ಒಡಮೂಡಿಸಿದ್ದಾರೆ.

* ಮೊಗಸಾಲೆಯವರ ಸಾಹಿತ್ಯದೊಳಗಡೆ ಪ್ರಾದೇಶಿಕ ಭಾಷೆಗಳಾದ ತುಳು, ಹವ್ಯಕ ಕನ್ನಡ, ಬ್ಯಾರಿ, ಬ್ರಾಹ್ಮಣ ತುಳು ಮೊದಲಾದ ಭಾಷೆಗಳ ಪದಗಳು, ಸಂಭಾಷಣೆ, ಗಾದೆಮಾತುಗಳು ಅಲ್ಲಲ್ಲಿ ಬಳಕೆಯಾಗಿವೆ. ಮೂರು ಕಾರಣಗಳನ್ನು ಇದರ ಹಿನ್ನೆಲೆಯಲ್ಲಿ ಗುರುತಿಸಬಹುದು. ಬಹುಭಾಷಿಕ ಪ್ರದೇಶವೊಂದರಲ್ಲಿ ನುಡಿಬೆರಕೆ ಹಾಗೂ ನುಡಿಜಿಗಿತಗಳು ಸಾಮಾನ್ಯ ಪ್ರಕ್ರಿಯೆಗಳಾಗಿರುತ್ತವೆ. ಕರಾವಳಿ ಪ್ರದೇಶಕ್ಕೆ ಸೇರಿದ ಮೊಗಸಾಲೆಯವರ ಮೇಲೆ ಬಹುಭಾಷೆಗಳ ಪ್ರಭಾವ

ಇರುವುದರಿಂದ ಅವರ ಸಾಹಿತ್ಯದಲ್ಲಿಯೂ ಅದು ವ್ಯಕ್ತಗೊಂಡಿದೆ ಎನ್ನುವುದು ಮೊದಲನೆಯ ಕಾರಣವಾಗಿದೆ. ಸಾಹಿತ್ಯ ರಚನೆಯು ಹೆಚ್ಚು ವಾಸ್ತವ ಎನಿಸಿಕೊಳ್ಳಬೇಕಾದರೆ ಸಾಹಿತ್ಯದೊಳಗಡೆ ಉಲ್ಲೇಖಗೊಳ್ಳುವ ಪ್ರದೇಶ ಮತ್ತು ಸಂಭಾಷಣೆ ಪರಸ್ಪರ ಹೊಂದಾಣಿಕೆಯಾಗುವಂತಿರಬೇಕು. ಇದು ಎರಡನೆಯ ಕಾರಣವಾಗಿದೆ. ಇಲ್ಲಿನ ಭಾಷೆಗಳ ಬಗ್ಗೆ, ಎರಡು ಭಿನ್ನ ಭಾಷೆಗಳ ಪದಗಳನ್ನು ತಮ್ಮ ಮನೋಧರ್ಮಕ್ಕೆ ತಕ್ಕಂತೆ ಬಳಸುವ ಇಲ್ಲಿನ ಜನರ ಬುದ್ಧಿಮತ್ತೆಯ ಬಗ್ಗೆ ಮೊಗಸಾಲೆಯವರಿಗೆ ಕುತೂಹಲ, ಅಚ್ಚರಿ ಮತ್ತು ಅಭಿಮಾನವಿದೆ. ಇದು ಬಹುಭಾಷೆಗಳ ಬಳಕೆಯ ಮೂರನೇ ಕಾರಣವಾಗಿದೆ.

* ಕರಾವಳಿ ಪ್ರದೇಶದಲ್ಲಿ ನಡೆದ ದಲಿತ ಚಳುವಳಿ, ಬೇರೆ ಬೇರೆ ಸಾಹಿತ್ಯಕ ಚಳುವಳಿಗಳು, ಏಕೀಕರಣ ಚಳುವಳಿ ಮೊದಲಾದವುಗಳ ಪ್ರಸ್ತಾಪ ಮೊಗಸಾಲೆಯವರ ಸಾಹಿತ್ಯದಲ್ಲಿ ಕಂಡುಬಂದಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಕರಾವಳಿ ಪ್ರದೇಶ ಮೊದಲಿನಿಂದಲೂ ಕೂಡಾ ವೈಚಾರಿಕವಾದ, ಸೈದ್ಧಾಂತಿಕವಾದ ವಿಚಾರ ಮಂಡನೆಯನ್ನು ಪ್ರಧಾನವಾಗಿರಿಸಿಕೊಂಡಿದೆಯೇ ಹೊರತು ಕ್ರಿಯಾತ್ಮಕವಾದ ನೆಲೆಯ ಹೋರಾಟಗಳಿಗೆ ಪ್ರಾಮುಖ್ಯತೆ ನೀಡಿಲ್ಲ ಎನ್ನುವುದು ಮೊದಲನೆಯ ಕಾರಣವಾಗಿದೆ. ಈ ಪ್ರದೇಶಕ್ಕೆ ನೇರವಾಗಿ ಸಂಬಂಧಿಸಿರದ ಹೋರಾಟಗಳ ಕುರಿತ ನಿರ್ಲಿಪ್ತತೆ ಇಲ್ಲಿಯ ಜನರ ಸಹಜ ಗುಣವಾಗಿದೆ. ಕರಾವಳಿ ಪ್ರದೇಶಕ್ಕೆ ಸೇರಿದ ಮೊಗಸಾಲೆಯವರಲ್ಲಿಯೂ ಈ ಬಗೆಯ ತಾಟಸ್ತ್ಯ ಧೋರಣೆ ಇರುವುದರಿಂದ ಕೆಲವು ಸಾಹಿತ್ಯಕ– ಸಾಮಾಜಿಕ ಚಳುವಳಿಗಳ ಪ್ರಸ್ತಾಪ ಅವರ ಸಾಹಿತ್ಯದಲ್ಲಿ ಕಂಡುಬಂದಿಲ್ಲ.

* ಮೊಗಸಾಲೆಯವರ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ನೈಜ ಸನ್ನಿವೇಶಗಳಿಂದ, ಕರಾವಳಿಯ ಮಹಿಳೆಯರಿಂದ ಪ್ರಭಾವಕ್ಕೊಳಗಾಗಿದೆ. 'ಚಾರಣ' ಕಥೆಯ ತುಂಬಕ್ಕೆ, 'ಒಳಗಿದ್ದವಳು(ನು)' ಕಥೆಯ ಅಚ್ಚುಮಕ್ಕ, 'ಮಾತು ಕತೆಯಾದ ಕತೆ' ಕಥೆಯ ಕಾವೇರಿ, 'ಸುಂದರಿಯ ಎರಡನೇ ಅವತಾರ' ಕಥೆಯ ಸುಂದರಿ, 'ಉಲ್ಲಂಘನೆ' ಕಾದಂಬರಿಯ ಕರ್ಗಿ ಇವರ ಬಂಡಾಯದ ಸನ್ನಿವೇಶಗಳು ಉಡುಪಿ ಹಾಗೂ ಕಾಂತಾವರ ಪ್ರದೇಶದಲ್ಲಿ ನಡೆದ ನೈಜ ಘಟನೆಗಳಾಗಿವೆ. 'ಅರ್ಥ' ಕಾದಂಬರಿಯ ಪುಟ್ಟಕ್ಕಳ ಪಾತ್ರವು ಮೊಗಸಾಲೆಯವರ ತಂದೆಯ ತಂಗಿಯಾಗಿರುವ ಪುಟ್ಟತ್ತೆಯವರ ವ್ಯಕ್ತಿತ್ವದ ಪ್ರೇರಣೆಗೊಳಗಾಗಿದೆ. ಮಹಿಳಾ ಸಮಾನತೆಯನ್ನು ಸಾರುವ ಲೀಲಾ ಮೇಡಮ್, ನತ್ತಲಾಬಾಯಿ ಮೊದಲಾದವರು ಕಾಂತಾವರದ ದಿಟ್ಟ ಮಹಿಳೆಯರ ಪ್ರತಿನಿಧಿಗಳಾಗಿದ್ದಾರೆ. ಮದ್ದಳೆಗಾರ್ತಿಯಾಗಿ ತೊಡಗಿಕೊಳ್ಳುವ ಸರಸ್ವತಿಯ ಪಾತ್ರಚಿತ್ರಣದ ಮೂಲಕ ವಿಟ್ಲ, ಕಾಸರಗೋಡು ಭಾಗದ ಮಹಿಳೆಯರಲ್ಲಿರುವ ಕಲಾಸಕ್ತಿಯನ್ನು ಪ್ರಸ್ತುತಪಡಿಸಲಾಗಿದೆ. 'ಉಲ್ಲಂಘನೆ' ಕಾದಂಬರಿಯುದ್ದಕ್ಕೂ ಗಮನ ಸೆಳೆಯುವ ಅಂಬಕ್ಕೆಯ ಪಾತ್ರವು ದಕ್ಷಿಣ ಕನ್ನಡ ಜಿಲ್ಲೆಯ ಗುತ್ತಿನ ಮನೆಯ ಹೆಣ್ಣುಮಗಳೊಬ್ಬಳ ವ್ಯಕ್ತಿತ್ವದ ಯಥಾವತ್ ಚಿತ್ರಣವಾಗಿದೆ. 'ಮುಖಾಂತರ' ಕಾದಂಬರಿಯು ಮೊಗಸಾಲೆಯವರ ಮನೆತನದ ಚಿತ್ರಣವಲ್ಲದಿದ್ದರೂ, ಇಲ್ಲಿ ಬರುವ ಪಾರ್ವತಕ್ಕ ಎನ್ನುವ ಪಾತ್ರಕ್ಕೆ ಮೊಗಸಾಲೆಯವರ ಹಿಂದಿನ ತಲೆಮಾರಿನ ಹೆಣ್ಣುಮಗಳನ್ನು ಸ್ಫೂರ್ತಿಯಾಗಿ ಇರಿಸಿಕೊಳ್ಳಲಾಗಿದೆ. ತಮ್ಮ ಪತ್ನಿ ಶ್ರೀಮತಿ ಪ್ರೇಮಾ ಮೊಗಸಾಲೆಯವರ ವಿಶಿಷ್ಟ ವ್ಯಕ್ತಿತ್ವವನ್ನೇ ಆಧಾರವಾಗಿಟ್ಟುಕೊಂಡು ಮೊಗಸಾಲೆಯವರು 'ನುಗ್ಗೆಗಿಡ' ಕಥೆಯ ಪ್ರೇಮಕ್ಕ ಪಾತ್ರವನ್ನು ರೂಪಿಸಿದ್ದಾರೆ. 'ಪ್ರಭುಸಮ್ಮಿತ' ಕಥೆಯ ಕರ್ಗಿ ಶೆಡ್ತಿಯ ಪಾತ್ರಚಿತ್ರಣ ಕಾಂತಾವರದ ಸಮೀಪದ ಗ್ರಾಮದ ಮಹಿಳೆಯೊಬ್ಬರಿಂದ ಪ್ರೇರೇಪಣೆ ಪಡೆದಿದೆ. ಕಾಂತಾವರಕ್ಕೆ ಹತ್ತಿರದ ಬೋಳ ಗ್ರಾಮದಲ್ಲಿ ೧೯೬೪ರಲ್ಲಿ ನಡೆದ ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು, ಕಲ್ಪನೆಯನ್ನೂ ಒಡಮೂಡಿಸಿ ಕರ್ಗಿ ಶೆಡ್ತಿಯ ಪಾತ್ರವನ್ನು ಹೆಣೆಯಲಾಗಿದೆ.

* ಮೊಗಸಾಲೆಯವರ ಸಾಹಿತ್ಯದೊಳಗಡೆ ಕಾಣಿಸಿಕೊಳ್ಳುವ ಧಾರ್ಮಿಕ ಸಂಘರ್ಷಕ್ಕೆ ವ್ಯಾಪಾರದ ಏಕಸ್ವಾಮ್ಯದ ಉದ್ದೇಶವು ಒಂದು ಪ್ರಮುಖ ಕಾರಣವಾಗಿರುತ್ತದೆ. ಇದನ್ನು ಸಮಕಾಲೀನ ಕರಾವಳಿ ಪ್ರದೇಶಕ್ಕೆ ಅನ್ವಯಿಸಿ ನೋಡಿದಾಗ ಇದು ನಿಜ ಎನ್ನುವುದು ಸ್ಪಷ್ಟವಾಗುತ್ತದೆ. ಕರಾವಳಿಯ ಬ್ಯಾರಿ ಜನಾಂಗದವರು ವ್ಯಾಪಾರವನ್ನೇ ಪ್ರಮುಖ ಜೀವನಾಧಾರವಾಗಿರಿಸಿಕೊಂಡವರು. ಕರಾವಳಿಯಲ್ಲಿ ನಡೆಯುವ ಕೆಲವು ಕೋಮುಗಲಭೆಗಳ ಹಿಂದೆ ವ್ಯಾಪಾರದ ಏಕಸ್ವಾಮ್ಯದ ಉದ್ದೇಶ ಇರುವುದು ಸ್ಪಷ್ಟ. ಆದರೆ ಜಾತಿಯ ದೃಷ್ಟಿಯಿಂದ ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲಿ ಬರುವ ಚಿತ್ರಣವು ನೈಜ ಎನಿಸುವುದಿಲ್ಲ. ಗುತ್ತಿನ ಮನೆಯ ಮೂಲದಾಳುಗಳಾದ ಕೊರಗು ಮತ್ತು ಕರ್ಗಿ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೂ ಗುತ್ತಿನ ಮನೆಯ ಯಜಮಾನ್ತಿಯಾಗಿರುವ ಅಂಬಕ್ಕೆಗೆ ಅಡುಗೆ ಮಾಡಿ ಬಡಿಸುತ್ತಾರೆ. ಕರಾವಳಿಯ ಗುತ್ತಿನ ಮನೆಗಳಲ್ಲಿ ಈ ರೀತಿಯ ಅವಕಾಶ ಇರಲಿಲ್ಲ. ಜಾತಿಗೆ ಸಂಬಂಧಪಟ್ಟ ನಿಯಮ– ನಿರ್ಬಂಧಗಳಿದ್ದವು ಎನ್ನುವುದು ಸ್ಪಷ್ಟ.

* ಕರಾವಳಿ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ದೊರೆತ ಸ್ಪಂದನೆ, ಗಾಂಧೀವಾದದ ಪ್ರಭಾವ ಮೊದಲಾದವುಗಳನ್ನು ಚಿತ್ರಿಸುವ ಸಂದರ್ಭದಲ್ಲಿ ಮೊಗಸಾಲೆಯವರು ವಾಸ್ತವಸತ್ಯಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಉದಾಹರಣೆಗೆ, ಮುಖಾಂತರ' ಕಾದಂಬರಿಯಲ್ಲಿ ಟೊಪ್ಪಿ ಶಂಭಟ್ಟ ಎನ್ನುವ ಪಾತ್ರವಿದೆ. ಈ ಪಾತ್ರಚಿತ್ರಣಕ್ಕೆ 'ಉಡುಪಿಯ ಗಾಂಧಿ' ಎಂದೇ ಹೆಸರುವಾಸಿಯಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಸಾಂತ್ಯಾರು ಅನಂತಪದ್ಮನಾಭ ಭಟ್ಟರ ಬದುಕು ಪ್ರೇರಣೆ ನೀಡಿದೆ. ಮಂಗಳೂರಿಗೆ ರಾಜಾಜಿಯವರ ಆಗಮನದ ಸಂದರ್ಭದಲ್ಲಿ ಇಲ್ಲಿನ ಕೆಲವು ಯುವಕರು ಹಾಗೂ ಪೋಲೀಸರ ನಡುವೆ ಘರ್ಷಣೆ ಉಂಟಾಗಿ, ಅದು ವೈಪರೀತ್ಯಕ್ಕೆ ಹೋದ ಸನ್ನಿವೇಶ 'ಮುಖಾಂತರ' ಕಾದಂಬರಿಯಲ್ಲಿದೆ. ಮಂಗಳೂರಿಗೆ ರಾಜಗೋಪಾಲಾಚಾರಿಯವರು ಬಂದಾಗ ಘರ್ಷಣೆ ಉಂಟಾದ ವಿಚಾರ ಎಲ್ಲಿಯೂ ದಾಖಲಾಗಿಲ್ಲ. ಅಲ್ಲದೆ ಕಾದಂಬರಿಯಲ್ಲಿ ಉಲ್ಲೇಖಗೊಂಡಿರುವಂತೆ, ರಾಜಾಜಿಯವರು ಮಂಗಳೂರಿನ ನೆಹರೂ ಮೈದಾನದಲ್ಲಿ ಭಾಷಣ ಮಾಡಿದ್ದರು. ಆದರೆ ವಾಸ್ತವವಾಗಿ ಮಂಗಳೂರಿನ ಸೆಂಟ್ರಲ್ ಮೈದಾನಕ್ಕೆ ಸ್ವಾತಂತ್ರ್ಯಾನಂತರ ನೆಹರೂ ಮೈದಾನ ಎನ್ನುವ ಹೆಸರು ಬಂದಿದೆ. ಈ ಚಿತ್ರಣ ಕಲ್ಪನಾಪ್ರಧಾನವಾಗಿದೆ.

* 'ಉಲ್ಲಂಘನೆ' ಕಾದಂಬರಿಯಲ್ಲಿ ಉಲ್ಲೇಖಗೊಂಡಿರುವಂತೆ, ಕರಾವಳಿ ಪ್ರದೇಶಕ್ಕೆ ಬ್ರಾಹ್ಮಣರಿಗಿಂತ ಮೊದಲು ವಲಸೆ ಬಂದ ಬಂಟ ಜನಾಂಗದವರು ಈ ಪ್ರದೇಶದಲ್ಲಿ ಬಲಿಷ್ಠರಾಗುತ್ತಾರೆ. ಜೈನಧರ್ಮವು ಪ್ರಚಾರಕ್ಕೆ ಬಂದಾಗ ಬಂಟರಲ್ಲಿ ಅನೇಕರು ಜೈನಧರ್ಮವನ್ನು ಒಪ್ಪಿಕೊಳ್ಳುತ್ತಾರೆ. ಕರಾವಳಿಯ ಇತಿಹಾಸವನ್ನು ಗಮನಿಸಿಕೊಂಡಾಗ ಇದು ಸತ್ಯ ಎನ್ನುವುದು ಸ್ಪಷ್ಟವಾಗುತ್ತದೆ. ಇದೇ ಕಾದಂಬರಿಯಲ್ಲಿ ಬಂದಿರುವ ಇನ್ನೊಂದು ಐತಿಹ್ಯದ ಪ್ರಕಾರ, ಒಂಬತ್ತುಕೆರೆ ಎನ್ನುವ ಪ್ರದೇಶದಲ್ಲಿದ್ದ ಜೈನರ ಕುಟುಂಬಗಳು ಮಂಜೇಶ್ವರದಾಚೆಗೆ ವಲಸೆ ಹೋಗಿ, ಪ್ರಸಿದ್ಧರಾದ ಕಾರಣದಿಂದ ಮಂಜೇಶ್ವರ ಪೇಟೆಯ ಒಂದು ಭಾಗಕ್ಕೆ 'ಬಂಗ್ರ ಮಂಜೇಶ್ವರ' ಎನ್ನುವ ಹೆಸರು ಬರುತ್ತದೆ. ಈ ಮಾಹಿತಿ ತಪ್ಪು. ೧೭ನೇ ಶತಮಾನದ ಹೊತ್ತಿಗಾಗಲೇ ಮಂಜೇಶ್ವರ ಪ್ರದೇಶದ ದಕ್ಷಿಣ ಭಾಗಕ್ಕೆ 'ಬಂಗರ(ಬಂಗ್ರ) ಮಂಜೇಶ್ವರ' ಎನ್ನುವ ಹೆಸರಿತ್ತು.

* ಕರಾವಳಿ ಪ್ರದೇಶದ ಕಲೆ, ನಂಬಿಕೆ, ಆಚರಣೆಗಳು, ಜಾನಪದ ಕ್ರೀಡೆಗಳಲ್ಲಿ ಆಗುತ್ತಿರುವ ಬದಲಾವಣೆಗಳು ಮೊಗಸಾಲೆಯವರ ಸಾಹಿತ್ಯದಲ್ಲಿವೆ. ನಾಗಾರಾಧನೆ, ಕಂಬಳ, ಯಕ್ಷಗಾನಗಳಲ್ಲಿ ಆಗುತ್ತಿರುವ ಬದಲಾವಣೆಗಳು ಮೊಗಸಾಲೆಯವರ ಸಣ್ಣಕಥೆ, ಕಾದಂಬರಿಗಳಲ್ಲಿ ಕಂಡುಬಂದಿವೆ. ಈ ರೀತಿಯ ಸ್ಥಿತ್ಯಂತರಗಳು ವಾಸ್ತವತೆಯ ಚಿತ್ರಣವಾಗಿದೆ.

ಡಾ। ನಾ. ಮೊಗಸಾಲೆಯವರು ಬರಹಗಾರರಾಗಿ ಇನ್ನೂ ಸಕ್ರಿಯರಾಗಿದ್ದಾರೆ. ಅವರ ೨೦೧೭ರವರೆಗಿನ ಪ್ರಕಟಿತ ಕೃತಿಗಳನ್ನು ಮಾತ್ರವೇ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ೨೦೧೭ರ ನಂತರ ಅವರ ಕೃತಿಗಳು ಪ್ರಕಟಗೊಳ್ಳುತ್ತಿದ್ದು, ವಿಮರ್ಶಕರು ಮತ್ತು ಓದುಗರ ಗಮನ ಸೆಳೆಯುತ್ತಿವೆ. ಆದ್ದರಿಂದ ಡಾ। ನಾ. ಮೊಗಸಾಲೆಯವರ ಕೃತಿಗಳನ್ನು ಆಧಾರವಾಗಿರಿಸಿಕೊಂಡು ಹಲವು ಆಯಾಮಗಳಲ್ಲಿ ಸಂಶೋಧನೆಯನ್ನು ನಡೆಸಲು ಮುಕ್ತ ಅವಕಾಶಗಳಿವೆ.

‘ಅನುಬಂಧ’ದಲ್ಲಿ ಆಕರ ಗ್ರಂಥಗಳು, ಪರಾಮರ್ಶನ ಗ್ರಂಥಗಳು, ಲೇಖನಗಳು, ಸಂದರ್ಶನ, ಉಪನ್ಯಾಸಗಳು, ಮಾಹಿತಿ ನೀಡಿದ ತಜ್ಞರು, ಮಾಹಿತಿ ಒದಗಿಸಿದ ಜಾಲತಾಣಗಳ ವಿವರಗಳನ್ನು ನೀಡಲಾಗಿದೆ. ಜೊತೆಗೆ ಮೊಗಸಾಲೆಯವರ ಕೆಲವು ಛಾಯಾಚಿತ್ರಗಳನ್ನು ಕೊಡಲಾಗಿದೆ.

ಆಕರ ಗ್ರಂಥಗಳು

- ತಿರುಮಲೇಶ್ವರ ಭಟ್ ಎನ್.(ಅನು.); ೨೦೧೮; The other face(‘ಮುಖಾಂತರ’ ಕಾದಂಬರಿಯ ಅನುವಾದ); ಮಣಿಪಾಲ್ ಯುನಿವರ್ಸಲ್ ಪ್ರೆಸ್.
- ನಾ. ಮೊಗಸಾಲೆ; ೨೦೦೨; ಅರ್ಥ; ಹೇಮಂತ ಸಾಹಿತ್ಯ, ಬೆಂಗಳೂರು.
- ನಾ. ಮೊಗಸಾಲೆ; ೧೯೮೨; ಅನಂತ; ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೦೩; ಅರುವತ್ತರ ತೇರು; ಅಭಿರುಚಿ ಪ್ರಕಾಶನ, ಮೈಸೂರು.
- ನಾ. ಮೊಗಸಾಲೆ ಮತ್ತು ಎನ್. ಜೋಗಿತ್ತಾಯ; ೧೯೬೪; ಆಶಾಂಕುರ; ಸಂಸ್ಕೃತಿ ಪ್ರಕಾಶನ, ಉಡುಪಿ.
- ನಾ. ಮೊಗಸಾಲೆ; ೨೦೦೩; ಇದಲ್ಲ ಇದಲ್ಲ; ಅಭಿರುಚಿ ಪ್ರಕಾಶನ, ಮೈಸೂರು.
- ನಾ. ಮೊಗಸಾಲೆ; ೨೦೦೬; ಇಹಪರದ ಕೊಳ; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೧೯೯೫; ಉಪ್ಪು; ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೦೮; ಉಲ್ಲಂಘನೆ; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೧೦; ಕಾಮನೆಯ ಬೆಡಗು; ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೧೯೯೭; ತೊಟ್ಟಿ; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೧೪; ದೇವರು ಮತ್ತೆ ಮತ್ತೆ; ದೇಸಿ ಪುಸ್ತಕ, ಬೆಂಗಳೂರು.
- ನಾ. ಮೊಗಸಾಲೆ; ೨೦೧೬; ಧಾತು; ಮನೋಹರ ಗ್ರಂಥ ಮಾಲಾ, ಧಾರವಾಡ.
- ನಾ. ಮೊಗಸಾಲೆ; ೧೯೯೯; ನೆಲದ ನೆರಳು; ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.
- ನಾ. ಮೊಗಸಾಲೆ; ೧೯೭೮; ಪಲ್ಲವಿ; ಜ್ಯೋತಿಷ್ಮತಿ ಪ್ರಕಾಶನ ಅಜ್ಜರಕಾಡು, ಉಡುಪಿ.
- ನಾ. ಮೊಗಸಾಲೆ; ೧೯೬೭; ಪುರೂರವ; ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ.
- ನಾ. ಮೊಗಸಾಲೆ; ೨೦೦೧; ಪಂಥ; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.
- ನಾ. ಮೊಗಸಾಲೆ; ೧೯೮೯; ಪ್ರಭವ; ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೧೪; ಮುಖಾಂತರ; ಮನೋಹರ ಗ್ರಂಥಮಾಲಾ, ಧಾರವಾಡ.
- ನಾ. ಮೊಗಸಾಲೆ; ಅಕ್ಟೋಬರ್, ೨೦೦೫; ಬಯಲ ಬೆಟ್ಟ; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೧೫; ಬಿಸಿಲ ಸಂಜೆಯ ಅನುಭಾವ; ಸಾಹಿತ್ಯ ಸುಗ್ಗಿ, ಬೆಂಗಳೂರು.

- ನಾ. ಮೊಗಸಾಲೆ; ೨೦೧೩; ಮೊಗಸಾಲೆ ಕಾದಂಬರಿ ಸಂಪುಟ– ೧; ಡಾ। ನಾ.ಮೊಗಸಾಲೆ, ಉಡುಪಿ.
- ನಾ. ಮೊಗಸಾಲೆ; ೨೦೧೪; ಮೊಗಸಾಲೆ ಕಾದಂಬರಿ ಸಂಪುಟ– ೨; ಸಾಹಿತ್ಯ ಸುಗ್ಗಿ, ಬೆಂಗಳೂರು.
- ನಾ. ಮೊಗಸಾಲೆ; ೨೦೧೫; ಮೊಗಸಾಲೆ ಕಾದಂಬರಿ ಸಂಪುಟ– ೩; ಜಾಗೃತಿ ಪ್ರಿಂಟರ್ಸ್, ಬೆಂಗಳೂರು.
- ನಾ. ಮೊಗಸಾಲೆ; ೧೯೮೩; ಮೊಗಸಾಲೆಯ ನೆನಪುಗಳು; ಸ್ನೇಹ ಪ್ರಕಾಶನ, ಉಡುಪಿ.
- ನಾ. ಮೊಗಸಾಲೆ; ೧೯೭೪; ವರ್ತಮಾನದ ಮುಖಗಳು; ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ.
- ನಾ. ಮೊಗಸಾಲೆ; ೨೦೧೪; ಸನ್ನಿಧಿಯಲ್ಲಿ ಸೀತಾಪುರ; ದೇಸಿ ಪುಸ್ತಕ, ಬೆಂಗಳೂರು.
- ನಾ. ಮೊಗಸಾಲೆ; ೨೦೦೭; ಸೀತಾಪುರದ ಕತೆಗಳು; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೧೫; ಸೀತಾಪುರದಲ್ಲಿ ಕತೆಗಳೇ ಇಲ್ಲ; ಸೃಜನ ಪ್ರಕಾಶನ, ಮಂಡ್ಯ.
- ನಾ. ಮೊಗಸಾಲೆ; ೨೦೧೧; ಸೀತಾಪುರದಲ್ಲಿ ಗಾಂಧೀಜಿ; ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೨೦೦೪; ಸುಂದರಿಯ ಎರಡನೇ ಅವತಾರ; ಸುಮುಖ ಪ್ರಕಾಶನ, ಬೆಂಗಳೂರು.
- ನಾ. ಮೊಗಸಾಲೆ; ೧೯೯೫; ಸ್ವಂತಕ್ಕೆ ಸ್ವಂತಾವತಾರ; ಅನನ್ಯ ಪ್ರಕಾಶನ, ಧಾರವಾಡ.
- ನಾ. ಮೊಗಸಾಲೆ; ೧೯೬೫; ಹಸಿರು ಬಿಸಿಲು; ಎ. ಎಂ. ಜಿ. ಸಾಹಿತ್ಯ ಪ್ರಕಾಶನ, ಉಡುಪಿ.
- ಶಶಿಧರ ಡಿ. ಆರ್.(ಅನು.); ೨೦೦೯; God’s own decree and other stories(‘ಸೀತಾಪುರದ ಕತೆಗಳು’ ಸಂಕಲನದ ಅನುವಾದ); ಸುಮುಖ ಪ್ರಕಾಶನ, ಬೆಂಗಳೂರು.

ಪರಾಮರ್ಶನ ಗ್ರಂಥಗಳು

- ಅಜಕ್ಕಳ ಗಿರೀಶ ಭಟ್; ೨೦೧೪; ಮೌನ ದನಿ; ಆಕೃತಿ ಆಶಯ ಪಬ್ಲಿಕೇಶನ್ಸ್, ಮಂಗಳೂರು.
- ಅರವಿಂದ ಚೊಕ್ಕಾಡಿ; ೨೦೦೩; ವಸ್ತು; ಕರ್ನಾಟಕ ಸಂಘ, ಪುತ್ತೂರು.
- ಅರುಣಕುಮಾರ್ ಎಸ್. ಆರ್. (ಸಂ.); ೨೦೧೯; ಕಾಂತಾಮರವಾದ ಕಾಂತಾವರ; ಕನ್ನಡ ಸಂಘ, ಕಾಂತಾವರ.
- ಅಶೋಕ ಟಿ. ಪಿ.; ೨೦೦೪; ಕುವೆಂಪು ಕಾದಂಬರಿ ಎರಡು ಅಧ್ಯಯನಗಳು; ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
- ಕಮಲಾ ಹೆಮ್ಮಿಗೆ (ಸಂ.); ೨೦೦೭; ಅಯಸ್ಕಾಂತಾವರ; ಸುಮುಖ ಪ್ರಕಾಶನ, ಬೆಂಗಳೂರು.
- ಕೇಶವ ಶರ್ಮ ಕೆ.; ೨೦೧೩; ಪಡು ಮೂಡು; ಸೃಷ್ಟಿ ಪ್ರಕಾಶನ, ಬೆಂಗಳೂರು.
- ಕೊಪ್ಪಾ ಎಸ್. ಕೆ.(ಸಂ.); ೨೦೦೪; ಅಲ್ಲಮಪ್ರಭು– ಚಿಂತನ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಖಂಡೋಬಾ ಪಿ. ಕೆ.; ೧೯೯೯; ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಗಣಪತಿ ರಾವ್ ಐಗಳ್ ಎಂ.; ೧೯೨೮; ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ; ಶಾರದಾ ಪ್ರೆಸ್, ಮಂಗಳೂರು.
- ಗಾಯತ್ರಿ ನಾವಡ; ೧೯೯೯; ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.
- ಗೋಪಾಲಕೃಷ್ಣ ಪ.(ನಿರೂ.); ೨೦೦೨; ಬಣ್ಣದ ಬದುಕು(ಕುರಿಯ ವಿಠಲ ಶಾಸ್ತ್ರಿ ಆತ್ಮಕಥನ); ಕರ್ನಾಟಕ ಸಂಘ, ಪುತ್ತೂರು.
- ಚಂದ್ರಶೇಖರ ನಂಗಲಿ; ೨೦೦೫; ಆಲಿಸಯ್ಯ ಮಲೆಯ ಕವಿ; ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ಚಿನ್ನಪ್ಪ ಗೌಡ ಕೆ.; ೨೦೦೩; ಸಂಸ್ಕೃತಿ ಸಿರಿ; ಮದಿಪು ಪ್ರಕಾಶನ, ಮಂಗಳ ಗಂಗೋತ್ರಿ.
- ಜನಾರ್ದನ ಭಟ್ ಬಿ.; ೨೦೦೭; ಉತ್ತರಾಧಿಕಾರ; ಹೇಮಾವತಿ ಪ್ರಕಾಶನ, ಮಂಗಳೂರು.
- ಜನಾರ್ದನ ಭಟ್ ಬಿ.; ೨೦೦೮; ಹಸ್ತಾಂತರ; ಹೇಮಾವತಿ ಪ್ರಕಾಶನ, ಮಂಗಳೂರು.
- ಜನಾರ್ದನ ಭಟ್ ಬಿ.; ೨೦೧೯; ಅನಿಕೇತನ; ಸ್ವಪ್ರಕಾಶನ.
- ಜನಾರ್ದನ ಭಟ್ ಬಿ.(ಸಂ.); ೨೦೧೮; ಮೊಗಸಾಲೆಗೆ ಪ್ರವೇಶ; ಸೃಜನ ಪ್ರಕಾಶನ ಮಂಡ್ಯ.
- ಜನಾರ್ದನ ಭಟ್ ಬಿ.(ಸಂ.); ೨೦೧೯; ಮೊಗಸಾಲೆ ಎಪ್ಪತ್ತೈದರ ಹೊತ್ತಿಗೆ; ಕನ್ನಡ ಸಂಘ ಕಾಂತಾವರ.
- ಜನಾರ್ದನ ಭಟ್ ಬಿ.(ಸಂ.); ೨೦೨೦; ಸಾಹಿತ್ಯದ ಬಯಲ ಬೆಟ್ಟ ಡಾ. ನಾ. ಮೊಗಸಾಲೆ; ದಕ್ಷಿಣ ಕನ್ನಡ ಸಾಹಿತ್ಯ

ಪರಿಷತ್ತು ಬೆಳ್ತಂಗಡಿ ತಾಲೂಕು ಘಟಕ.

- ತಿಪ್ಪೇರುದ್ರಸ್ವಾಮಿ ಎಚ್.(ಸಂ.); ೧೯೭೦;ಗಾಂಧೀ ವಿಚಾರ ಮಾರ್ಗ; ಗಾಂಧೀ ಭವನ, ಮೈಸೂರು.
- ದೀಪಾ ಫಡ್ಕೆ; ೨೦೧೬;ಲೋಕ ಸಂವಾದಿ; ಪಾಂಚಜನ್ಯ ಪಬ್ಲಿಕೇಷನ್ಸ್, ಬೆಂಗಳೂರು.
- ನಾಗಭೂಷಣಸ್ವಾಮಿ ಓ. ಎಲ್.; ೧೯೮೩;ವಿಮರ್ಶೆಯ ಪರಿಭಾಷೆ; ಅಭಿನವ, ಬೆಂಗಳೂರು.
- ನಾಗವೇಣಿ ಎಚ್.; ೧೯೯೯;ಗಾಂಧಿ ಬಂದ; ಲೋಹಿಯಾ ಪ್ರಕಾಶನ, ಬಳ್ಳಾರಿ.
- ನಿತಿನ್ ಎನ್. ಕೆ.; ೨೦೧೩; ಅಮೃತ ಸೋಮೇಶ್ವರರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ(ಅಪ್ರಕಟಿತ).
- ನಿತ್ಯಾನಂದ ಶೆಟ್ಟಿ ಅಂಪಾರು; ೨೦೦೨; ವೈದೇಹಿ ಕತೆಗಳಲ್ಲಿ ಪ್ರಾದೇಶಿಕ ಸಂಸ್ಕೃತಿ; ಕುಂದಾಪುರ ತಾಲೂಕು ಹನ್ನೆರಡನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೈಂದೂರು.
- ನೀಲಾವರ ಸುರೇಂದ್ರ ಅಡಿಗ; ೨೦೧೦;ಉಲ್ಲಂಘನೆ: ಸೀಮೋಲ್ಲಂಘನ; ರಜತ ಸಾಹಿತ್ಯ, ಶಿವಮೊಗ್ಗ.
- ಪುರುಷೋತ್ತಮ ಬಿಳಿಮಲೆ; ೧೯೯೦;ಕರಾವಳಿ ಜಾನಪದ; ಪ್ರಸಾರಾಂಗ, ಮಂಗಳ ಗಂಗೋತ್ರಿ.
- ಪ್ರತಾಪಚಂದ್ರ ಶೆಟ್ಟಿ ಹಳ್ನಾಡು; ೨೦೧೦;ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ; ಹೇಮಾವತಿ ಪ್ರಕಾಶನ, ಮಂಗಳೂರು.
- ಪ್ರಧಾನ್ ಗುರುದತ್ತ(ಅನು.); ೧೯೮೮; ಗಾಂಧೀವಾದದ ಶವಪರೀಕ್ಷೆ; ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು.
- ಪ್ರಸನ್ನ; ೨೦೧೫;ದೇಸಿ ಜೀವನ ಪದ್ಧತಿ; ಒಂಟಿದನಿ ಪ್ರಕಾಶನ, ಹೆಗ್ಗೋಡು.
- ಬರಗೂರು ರಾಮಚಂದ್ರಪ್ಪ; ೧೯೯೩;ಉಪಸಂಸ್ಕೃತಿ ಅಧ್ಯಯನ; ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಬರಗೂರು ರಾಮಚಂದ್ರಪ್ಪ; ೧೯೯೪;ಸಂಸ್ಕೃತಿ– ಉಪಸಂಸ್ಕೃತಿ; ಭೂಮಿ ಪ್ರಕಾಶನ, ಮೈಸೂರು.
- ಬಸವರಾಜ ಪುರಾಣಿಕ; ೨೦೦೬;ಅಲ್ಲಮಪ್ರಭು: ಬೆರಗು ಬೆಡಗು ಬೆಳಗು; ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಬೀದರ್.
- ಬೆಳಗೋಡು ರಮೇಶ ಭಟ್; ೨೦೧೩;ಮೊಗಸಾಲೆಯ ಮುಖಾಂತರ; ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.
- ಬೆಳಗೋಡು ರಮೇಶ ಭಟ್; ೨೦೧೭;ಕಾಂತಾವರದ ಕಾಂತಾರವ ಡಾ. ನಾ. ಮೊಗಸಾಲೆ; ಪಾಂಚಜನ್ಯ ಪಬ್ಲಿಕೇಶನ್ಸ್, ಬೆಂಗಳೂರು.
- ಮಹಾದೇವ ಕಣವಿ; ೧೯೯೪;ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು; ಪ್ರತಿಮಾ ಪ್ರಕಾಶನ, ಗುಳೇದಗುಡ್ಡ.
- ರಮೇಶ್ ಕೆ. ವಿ.; ೧೯೯೯;ತುಳುನಾಡಿನ ಇತಿಹಾಸ; ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.
- ರಮೇಶ ಜಿ. ಕೆ.; ೨೦೦೪;ಕಲ್ಲುಸಾರ; ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು.

- ರಹಮತ್ ತರೀಕೆರೆ; ೧೯೯೨; ಪ್ರತಿಸಂಸ್ಕೃತಿ; ಕ್ರೈಸ್ಟ್ ಕಾಲೇಜು, ಬೆಂಗಳೂರು.
- ರಹಮತ್ ತರೀಕೆರೆ; ೨೦೦೪; ಸಾಂಸ್ಕೃತಿಕ ಅಧ್ಯಯನ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ರಾಜಗೋಪಾಲ ಕ. ವೆಂ.; ೧೯೮೯; ತುಳುವರ ಆಚರಣೆಗಳಲ್ಲಿ ಕಲಾವಂತಿಕೆ; ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.
- ರಾಜಪ್ಪ ದಳವಾಯಿ; ೨೦೦೨; ಉಳುಮೆ; ಭಾಗ್ಯಶ್ರೀ ಎಂಟರ್‌ಪ್ರೈಸಸ್, ಮಂಗಳೂರು.
- ರಾಜಾರಾಮ ಹೆಗಡೆ; ೨೦೦೫; ಗತ– ಕಥನ (ರಾಷ್ಟ್ರೀಯ ಇತಿಹಾಸ ಮತ್ತು ಕನ್ನಡ ಜಗತ್ತು); ಆನಂದಕಂದ ಗ್ರಂಥಮಾಲೆ, ಚಿತ್ರದುರ್ಗ.
- ರಾಧಾಕೃಷ್ಣ ಕೆ. ಉಳಿಯತ್ತಡ್ಕ; ೨೦೧೦; ನೆಲದ ಧ್ಯಾನ; ಕೈರಳಿ ಪ್ರಕಾಶನ, ಕಾಸರಗೋಡು, ಕೇರಳ.
- ರಾಮಚಂದ್ರೇಗೌಡ ಹಿ.ಶಿ.(ಸಂ.); ೨೦೦೩; ಜಾನಪದ ತಲೆಮಾರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ವಿ. ಗ. ನಾಯಕ (ಸಂ.); ೨೦೦೪; ಮೊಗಸಾಲೆ ಒಲವು ನಿಲುವು; ಕನ್ನಡ ಸಂಘ, ಕಾಂತಾವರ.
- ವಿವೇಕ ರೈ ಬಿ. ಎ.; ೧೯೭೭; ತೌಳವ ಸಂಸ್ಕೃತಿ; ಸಹ್ಯಾದ್ರಿ ಪ್ರಕಾಶನ, ಮೈಸೂರು.
- ಶಿವರಾಮ ಕಾರಂತ; ನವೆಂಬರ್, ೨೦೧೯; ಕರ್ನಾಟಕದ ಜಾನಪದ ಕಲೆಗಳು; ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.
- ಶೇಖರ ಹೊಡೆನೂರು; ೨೦೨೧; ಕನ್ನಡ ಸಾಹಿತ್ಯ ಸಂಪದ; ಈಶು ರೇಶು ಪ್ರಕಾಶನ, ಹಾಸನ.
- ಶೈಲಾ ಯು.; ೨೦೧೩; ಪ್ರಾದೇಶಿಕತೆಯೂ ಕಲ್ಲು ಹೇಳುವ ಕಥೆಗಳೂ; ಶ್ರೀ ಬೆನಕ, ಮಂಗಳಗಂಗೋತ್ರಿ.
- ಸತ್ಯನಾರಾಯಣ ಭಟ್ಟ ಬಿ.; ೧೯೯೪; ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ; ಪ್ರಸಾರಾಂಗ, ಹಂಪಿ ವಿಶ್ವವಿದ್ಯಾನಿಲಯ.
- ಸತ್ಯನಾರಾಯಣ ಮಲ್ಲಿಪಟ್ಟಣ; ೧೯೯೯; ದಕ್ಷಿಣ ಕನ್ನಡದ ಕಾವ್ಯ ಮತ್ತು ಪ್ರಾದೇಶಿಕತೆ; ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ, ಕೊಣಾಜೆ.
- ಸದಾನಂದ ನಾರಾವಿ(ಸಂ.); ೨೦೧೮; ಬಿಳಲು ಬಿಟ್ಟ ಮರ; ಶ್ರೀರಾಮ ಪ್ರಕಾಶನ ಮಂಡ್ಯ.
- ಸಾತ್ವಿಕ್ ಎನ್. ವಿ.(ಸಂ.); ೨೦೧೦; ಸಂಸ್ಕೃತಿ ಜಾತ್ರೆ(ವಿಮರ್ಶಾ ಸಂಕಲನ); ಹೇಮಾವತಿ ಪ್ರಕಾಶನ, ಮಂಗಳೂರು.
- ಸಿದ್ದಣ್ಣ ಬಿ.; ೧೯೯೦; ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ; ಅನುಪಮ ಪ್ರಕಾಶನ, ಅಥಣಿ.
- ಸೀತಾಲಕ್ಷ್ಮೀ ಕರ್ಕಿಕೋಡಿ (ಸಂ.); ೨೦೧೪; ಉಲ್ಲಂಘನೆ ಆಕೃತಿ ಆಶಯ; ಸಂವಹನ, ಮೈಸೂರು.
- ಸುಮಾ ಚಂದ್ರಶೇಖರ್; ೨೦೧೯; ಸತ್ಯ ಪಥದ ನಿತ್ಯ ಸಂತ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

- ಸೂರ್ಯನಾಥ ಕಾಮತ್(ಸಂ.); ೧೯೮೦; ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ೩; ಗೀತಾ ಬುಕ್ ಹೌಸ್, ಮೈಸೂರು.
- ಸೂರ್ಯನಾಥ ಕಾಮತ್; ೧೯೯೬; ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು; ಬುರ್ಲಿ ಬಿಂದು ಮಾಧವ ಪ್ರತಿಷ್ಠಾನ, ಹುಬ್ಬಳ್ಳಿ.

ಲೇಖನಗಳು

- ಅಕ್ಷರ ಕೆ. ವಿ.; ಸೆಪ್ಟೆಂಬರ್– ಅಕ್ಟೋಬರ್ ೨೦೨೨; 'ಗಾಂಧಿ ಆತ್ಮಕಥನದ ಅಂತರ್ಯಾಮಿ'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಇರ್ಫಾನ್ ಹಬೀಬ್; ಜುಲೈ– ಆಗಸ್ಟ್ ೨೦೨೧; 'The evolution of Gandhi's thought'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಗೋಪಾಲಕೃಷ್ಣ ಗಾಂಧಿ; ಸೆಪ್ಟೆಂಬರ್– ಅಕ್ಟೋಬರ್ ೨೦೨೨; 'A moral compass called Gandhi'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಚಂದ್ರಶೇಖರ ನಂಗಲಿ; ೨೦೦೫; 'ಸ್ಥಳೀಯ ಸಂಸ್ಕೃತಿ ಹಾಗೂ ವಿಶ್ವಾತ್ಮಕ ಚೌಕಟ್ಟುಗಳು'; ಆಲಿಸಯ್ಯ ಮಲೆಯ ಕವಿ; ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ಜನಾರ್ದನ ಭಟ್ ಬಿ.; ೨೦೧೯; 'ನವಚಾರಿತ್ರಿಕತೆ ಮತ್ತು ಕನ್ನಡ ಕಾದಂಬರಿಗಳು'; ಚಿಂತನ ಬಯಲು ತ್ರೈಮಾಸಿಕ; ರೇಷ್ಮಾ ಜಿ. ಭಟ್(ಸಂ.).
- ಜಯರಾಮ ಕಾರಂತ; ೧೬ ಸೆಪ್ಟೆಂಬರ್ ೨೦೦೪; '60 ಶ್ರಾವಣ ಕಂಡ ಕನ್ನಡ ಕಟ್ಟೋಣದ ಮೊಗಸಾಲೆ'; ತರಂಗ ವಾರಪತ್ರಿಕೆ.
- ದೇ. ಜವರೇಗೌಡ; ೨೦೧೬; 'ನಾಟ್ಯ ಸಂಸ್ಕೃತಿ'; ತಾಂತ್ರಿಕ ಕನ್ನಡ; ಡಾ. ಅಶೋಕಕುಮಾರ ರಂಜೇರೆ, ಡಾ. ಕೆ. ವೈ. ನಾರಾಯಣ ಸ್ವಾಮಿ (ಸಂ.); ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನಟರಾಜ ಬೂದಾಳು ಎಸ್.; ೨೦೧೪; 'ಕಳೆದುಹೋದ ಚಹರೆಗಳ ಸ್ತಬ್ಧ– ಚಿತ್ರ'; ಸೀತಾಲಕ್ಷ್ಮೀ ಕರ್ಕಿಕೋಡಿ(ಸಂ.); ಉಲ್ಲಂಘನೆ ಆಕೃತಿ ಆಶಯ; ಸಂವಹನ, ಮೈಸೂರು.
- ನಂದಳಿಕೆ ಬಾಲಚಂದ್ರ ರಾವ್; ೦೩ ಸೆಪ್ಟೆಂಬರ್ ೧೯೯೫; 'ಹಳ್ಳಿಯಲ್ಲಿ ಅರಳಿದ ಬೆಳಕಿನ ಬದುಕು: ನಾ. ಮೊಗಸಾಲೆ'; ಸುಧಾ ವಾರಪತ್ರಿಕೆ.
- ನಾ. ಮೊಗಸಾಲೆ; ೦೪ ಮೇ ೨೦೧೫; 'ಆತ್ಮಸ್ಥೈರ್ಯವೇ ನನ್ನ ಸಾಹಿತ್ಯ ಕೃಷಿಗೆ ಕಾರಣ'; ಹೊಸದಿಗಂತ ದಿನಪತ್ರಿಕೆ.
- ನಿತ್ಯಾನಂದ ಬಿ. ಶೆಟ್ಟಿ; ೨೦೧೪; 'ತುಳುನಾಡಿನ ಸಾಕ್ಷ್ಯಚಿತ್ರ'; ಉಲ್ಲಂಘನೆ ಆಕೃತಿ ಆಶಯ; ಸೀತಾಲಕ್ಷ್ಮೀ ಕರ್ಕಿಕೋಡಿ(ಸಂ.); ಸಂವಹನ, ಮೈಸೂರು.
- ಪದ್ಮಪ್ರಸಾದ್ ಎಸ್. ಪಿ.; ೧೮ ಆಗಸ್ಟ್ ೨೦೧೩; 'ಮೊಗಸಾಲೆ ಕಣ್ಣಲ್ಲಿ ಅಲ್ಲಮನ ಕನಸು'; ಹೊಸದಿಗಂತ ದಿನಪತ್ರಿಕೆ.
- ಪದ್ಮಪ್ರಸಾದ್ ಎಸ್. ಪಿ.; ೦೩ ಮೇ ೨೦೧೫; 'ತಲೆಮಾರುಗಳ 'ಮುಖಾಂತರ' ಸಾಗುವ ಬಾಳಪಯಣ'; ಹೊಸದಿಗಂತ ದಿನಪತ್ರಿಕೆ.

- ಪದ್ಮರಾಜ ದಂಡಾವತಿ; ೧೪ ಅಕ್ಟೋಬರ್ ೨೦೧೨; 'ಕಾಂತಾವರ ಹಚ್ಚಿದ ಕನ್ನಡದ ದೀಪ'; ಪ್ರಜಾವಾಣಿ ದಿನಪತ್ರಿಕೆ.
- ಪ್ರಶಾಂತಕುಮಾರ್ ಮ. ನಾ.; ೩೧ ಡಿಸೆಂಬರ್ ೧೯೯೫; 'ಡಾ. ನಾ. ಮೊಗಸಾಲೆ ಸಾಹಿತ್ಯ ಮಗ್ಗುಲು'; ಕರ್ಮವೀರ ವಾರಪತ್ರಿಕೆ.
- ಬೀರೇಶ್ ಎನ್ ನೆಟಗಲ್ಲಣ್ಣನವರವ; ಜನವರಿ– ಫೆಬ್ರವರಿ ೨೦೨೧; 'ಗಾಂಧಿ ಚಿಂತನೆ ಹಾಗೂ ಇಂದಿನ ಪರಿಸ್ಥಿತಿ ಮತ್ತು ಸವಾಲುಗಳು'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಬೆಳುವಾಯಿ ರಾಜೇಶ್ ಶೆಟ್ಟಿ; ಜನವರಿ ೨೦೦೯; 'ಕಾಂತಾವರದಲ್ಲಿ ಕನ್ನಡದ ದೀಪ'; ಆಳ್ವಾಸ್ ಮಾಧ್ಯಮ.
- ಬೆಳುವಾಯಿ ಸೀತಾರಾಮ ಆಚಾರ್ಯ; ೦೪ ಜನವರಿ ೧೯೯೩; 'ಕಾಂತಾವರ ಕನ್ನಡ ಸಂಘ; ಕನ್ನಡ ಪರಿಚಾರಿಕೆಗೆ ಒಂದು ಮಾದರಿ'; ಸುಧಾ ವಾರಪತ್ರಿಕೆ.
- ಮಾಧವ ಕುಲಕರ್ಣಿ; ೦೭ ಜನವರಿ ೨೦೦೭; 'ಹೊಸ ದಿಕ್ಕಿನತ್ತ ಕೈಚಾಚಿದ ಕವನ ಸಂಕಲನ'; ಸಂಯುಕ್ತ ಕರ್ನಾಟಕ ದಿನಪತ್ರಿಕೆ.
- ರಂಗಸುತ; ೨೫ ನವೆಂಬರ್ ೨೦೦೯; 'ಶೆಟ್ಟಿ ಬಿಟ್ಟಲ್ಲೇ ಪಟ್ಟಣ'; ಮಂಗಳ ವಾರಪತ್ರಿಕೆ.
- ರಾಧಾಕೃಷ್ಣ ಕೆ. ಉಳಿಯತ್ತಡ್ಕ; ೦೧ ಮಾರ್ಚ್ ೧೯೯೬; 'ಮೊಗಸಾಲೆಯ ಚಿತ್ರಗಳು'; ಕಾಸರಗೋಡು ಮಿತ್ರ ಪತ್ರಿಕೆ.
- ರೂಪಾ ಹಾಸನ; ೦೬ ಮಾರ್ಚ್ ೨೦೧೧; 'ಜೀವಂತ ಒಳಗಣ್ಣು'; ಹೊಸದಿಗಂತ ದಿನಪತ್ರಿಕೆ.
- ರೇಮಂಡ್ ಎಫ್. ಕಾಮ್ಯೂ; ಸೆಪ್ಟೆಂಬರ್– ಅಕ್ಟೋಬರ್ ೨೦೨೧; 'Gandhi's leadership qualities'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ವಾಸುದೇವ ಶೆಟ್ಟಿ; ೩೦ ಜನವರಿ ೨೦೧೧; 'ಅಕ್ಷರ ವ್ಯಾಮೋಹಿಯ ಕಥನ ವೈಭವ'; ಕನ್ನಡ ಪ್ರಭ ದಿನಪತ್ರಿಕೆ.
- ವಾಸುದೇವ ಶೆಟ್ಟಿ; ೨೯ ಜನವರಿ ೨೦೧೨; 'ಗಾಂಧೀಜಿಯ ಹುಡುಕಾಟದಲ್ಲಿ'; ಕನ್ನಡ ಪ್ರಭ ದಿನಪತ್ರಿಕೆ.
- ವಿನಾಯಕ ಕರ್ಕಿಕೋಡಿ; 26 ಅಕ್ಟೋಬರ್ ೨೦೦೪; 'ಅಪೂರ್ವ ಸಾಧನೆಗಳ ಕಾಂತಾವರ ಕನ್ನಡ ಸಂಘ'; ಕರ್ಮವೀರ ವಾರಪತ್ರಿಕೆ.
- ವಿಭಾವರಿ ಭಟ್; ೧೯ ಫೆಬ್ರವರಿ ೨೦೧೨; 'ಮೊಗಸಾಲೆಯಲ್ಲಿ ದಕ್ಕಿದ ಗಾಂಧಿ'; ಪ್ರಜಾವಾಣಿ ದಿನಪತ್ರಿಕೆ.
- ಶಂಕರ ಉತ್ತೂರ; ಸೆಪ್ಟೆಂಬರ್– ಅಕ್ಟೋಬರ್ ೨೦೨೧; 'ಗಾಂಧೀಜಿಯ ಪ್ರಸ್ತುತತೆ'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಶಾಂತಾರಾಮ ಸೋಮಯಾಜಿ; ೨೭ ಸೆಪ್ಟೆಂಬರ್ ೨೦೦೩; 'ಕನ್ನಡ ಭವನವಾದ ಬಾರಾಡಿ ಬೀಡು ಮತ್ತು ಕಾಂತಾವರ'; ವಿಜಯ ಕರ್ನಾಟಕ ದಿನಪತ್ರಿಕೆ.

- ಶಿವರಾಮು ಕಾಡನಕುಪ್ಪೆ; ೨೦೦೩; 'ಕುವೆಂಪು ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ'; ಸಾಮಾಜಿಕ ನೆಲೆ; ಕನ್ನಡ ಪುಸ್ತಕ
  ಪ್ರಾಧಿಕಾರ ಬೆಂಗಳೂರು.
- ಶಿವಾನಂದ ಕಾರಂತ; ೧೭ ಆಗಸ್ಟ್ ೨೦೧೦; 'ಲೇಖಕರ ತಪಸ್ಸಿನ ಸೃಷ್ಟಿ– ಉಲ್ಲಂಘನೆ'; ಕುಂದಪ್ರಭ.
- ಶಿವಾನಂದ ಯು. ಪಿ.(ಸಂ.); ಆಗಸ್ಟ್ ೨೯, ೨೦೨೨; 'ಸಮರವೀರ ಕೆದಂಬಾಡಿ ರಾಮಯ್ಯ ಗೌಡರಿಗೆ ಹೆದರಿ ಪುತ್ತೂರಿನಿಂದಲೂ ಕಾಲ್ಕಿತ್ತ ಬ್ರಿಟೀಷರು'; ಸುದ್ದಿ ಬಿಡುಗಡೆ ಪುತ್ತೂರು ದಿನಪತ್ರಿಕೆ.
- ಶೋಭಾ ನಾಯಕ; ಮೇ, ೨೦೧೨; 'ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಆಳ'; ಹೊಸತು; ಜಿ. ರಾಮಕೃಷ್ಣ (ಸಂ.).
- ಸೂರ್ಯನಾಥ ಕಾಮತ್; ೧೯೭೭; 'ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ'; ಸುದರ್ಶನ– ಡಾ. ತೋನ್ಸೆ ಮಾಧವ ಅನಂತ ಪೈ ಅಭಿನಂದನ ಗ್ರಂಥ; ಅಡ್ಯನಡ್ಕ ಕೃಷ್ಣ ಭಟ್(ಸಂ.); ವಿಜಯ ಕಾಲೇಜ್ ಟ್ರಸ್ಟ್, ಮುಲ್ಕಿ.
- ಸೋಪನ್ ಜೋಷಿ; ಜನವರಿ– ಫೆಬ್ರವರಿ ೨೦೨೧; 'Gandhi for new generation'; ಅಮರ ಬಾಪು ಚಿಂತನ ದ್ವೈಮಾಸಿಕ ಪತ್ರಿಕೆ.
- ಹಾ. ಮಾ. ನಾಯಕ; ೨೭ ಆಗಸ್ಟ್ ೧೯೮೫; 'ನನ್ನ ಕವಿತೆಯೇ, ಹೋಗು– ಮನುಷ್ಯನ ಮಾತಾಗು'; ತರಂಗ ವಾರಪತ್ರಿಕೆ.
- ಹಾ. ಮಾ. ನಾಯಕ; ೦೬ ಜನವರಿ ೨೦೦೦; 'ಮೊಗಸಾಲೆಯವರ ವಿಚಾರಗಳು'; ಸುಧಾ ವಾರಪತ್ರಿಕೆ.
- ಹಾ. ಮಾ. ನಾಯಕ; ೦೨ ನವೆಂಬರ್ ೨೦೦೦; 'ಬೆಳ್ಳಿ ಬೆಳಕಲ್ಲಿ ಕನ್ನಡ ಸಂಘ'; ಸುಧಾ ವಾರಪತ್ರಿಕೆ.

ಸಂದರ್ಶನ

- ನಾ. ಮೊಗಸಾಲೆ; 'ಕವಿತಾ ನಿವಾಸ', ಕಾಂತಾವರ, ಕಾರ್ಕಳ ತಾಲೂಕು, ಉಡುಪಿ, ದ. ಕ.– ೫೭೪೧೨೯.
  ದಿನಾಂಕ: ೧೧ ಮಾರ್ಚ್ ೨೦೧೮, ೦೬ ಅಕ್ಟೋಬರ್ ೨೦೧೯, ೧೦ ಅಕ್ಟೋಬರ್ ೨೦೨೧.

ಉಪನ್ಯಾಸಗಳು

- ಅರುಣಕುಮಾರ್ ಎಸ್. ಆರ್., ಗುಡ್ಡೆಯಂಗಡಿ, ತೆಳ್ಳಾರು ರಸ್ತೆ, ಕಾರ್ಕಳ, ಉಡುಪಿ. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: 'ಮೊಗಸಾಲೆಯವರ ಬೃಹತ್ ಕಾದಂಬರಿಗಳು'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಮೂಡುಬಿದಿರೆಯ ಆಳ್ವಾಸ್ ಪದವಿ ಕಾಲೇಜಿನ ಕನ್ನಡ ವಿಭಾಗ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಆಳ್ವಾಸ್ ಪದವಿ ಕಾಲೇಜು, ಮೂಡುಬಿದಿರೆ. ದಿನಾಂಕ: ೩೧ ಜುಲೈ ೨೦೧೯.
- ಆಶಾದೇವಿ ಎಂ. ಎಸ್., 'ಸಮೀರ ಕೃಪಾ', ಬಸವೇಶ್ವರ ನಗರ, ಬೆಂಗಳೂರು. 'ಮೊಗಸಾಲೆಯವರ ಸಾಹಿತ್ಯ ವಿಹಾರ' ವಿಚಾರ ಸಂಕಿರಣದಲ್ಲಿ ವಿಚಾರ ಮಂಡನೆ. ವಿಷಯ: 'ಮೊಗಸಾಲೆಯವರ ಕಾದಂಬರಿಗಳು'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಕನ್ನಡ ವಿಭಾಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು ಇವುಗಳ ಜಂಟಿ ಆಯೋಜನೆಯಲ್ಲಿ ನಡೆದ ಕಾರ್ಯಕ್ರಮ. ಕನ್ನಡ ಸಭಾಂಗಣ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೨೭ ಆಗಸ್ಟ್ ೨೦೧೯.
- ಅಂಶುಮಾಲಿ(ಭಾಸ್ಕರ ಕನ್ಯಾನ), ಮಂಚಿಕೆರೆ, ಮಣಿಪಾಲ, ಉಡುಪಿ. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: 'ವಾಮನನಿಂದ ತ್ರಿವಿಕ್ರಮ: ಮೊಗಸಾಲೆ'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಕನ್ನಡ ವಿಭಾಗ, ಎಂ. ಜಿ. ಎಂ. ಕಾಲೇಜು, ಉಡುಪಿ ಇವುಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ರವೀಂದ್ರ ಮಂಟಪ, ಎಂ. ಜಿ. ಎಂ. ಕಾಲೇಜು, ಉಡುಪಿ. ದಿನಾಂಕ: ೨೫ ಜುಲೈ ೨೦೧೯.
- ಚಿಂತಾಮಣಿ ಕೊಡ್ಲೆಕೆರೆ, ಶ್ರೀ ಗುರುಚರಣಂ, ಬ್ಯಾಡರಹಳ್ಳಿ, ಬೆಂಗಳೂರು. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: 'ಮೊಗಸಾಲೆಯವರ ಕಾವ್ಯ'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಉಜಿರೆ ಎಸ್. ಡಿ. ಎಂ. ಕಾಲೇಜಿನ ಕನ್ನಡ ವಿಭಾಗ ಇವುಗಳ ಆಶ್ರಯದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಎಸ್. ಡಿ. ಎಂ. ಪದವಿ ಕಾಲೇಜು, ಉಜಿರೆ. ದಿನಾಂಕ: ೦೪ ಸೆಪ್ಟೆಂಬರ್ ೨೦೧೯.
- ನಾ. ಮೊಗಸಾಲೆ, 'ಕವಿತಾ ನಿವಾಸ', ಕಾಂತಾವರ, ಕಾರ್ಕಳ ತಾಲೂಕು, ಉಡುಪಿ, ದ. ಕ.– ೫೭೪೧೨೯. 'ಮೀಟ್ ದ ಆಥರ್' ಕಾರ್ಯಕ್ರಮದ ಪ್ರಧಾನ ಭಾಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯಗಳ ಜಂಟಿ ಆಯೋಜನೆಯಲ್ಲಿ ನಡೆದ 'ಮೀಟ್ ದ ಆಥರ್' ಶೀರ್ಷಿಕೆಯ ಮೊಗಸಾಲೆ ಸಾಹಿತ್ಯ ಸಂವಾದ ಕಾರ್ಯಕ್ರಮ. ಸ್ಥಳ: ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ. ದಿನಾಂಕ: ೨೭ ಅಕ್ಟೋಬರ್ ೨೦೧೭.

- ತಾಳ್ತಜೆ ವಸಂತಕುಮಾರ್, ‘ಸುಧಾಮ’ ಪಂಜಳ, ಉಪ್ಪಿನಂಗಡಿ, ಪುತ್ತೂರು ತಾಲೂಕು, ದ. ಕ. ‘ಮೊಗಸಾಲೆಯವರ ಸಾಹಿತ್ಯ ವಿಹಾರ’ ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ವಿಶೇಷ ಉಪನ್ಯಾಸ. ವಿಷಯ: ‘ಅಸ್ಮಿತೆಯ ಶೋಧದ ಬಯಲ ಬೆಟ್ಟ’. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಸರಕಾರಿ ಪ್ರಥಮದರ್ಜೆ ಕಾಲೇಜು, ಬೆಟ್ಟಂಪಾಡಿ ಇಲ್ಲಿಯ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಸರಕಾರಿ ಪ್ರಥಮದರ್ಜೆ ಕಾಲೇಜು, ಬೆಟ್ಟಂಪಾಡಿ. ದಿನಾಂಕ: ೧೮ ಸೆಪ್ಟೆಂಬರ್ ೨೦೧೯.
- ಪುಂಡಿಕ್ಯಾ ಗಣಪಯ್ಯ ಭಟ್, ‘ಪ್ರಾಂತ್ಯ’, ಕೊಡಂಗಲ್ಲು ಅಂಚೆ, ಮೂಡುಬಿದಿರೆ, ದ. ಕ. ‘ಮೊಗಸಾಲೆಯವರ ಸಾಹಿತ್ಯ ವಿಹಾರ’ ಸರಣಿ ಕಾರ್ಯಕ್ರಮದ ಅಭಿನಂದನಾ ಭಾಷಣ. ಮೊಗಸಾಲೆ ೭೫ ಅಭಿನಂದನಾ ಸಮಿತಿ ಹಾಗೂ ಮೂಡುಬಿದಿರೆ ಕೋ ಆಪರೇಟಿವ್ ಸರ್ವಿಸ್ ಬ್ಯಾಂಕ್ ಲಿಮಿಟೆಡ್ ಇವುಗಳ ಆಯೋಜನೆಯಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಎಂ. ಸಿ. ಎಸ್. ಬ್ಯಾಂಕ್, ಮೂಡುಬಿದಿರೆ. ದಿನಾಂಕ: ೨೮ ಸೆಪ್ಟೆಂಬರ್ ೨೦೧೯.
- ಬಸವರಾಜ ಕಲ್ಗುಡಿ, ೧೧೮೧, ೩ನೇ ಹಂತ, ೯ನೇ ಮುಖ್ಯರಸ್ತೆ, ರಾಜಾಜಿ ನಗರ, ಬೆಂಗಳೂರು. ‘ಮೊಗಸಾಲೆಯವರ ಸಾಹಿತ್ಯ ವಿಹಾರ’ ವಿಚಾರ ಸಂಕಿರಣದಲ್ಲಿ ವಿಚಾರ ಮಂಡನೆ. ವಿಷಯ: ‘ಮೊಗಸಾಲೆಯವರ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯ ಸಂದರ್ಭ’. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಕನ್ನಡ ವಿಭಾಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು ಇವುಗಳ ಜಂಟಿ ಆಶ್ರಯದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಕನ್ನಡ ಸಭಾಂಗಣ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೨೭ ಆಗಸ್ಟ್ ೨೦೧೯.
- ಬೆಳಗೋಡು ರಮೇಶ ಭಟ್, ‘ಭಾಗೀರಥಿ’, ಇಂದ್ರಾಳಿ ದೇವಸ್ಥಾನ ರಸ್ತೆ, ಕುಂಜಿಬೆಟ್ಟು ಅಂಚೆ, ಉಡುಪಿ. ‘ಮೊಗಸಾಲೆಯವರ ಸಾಹಿತ್ಯ ವಿಹಾರ’ ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: ‘ವಿದ್ಯಾರ್ಥಿಗಳಿಗೆ ಮೊಗಸಾಲೆ ಓದಿನ ಪ್ರಸ್ತುತತೆ’. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಮುಲ್ಕಿ ಸುಂದರ ರಾಮ ಶೆಟ್ಟಿ ಪ್ರಥಮದರ್ಜೆ ಕಾಲೇಜು, ಶಿರ್ವ ಇವುಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಮುಲ್ಕಿ ಸುಂದರ ರಾಮ ಶೆಟ್ಟಿ ಪ್ರಥಮದರ್ಜೆ ಕಾಲೇಜು ಸಭಾಂಗಣ, ಶಿರ್ವ. ದಿನಾಂಕ: ೧೬ ಆಗಸ್ಟ್ ೨೦೧೯.
- ಮಾಧವ ಮೂಡುಕೊಣಾಜೆ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು, ದ. ಕ. ‘ಮೀಟ್ ದ ಆಥರ್’ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: ‘ಡಾ। ನಾ. ಮೊಗಸಾಲೆಯವರ ಸಾಹಿತ್ಯ ಮತ್ತು ಸಂಘಟನೆ’. ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಮೊಗಸಾಲೆಯವರ ಸಾಹಿತ್ಯ ಸಂವಾದ ಕಾರ್ಯಕ್ರಮ. ಸ್ಥಳ: ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ. ದಿನಾಂಕ: ೨೭ ಅಕ್ಟೋಬರ್ ೨೦೧೭.

- ಯೋಗೀಶ್ ಕೈರೋಡಿ, ಕನ್ನಡ ಉಪನ್ಯಾಸಕರು, ಆಳ್ವಾಸ್ ಕಾಲೇಜು, ಮೂಡುಬಿದಿರೆ, ದ. ಕ. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: 'ಮೊಗಸಾಲೆಯವರ ಆತ್ಮಕಥನ ಬಯಲ ಬೆಟ್ಟ'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ಉಜಿರೆ ಎಸ್. ಡಿ. ಎಂ. ಕಾಲೇಜಿನ ಕನ್ನಡ ವಿಭಾಗ ಇವುಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ಎಸ್. ಡಿ. ಎಂ. ಪದವಿ ಕಾಲೇಜು, ಉಜಿರೆ. ದಿನಾಂಕ: ೦೪ ಸೆಪ್ಟೆಂಬರ್ ೨೦೧೯.
- ರವಿಶಂಕರ್ ಜಿ. ಕೆ., ಕೆದಂಬಾಡಿ ಮನೆ, ಪಾಣಾಜೆ ಅಂಚೆ, ಪುತ್ತೂರು, ದ. ಕ. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಲಾದ ಉಪನ್ಯಾಸ. ವಿಷಯ: 'ಡಾ। ನಾ. ಮೊಗಸಾಲೆಯವರ ಕಾದಂಬರಿಗಳು'. ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ವಿವೇಕಾನಂದ ಕಾಲೇಜು, ಪುತ್ತೂರು ಇಲ್ಲಿನ ಕನ್ನಡ ವಿಭಾಗ ಮತ್ತು ಐಕ್ಯುಎಸಿ ಘಟಕ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ವಿವೇಕಾನಂದ ಕಾಲೇಜು, ನೆಹರು ನಗರ, ಪುತ್ತೂರು. ದಿನಾಂಕ: ೧೪ ಸೆಪ್ಟೆಂಬರ್ ೨೦೧೯.
- ಶ್ರೀಧರ ಎಚ್. ಜಿ., ಪರೀಕ್ಷಾಂಗ ಕುಲಸಚಿವರು, ವಿವೇಕಾನಂದ ಕಾಲೇಜು(ಸ್ವಾಯತ್ತ), ನೆಹರು ನಗರ, ಪುತ್ತೂರು, ದ. ಕ. 'ಮೊಗಸಾಲೆಯವರ ಸಾಹಿತ್ಯ ವಿಹಾರ' ಸರಣಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ, ಮೊಗಸಾಲೆ ೭೫ ಅಭಿನಂದನಾ ಸಮಿತಿ, ಕಾಂತಾವರ ಹಾಗೂ ವಿವೇಕಾನಂದ ಕಾಲೇಜು, ಪುತ್ತೂರು ಇಲ್ಲಿನ ಕನ್ನಡ ವಿಭಾಗ ಮತ್ತು ಐಕ್ಯುಎಸಿ ಘಟಕ ಇವುಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮ. ಸ್ಥಳ: ವಿವೇಕಾನಂದ ಕಾಲೇಜು, ನೆಹರು ನಗರ, ಪುತ್ತೂರು. ದಿನಾಂಕ: ೧೪ ಸೆಪ್ಟೆಂಬರ್ ೨೦೧೯.

ಮಾಹಿತಿ ನೀಡಿದ ತಜ್ಞರು

- ಜನಾರ್ದನ ಭಟ್ ಬಿ., ವಿಮರ್ಶಕರು ಹಾಗೂ ಮೊಗಸಾಲೆಯವರ ಆಪ್ತರು, 'ಅಕ್ಷರ', ದೇವಸ್ಥಾನ ರಸ್ತೆ, ಬೆಳ್ಮಣ್ಣು ಅಂಚೆ, ಉಡುಪಿ, ದ. ಕ.– ೫೭೬೧೧೧. ಮೊ. ಸಂ.– ೯೪೮೧೧೪೫೭೭೫.

- ಧನಂಜಯ ಕುಂಬ್ಳೆ, ಸಹಾಯಕ ಪ್ರಾಧ್ಯಾಪಕರು, ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಾಜೆ, ದ. ಕ.– ೫೭೪೧೧೯. ಮೊ. ಸಂ.– ೯೪೪೮೯೧೧೯೦.

- ಬೆಳಗೋಡು ರಮೇಶ ಭಟ್, ವಿಮರ್ಶಕರು ಹಾಗೂ ಮೊಗಸಾಲೆಯವರ ಆಪ್ತರು, 'ಭಾಗೀರಥಿ', ಇಂದ್ರಾಳಿ ದೇವಸ್ಥಾನ ರಸ್ತೆ, ಕುಂಜಿಬೆಟ್ಟು ಅಂಚೆ, ಉಡುಪಿ– ೫೭೬೧೦೨. ಮೊ. ಸಂ.– ೯೩೪೧೯೧೮೨೧.

- ಮನೋಹರ ಪ್ರಸಾದ್, ಹಿರಿಯ ಪತ್ರಕರ್ತರು, ಉದಯವಾಣಿ ದಿನಪತ್ರಿಕೆ, ಮಣಿಪಾಲ, ಉಡುಪಿ– ೫೭೬೧೦೪. ಮೊ. ಸಂ.– ೯೮೪೨೪೩೨೦೭.

- ಸದಾನಂದ ನಾರಾವಿ, ಬರಹಗಾರರು ಹಾಗೂ ಮೊಗಸಾಲೆಯವರ ಆಪ್ತರು, 'ಸೂರ್ಯದತ್ತ' ಕೃಪಾ, ಮಾಸ್ತಿಕಟ್ಟೆ ವನಭೋಜನ, ತೋಡಾರು, ಮೂಡುಬಿದಿರೆ, ದ. ಕ.– ೫೭೪೨೨೭. ಮೊ. ಸಂ.– ೯೦೦೮೯೭೮೩೬೬.

ಮಾಹಿತಿ ಒದಗಿಸಿದ ಜಾಲತಾಣಗಳು

- www.collinsdictionary.com
  ಲಿಂಕ್: www.collinsdictionary.com/dictionary/english/regionalism
- www.dictionary.cambridge.org
  ಲಿಂಕ್: www.dictionary.cambridge.org/dictionary/english/regionalism
- www.yourarticlelibrary.com
  ಲಿಂಕ್: www.yourarticlelibrary.com/society/indian-society/regionalism-definitions-charecteristics-and-types-of-regionalism/47359
- www. bookbrahma.com
  ಲಿಂಕ್: www.bookbrahma.com/authors-list/

ಛಾಯಾಚಿತ್ರಗಳು

- ಮೊಗಸಾಲೆಯವರಿಗೆ ದೊರೆತ ಪ್ರಶಸ್ತಿಗಳು
- ಮೊಗಸಾಲೆಯವರಿಂದ ಸ್ಥಾಪನೆಗೊಂಡ ಸಂಘ– ಸಂಸ್ಥೆಗಳು